ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ಅಕ್ಟೋಬರ್ 14, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 152 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999



**ಲೋಕಕಲಾ ಯಾತ್ರಾ** ಶುಕ್ರವಾರ ದಾವಣಗೆರೆ ಎಸ್.ಬಿ.ಸಿ. ಕಾಲೇಜು ಸಭಾಂಗಣದಲ್ಲಿ 'ಲೋಕಕಲಾ ಯಾತ್ರಾ' (ವರ್ಣ ರಂಜಿತ ಮತ್ತು ರೋಮಾಂಚಕ ಜಾನಪದ ನೃತ್ಯಗಳ ಪ್ರದರ್ಶನ) ಕಾರ್ಯಕ್ರಮದಲ್ಲಿ ಕಲಾವಿದರಿಂದ ನೃತ್ಯ ಪ್ರದರ್ಶನ.

# ರಾಜ್ಯದಲ್ಲಿ ಐಟಿ ದಾಳಿ: ಭಾರೀ ಹಣ ವಶ

## ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಗಳ ಜೊತೆ ನಂಟು

ಬೆಂಗಳೂರು, ಅ.13 - ಪಂಚ ರಾಜ್ಯ ಚುನಾವಣೆಗಳು ಘೋಷಣೆ ಯಾದ ಬೆನ್ನಲ್ಲೇ, ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಸಕ್ರಿಯರಾಗಿದ್ದು, ಭಾರೀ ಪ್ರಮಾಣದ ಹಣ ವಶಕ್ಕೆ ಪಡೆದಿದ್ದಾರೆ.

ರಾಜ್ಯದ ಪ್ರಮುಖ ರಾಜಕಾರಣಿ ಪುತ್ರನೂ ಸೇರಿದಂತೆ ಹಲವು ಗುತ್ತಿಗೆದಾರರು ಮತ್ತು ಮಾಜಿ ಪಾಲಿಕೆ ಸದಸ್ಯರನ್ನು ಹಣಕ್ಕೆ ಸಂಬಂಧಿ ಸಿದಂತೆ ಐಟಿ ಅಧಿಕಾರಿಗಳು ವಶಕ್ಕೆ ತೆಗೆದು ಕೊಂಡು ವಿಚಾರಣೆ ನಡೆಸಿದ್ದಾರೆ.

ಕರ್ನಾಟಕದಿಂದ ತೆಲಂಗಾಣ ರಾಜ್ಯ ವಿಧಾನಸಭಾ ಚುನಾವಣಾ ವೆಚ್ಚಕ್ಕಾಗಿ ಮೊದಲ ಕಂತಿನಲ್ಲಿ ಹೋಗಿದ್ದ ಹಣವನ್ನು ಹೈದರಾಬಾದ್‌ನಗರಲ್ಲಿ ಆದಾಯ ತೆರಿಗೆ (ಐ.ಟಿ) ಅಧಿಕಾರಿಗಳು ವಶಕ್ಕೆ ತೆಗೆದುಕೊಂಡಿದ್ದರು.




ಅಲ್ಲಿ ದೊರೆತ ಸುಳಿವಿನ ಮೇರೆಗೆ ಚೆನ್ನೈನಿಂದ ಆಗಮಿಸಿದ್ದ ಐ.ಟಿ. ಅಧಿಕಾರಿಗಳು ಕಳೆದ ಎರಡು ದಿನಗಳಿಂದ ರಾಜಧಾನಿ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ದಾಳಿ ನಡೆಸಿ ಕೋಟ್ಯಾಂತರ ರೂಪಾಯಿ ಹಾಗೂ ಇನ್ನಿತರೆ ದಾಖಲೆಗಳನ್ನು ಪತ್ತೆ ಮಾಡಿದ್ದಾರೆ.

ಸುಮಾರು 200 ಅಧಿಕಾರಿಗಳ ತಂಡವು ಶೋಧ ಕಾರ್ಯ ನಡೆಸಿದ್ದು, 26 ಸ್ಥಳಗಳಲ್ಲಿ ಪರಿಶೀಲನೆ ಮುಂದುವರೆಸಿದ್ದಾರೆ. ಸಾಕಷ್ಟು ಉದ್ದಿಮೆಗಳಿಂದ ಹಣ ವರ್ಗಾವಣೆಯಾದ ಮಾಹಿತಿ ಲಭ್ಯವಾಗಿದೆ.

ಕಳೆದ 1 ವಾರದಿಂದ ದೆಹಲಿ, ಹೈದರಾಬಾದ್, ಗೋವಾ ಹಾಗೂ ಕರ್ನಾಟಕದ 40 ಹಿರಿಯ ಅಧಿಕಾರಿಗಳ ತಂಡ ಇಲ್ಲಿಯೇ ಬಿಡಾರ ಹೂಡಿದ್ದು ಗುತ್ತಿಗೆದಾರರು, ರಿಯಲ್ ಎಸ್ಟೇಟ್ ಉದ್ಯಮಿಗಳು, ಕೈಗಾರಿಕೋದ್ಯಮಿಗಳು ಹಾಗೂ ಆಯ್ದ ಚಿನ್ನದ ವ್ಯಾಪಾರಿಗಳ ಚಲನವಲನದ ಮೇಲೆ ಕಣ್ಣಿಟ್ಟಿದ್ದು, ನಿನ್ನೆಯಿಂದ ಅವರ ಮನೆ, ಕಚೇರಿ ಹಾಗೂ ಅನಾಮಧೇಯ ಕೇಂದ್ರಗಳ ಮೇಲೆ ದಾಳಿ ನಡೆಸಲಾಗಿದೆ. ಕೋಟ್ಯಾಂತರ ರೂ. ಜತೆಗೆ ಕೆಲವು ಮಹತ್ವದ ಆಸ್ತಿ-ಪಾಸ್ತಿ ದಾಖಲೆಗಳನ್ನು (4ನೇ ಪುಟಕ್ಕೆ)

# ಕೇಂದ್ರ, ನೆರೆ ರಾಜ್ಯಗಳಿಂದ ವಿದ್ಯುತ್ ಖರೀದಿಗೆ ತೀರ್ಮಾನ



ಬೆಂಗಳೂರು, ಅ.13 - ರಾಜ್ಯದಲ್ಲಿ ತಲೆದೋರಿರುವ ವಿದ್ಯುತ್ ಕ್ಷಾಮ ನಿವಾರಣೆಗೆ ಕೇಂದ್ರ ಹಾಗೂ ನೆರೆಯ ರಾಜ್ಯಗಳಿಂದ ಹೆಚ್ಚುವರಿ ವಿದ್ಯುತ್ ಖರೀದಿಸಲು ಸರ್ಕಾರ ತೀರ್ಮಾನಿಸಿದೆ.

ಹೆಚ್ಚುವರಿ ವಿದ್ಯುತ್ ಲಭ್ಯವಿರುವ ರಾಜ್ಯಗಳಿಂದ ಖರೀದಿ ಮಾಡಲು ಮಾತುಕತೆ ನಡೆಸಿ ದರ ನಿಗದಿ ಬಗ್ಗೆ ಸಂಪುಟಕ್ಕೆ ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದ್ದಾರೆ. ಮಳೆ ಕಡಿಮೆಯಾಗುವುದರಿಂದ ಹಾಗೂ ಬೇಸಿಗೆ ರೀತಿಯಲ್ಲಿ ವಿದ್ಯುತ್ತಿಗೆ ಬೇಡಿಕೆ ಹೆಚ್ಚಾಗಿದೆ. ವಿದ್ಯುತ್ ಉತ್ಪಾ ದನೆ ಕಡಿಮೆಯಾಗುತ್ತಿದ್ದು, ಬೇಡಿಕೆ ಹೆಚ್ಚಾಗುತ್ತಿದೆ ಎಂದರು.

ಗರಿಷ್ಠ ವಿದ್ಯುತ್ ಬೇಡಿಕೆ 15 ಸಾವಿರದಿಂದ 16 ಸಾವಿರ ಮೆಗಾ ವ್ಯಾಟ್ ಗೆ ತಲುಪಿದೆ. ಕಳೆದ ವರ್ಷ ಇದೇ ಅವಧಿಗೆ 9 ಸಾವಿರದಿಂದ 10 ಸಾವಿರ ಮೆ.ವಾ. ಇತ್ತು. ಬೇಡಿಕೆ ಹೆಚ್ಚಾಗಿರುವುದರಿಂದ ತೊಂದರೆಯಾಗಿದೆ. ವಿದ್ಯುತ್ ಅನ್ನು ಹೊರಗಿನಿಂದ ಹೇಗೆ ಖರೀದಿಸುವುದು ಎಂದು ಸಭೆಯಲ್ಲಿ ಚರ್ಚಿಸಲಾಗಿದೆ ಎಂದರು. ವಿದ್ಯುತ್ ಉತ್ಪಾದನೆ ಮಾಡುವವರು ಸರ್ಕಾರಕ್ಕೆ ಮಾರಾಟ ಮಾಡಬೇಕು. ಬೇರೆಲ್ಲಿಯೂ ಮಾರಬಾರದೆಂದು ನಿನ್ನೆ ಆದೇಶವನ್ನೂ ಮಾಡಲಾಗಿದೆ ಎಂದು ತಿಳಿಸಿದರು.

ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂದು ಬಿಜೆಪಿ ಆರೋಪಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಬಿಜೆಪಿಯವರು ಹೇಳಿದ್ದಕ್ಕೆಲ್ಲಾ ಉತ್ತರ ನೀಡಲು ಆಗುವುದಿಲ್ಲ. ಅವರು ರಾಜಕೀಯವಾಗಿ ಮಾತನಾಡುತ್ತಾರೆ ಎಂದರು.

ವಸ್ತುಸ್ಥಿತಿ ಅವರಿಗೆ ತಿಳಿದಿದೆಯೇ. ಮಳೆ ಇಲ್ಲದೆ ಬರಗಾಲ ಬಂದು ತೊಂದರೆಯಾಗಿದೆ. ಆದರೂ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. ಅವರು ಹೇಳಿದಂತೆ ಸಂಪೂರ್ಣ ಲೋಡ್ ಶೆಡ್ಡಿಂಗ್ ಆಗಿಲ್ಲ. ಮೂರು ಫೇಸ್‌ನಲ್ಲಿ 7 ಗಂಟೆ ವಿದ್ಯುತ್ ನೀಡಬೇಕೆಂದಿರುವುದನ್ನು ಕೊಡಲು ಆಗುತ್ತಿಲ್ಲ ಎಂಬ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ ಎಂದರು.

# ಗಣಪತಿ ಮೆರವಣಿಗೆ ಗಲಾಟೆ

## ಹಿಂದೂ ಸಂಘಟನೆ ಮುಖಂಡರ ಪ್ರತಿಭಟನೆ

ದಾವಣಗೆರೆ, ಅ.13- ನಗರದ ಬಸವರಾಜ ಪೇಟೆಯ ಗಣಪತಿಯ ಮೆರವಣಿಗೆಯಲ್ಲಿ ಗಲಾಟೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಬಿಜೆಪಿ ಹಾಗೂ ಹಿಂದೂ ಸಂಘಟನೆ ಮುಖಂಡರು ಬಡಾವಣೆ ಪೊಲೀಸ್ ಠಾಣೆ ಬಳಿ ಬೃಹತ್ ಪ್ರತಿಭಟನೆ ನಡೆಸಿದರು.

**ಅಜಾದ್ ನಗರ ಠಾಣೆ ಸಿಪಿಐ ಅಮಾನತ್ತಿಗೆ, ಆರೋಪಿಗಳ ಮೇಲೆ ಕ್ರಮಕ್ಕೆ ಒತ್ತಾಯ**

ಆಜಾದ್‌ನಗರ ಠಾಣೆಯ ಸಿಪಿಐ ಅವರನ್ನು ಅಮಾನತ್ತು ಮಾಡಬೇಕು, ಆರೋಪಿಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಎಸ್ಪಿ ಉಮಾ ಪ್ರಶಾಂತ್ ಅವರಿಗೆ ಒತ್ತಾಯಿಸಿದರು.

ಗಣಪತಿ ವಿಸರ್ಜನೆ ವೇಳೆ ಡಿಜೆ ಹಾಕಿದ್ದಕ್ಕೆ ಅನ್ಯ ಕೋಮಿನವರು ವಿರೋಧ ವ್ಯಕ್ತಪಡಿಸಿದ್ದರು. ಈ ವೇಳೆ ಬಸವರಾಜ ಪೇಟೆಯಲ್ಲಿ ಹಿಂದೂ ಮತ್ತು ಅನ್ಯ ಕೋಮಿನ ಜನರ ಮಧ್ಯೆ ಗಲಾಟೆ ನಡೆದಿತ್ತು. ಗಲಾಟೆಯಲ್ಲಿ ಹಿಂದೂ ಯುವಕರ ಮೇಲೆ ಹಲ್ಲೆ ನಡೆಸಲಾಗಿದೆ ಎಂದು ಆರೋಪಿಸಲಾಗಿತ್ತು. ಎರಡೂ ಕೋಮಿನ ನಡುವೆ ಭಾರೀ ಮಾತಿನ ಚಕಮಕಿ ನಡೆದಿತ್ತು. ಪೊಲೀಸ್ ಹಾಗೂ ಎರಡೂ ಸಮುದಾಯದ ಹಿರಿಯ ಮುಖಂಡರಿಂದ ಗಲಾಟೆ ತಣ್ಣಗಾಗಿತ್ತು. (4ನೇ ಪುಟಕ್ಕೆ)

# ಮುರುಘಾ ಮಠ : ಪೋಕ್ಸೋ ಪ್ರಕರಣದ ಆರೋಪಿ ಪರಮಶಿವಯ್ಯಗೆ ಜಮೀನು


ಚಿತ್ರದುರ್ಗ, ಅ.13- ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ವಿರುದ್ಧದ ಮೊದಲ ಪೋಕ್ಸೋ ಪ್ರಕರಣ ದಲ್ಲಿ ಮೂರನೇ ಆರೋಪಿಯಾಗಿರುವ ಮಠದ ವಿದ್ಯಾಪೀಠಗಳ ಕಾರ್ಯದರ್ಶಿ ಪರಮಶಿವಯ್ಯ ಅವರಿಗೆ ಶುಕ್ರವಾರ ಕರ್ನಾಟಕ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ. ಇಡೀ ಪ್ರಕರಣದಲ್ಲಿ ಜಾಮೀನು ಪಡೆದ ಮೊದಲ ಆರೋಪಿ ಪರಮಶಿವಯ್ಯ ಆಗಿದ್ದಾರೆ.

ಪರಮಶಿವಯ್ಯ ಅವರು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಶಿವಶಂಕರ್ ಅಮರಣ್ಣವರ್ ಅವರ ನೇತೃತ್ವದ ಏಕಸದಸ್ಯ ಪೀಠ ಪುರಸ್ಕರಿಸಿದೆ.

ಅರ್ಜಿದಾರರು ಎರಡು ಲಕ್ಷ ರೂಪಾಯಿ ಮೌಲ್ಯದ ಬಾಂಡ್, ಇಬ್ಬರ ಭದ್ರತೆ ನೀಡಬೇಕು. ಸಾಕ್ಷಿಗಳ ಮೇಲೆ ಪ್ರಭಾವ ಬೀರಬಾರದು ಎಂಬ ಷರತ್ತುಗಳನ್ನು ವಿಧಿಸಲಾಗಿದೆ. ವಿಸ್ತೃತ ಆದೇಶ ಇನ್ನಷ್ಟೇ ಪ್ರಕಟವಾಗಬೇಕಿದೆ.

ಕಳೆದ ವರ್ಷದ ಆಗಸ್ಟ್‌ನಲ್ಲಿ ಶಿವಮೂರ್ತಿ ಶರಣರ ವಿರುದ್ಧ ಮಠದ ಹಾಸ್ಟೆಲ್‌ನಲ್ಲಿ (4ನೇ ಪುಟಕ್ಕೆ)


## ತೃತೀಯ ವರ್ಷದ ಪುಣ್ಯಸ್ಮರಣೆ



ಹರಿಹರ ತಾ. ನಿಟ್ಟೂರು ಗ್ರಾಮದ ಹಿರಿಯರು,
ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಸಮಿತಿ ಅಧ್ಯಕ್ಷರೂ,
ಭದ್ರಾ ಕಾಡಾ ಸಮಿತಿ ಮಾಜಿ ಸದಸ್ಯರಾದ

**ಶ್ರೀ ನಿಟ್ಟೂರು ಪಟೇಲ್ ನಾಗಪ್ಪ**
(ಮರಣ : 14.10.2020)

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು
ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ.
ನಿಮ್ಮ ಮಾರ್ಗದರ್ಶನ ನಮಗೆ ದಾರಿ ದೀಪವಾಗಿದೆ.
ನಿಮ್ಮ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುವ....
ನಿಮ್ಮ ಕುಟುಂಬ ವರ್ಗ

✦ ಪಟೇಲ್ ಹಾಲಸ್ವಾಮಿ ✦ ಶ್ರೀಮತಿ ಕವಿತಾ, ಶ್ರೀ ದಾನಪ್ಪ
✦ ಶ್ರೀಮತಿ ಅನಿತಾ ಶ್ರೀ ಸಂತೋಷ್ ✦ ಶ್ರೀಮತಿ ಶ್ರುತಿ ಪಟೇಲ್, ಸತೀಶ್ ಪಟೇಲ್
✦ ಮೊಮ್ಮಗ : ಸುಕೇಶ್ ಪಟೇಲ್, ವಂಶಸ್ಥರು ಹಾಗೂ ಬಂಧು-ಮಿತ್ರರು, ನಿಟ್ಟೂರು ಗ್ರಾಮಸ್ಥರು.


# ಶಸ್ತ್ರಚಿಕಿತ್ಸೆ ನೇರ ಪ್ರಸಾರಕ್ಕೆ ಆಕ್ಷೇಪ ಕೇಂದ್ರಕ್ಕೆ ನೋಟಿಸ್

ನವದೆಹಲಿ, ಅ. 13 – ಶಸ್ತ್ರಚಿಕಿತ್ಸೆಯನ್ನು ನೇರ ಪ್ರಸಾರ ಮಾಡುವುದರಿಂದ ಆಗುವ ಕಾನೂನು ಹಾಗೂ ನೈತಿಕ ವಿಷಯಗಳ ಕುರಿತು ಪ್ರತಿಕ್ರಿಯೆ ದಾಖಲಿಸುವಂತೆ ಕೇಂದ್ರ ಸರ್ಕಾರ ಹಾಗೂ ಇತರರಿಗೆ ಸುಪ್ರೀಂ ಕೋರ್ಟ್ ತಿಳಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠ ಈ ಬಗ್ಗೆ ಕೇಂದ್ರ ಸರ್ಕಾರ, ರಾಷ್ಟ್ರೀಯ ವೈದ್ಯಕೀಯ ಆಯೋಗ ಮತ್ತಿತರರಿಗೆ ನೋಟಿಸ್ (4ನೇ ಪುಟಕ್ಕೆ)

# 21 ತಾಲ್ಲೂಕುಗಳು ಬರಪೀಡಿತ ಘೋಷಣೆ

ಬೆಂಗಳೂರು, ಅ. 13 - ರಾಜ್ಯ ಸರ್ಕಾರ ಹೆಚ್ಚುವರಿಯಾಗಿ 21 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದೆ.

ಇದರಲ್ಲಿ 17 ತೀವ್ರ ಬರ ಪೀಡಿತ ಹಾಗೂ 4 ಸಾಧಾರಣ ಬರಪೀಡಿತ ತಾಲ್ಲೂಕುಗಳೆಂದು ಗುರುತಿಸಲಾಗಿದೆ. ಇದರಿಂದಾಗಿ ರಾಜ್ಯದ ಒಟ್ಟು 236 ತಾಲ್ಲೂಕುಗಳ ಪೈಕಿ 216 ತಾಲ್ಲೂಕುಗಳು ಬರಪೀಡಿತ ಪಟ್ಟಿಗೆ ಸೇರಿದಂತಾಗಿದೆ. 195 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳು ಎಂದು ಮೊದಲ ಹಂತದಲ್ಲಿ ಘೋಷಿಸಲಾಗಿತ್ತು.

# ನೋಟು ಬದಲಿಗೆ ಆರ್‌ಬಿಐ ಕಚೇರಿ ಎದುರು ಸರದಿ

ನವದೆಹಲಿ, ಅ. 13 – 2 ಸಾವಿರ ರೂ.ಗಳ ನೋಟುಗಳನ್ನು ಬದಲಿಸಿಕೊಳ್ಳಲು ಜನರು ರಿಸರ್ವ್ ಬ್ಯಾಂಕ್‌ನ 19 ಕಚೇರಿಗಳ ಎದುರು ಸರದಿಯಲ್ಲಿ ನಿಂತಿದ್ದು ಕಂಡು ಬಂದಿದೆ. ಬ್ಯಾಂಕುಗಳಲ್ಲಿ ನೋಟುಗಳ ವಿನಿಮಯ ಅವಧಿ ಮುಗಿದ ನಂತರ ಜನ ರಿಸರ್ವ್ ಬ್ಯಾಂಕ್ ಕಚೇರಿಗಳ ಬಳಿ (2ನೇ ಪುಟಕ್ಕೆ)


## ದಿ ದಾವಣಗೆರೆ ಕ್ಲಬ್ (ರಿ.)

ನಮ್ಮ ನಡೆ ಅಭಿವೃದ್ಧಿಯ ಕಡೆ | ಪಿ.ಬಿ. ರಸ್ತೆ, ದಾವಣಗೆರೆ - 577 002. | ನಮ್ಮ ನಡೆ ಅಭಿವೃದ್ಧಿಯ ಕಡೆ

2023-2024, 2024-25, 2025-26ನೇ ಸಾಲಿನ 3 ವರ್ಷಗಳ ಅವಧಿಗೆ ಆಡಳಿತ ಮಂಡಳಿಗೆ 11 ಜನರನ್ನು ಆಯ್ಕೆ ಮಾಡುವ ಬಗ್ಗೆ

### ಕ್ಲಬ್‌ನ ಸದಸ್ಯರಲ್ಲಿ ಮನವಿ

2023-24, 2024-25 ಮತ್ತು 2025-2026ನೇ ಸಾಲುಗಳವರೆಗೆ (3 ವರ್ಷ) ಅವಧಿಗೆ ದಿನಾಂಕ 15.10.2023ನೇ ಭಾನುವಾರ ನಡೆಯಲಿರುವ ಆಡಳಿತ ಮಂಡಳಿ ಸದಸ್ಯರ ಚುನಾವಣೆಗೆ ನಾವುಗಳು ಒಮ್ಮತದಿಂದ ಎ.ಬಿ.ಚಂದ್ರಶೇಖರ್‌ರವರ ನೇತೃತ್ವದಲ್ಲಿ ಸ್ಪರ್ಧಿಸಲು ತೀರ್ಮಾನಿಸಿದ್ದು, ಈ ಪೈಕಿ ಅಧ್ಯಕ್ಷರು 1 ಸ್ಥಾನ, ಉಪಾಧ್ಯಕ್ಷರು 1 ಸ್ಥಾನ, ಗೌರವ ಕಾರ್ಯದರ್ಶಿ 1 ಸ್ಥಾನ, ಗೌರವ ಸಹ ಕಾರ್ಯದರ್ಶಿ 1 ಸ್ಥಾನ, ಖಜಾಂಚಿ 1 ಸ್ಥಾನ ಹಾಗೂ 6 ಜನ ನಿರ್ದೇಶಕರುಗಳು ಅಂದರೆ ನಮ್ಮ ಗುಂಪಿನಲ್ಲಿರುವ ಒಟ್ಟು 11 ಜನ ಅಭ್ಯರ್ಥಿಗಳನ್ನು ತಮ್ಮ ಅಮೂಲ್ಯವಾದ ಮತವನ್ನು ನೀಡುವುದರ ಮೂಲಕ ಈ ಹಿಂದಿನ ಮೂರು ವರ್ಷಗಳ ಕ್ಲಬ್‌ನ ಸೇವೆ ಹಾಗೂ ಸರ್ವತೋಮುಖ ಅಭಿವೃದ್ಧಿ ಮಾಡಿದ್ದು, ಮತ್ತು ಅದೇ ರೀತಿ ಮುಂದಿನ 3 ವರ್ಷದ ಅವಧಿಯ ಕ್ಲಬ್‌ನ ಹೆಚ್ಚಿನ ಅಭಿವೃದ್ಧಿಗೆ ತಮ್ಮಗಳ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕಾಗಿ ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

| ಕ್ರ.ಸಂ. | ಉಮೇದುದಾರರ ಹೆಸರು | ಸ್ಥಾನಗಳು | ಗುರುತು | ಚಿಹ್ನೆ | ಗುರುತು |
|---|---|---|---|---|---|
| 1 | ಚಂದ್ರಶೇಖರ್ ಎ.ಬಿ. (ABC) | ಅಧ್ಯಕ್ಷ ಸ್ಥಾನಕ್ಕೆ | | | |
| 1 | ಉಳವಯ್ಯ ಎಸ್.ಜಿ. | ಉಪಾಧ್ಯಕ್ಷ ಸ್ಥಾನಕ್ಕೆ | | | |
| 2 | ರವಿಶಂಕರ್ ಪಲ್ಲಾಗಟ್ಟಿ | ಗೌರವ ಕಾರ್ಯದರ್ಶಿ ಸ್ಥಾನಕ್ಕೆ | | | |
| 1 | ಐನಳ್ಳಿ ಜೈದೀಪ್ (ದೀಪು) | ಗೌರವ ಸಹ ಕಾರ್ಯದರ್ಶಿ ಸ್ಥಾನಕ್ಕೆ | | | |
| 2 | ಪ್ರಶಾಂತ ಗುಪ್ತ ಎಸ್.ಕೆ. | ಕೋಶಾಧ್ಯಕ್ಷ ಸ್ಥಾನಕ್ಕೆ | | | |
| 1 | ಅಭಿಷೇಕ್ ಬಿ.ಜೆ. (ಬೇತೂರು) | ನಿರ್ದೇಶಕರ ಸ್ಥಾನಕ್ಕೆ | | | |
| 5 | ಬಸವರಾಜಯ್ಯ ಹೆಚ್.ಎಂ. (ಅಕ್ಕಿ ರಾಜು) | ನಿರ್ದೇಶಕರ ಸ್ಥಾನಕ್ಕೆ | | | |
| 7 | ಬೆಳ್ಳೂಡಿ ಸದಾನಂದ | ನಿರ್ದೇಶಕರ ಸ್ಥಾನಕ್ಕೆ | | | |
| 8 | ರುದ್ರೇಶ್ ಹೆಚ್.ವಿ. | ನಿರ್ದೇಶಕರ ಸ್ಥಾನಕ್ಕೆ | | | |
| 9 | ವಿಶ್ವನಾಥ್ ಬಿ. ಪಾಟೀಲ್ | ನಿರ್ದೇಶಕರ ಸ್ಥಾನಕ್ಕೆ | | | |
| 11 | ಸನ್ನಿ ಎ.ಎ. ಅಂತೋಣಿ ಅಬ್ರಾಂ | ನಿರ್ದೇಶಕರ ಸ್ಥಾನಕ್ಕೆ | | | |

ಮತದಾನದ ದಿನಾಂಕ : 15-10-2023ನೇ ಭಾನುವಾರ
ಮತದಾನ ಸಮಯ : ಬೆಳಿಗ್ಗೆ 9-00 ರಿಂದ ಮಧ್ಯಾಹ್ನ 3-00 ರವರೆಗೆ
ಚುನಾವಣೆ ನಡೆಯುವ ಸ್ಥಳ : ದಿ ದಾವಣಗೆರೆ ಕ್ಲಬ್ (ರಿ.), ಪ್ರವಾಸಿ ಮಂದಿರ ರಸ್ತೆ, ದಾವಣಗೆರೆ.



|| ಶ್ರೀ ಬೋರಲಿಂಗೇಶ್ವರ ಸ್ವಾಮಿ ಪ್ರಸನ್ನ ||

## ಆರನೇ ವರ್ಷದ ಪುಣ್ಯಸ್ಮರಣೆ



ಜನನ : 02-08-1944
ನಿಧನ : 14-10-2017

ಉಸಿರು ಹೋದರೂ ಹೆಸರು ಉಳಿಸಿದ
**ಲಿಂಗೈಕ್ಯ ಶರಣ ಎ. ಲಿಂಗಪ್ಪನವರು**
ನಿವೃತ್ತ ಪ್ರಾಂಶುಪಾಲರು, ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಪುರಸ್ಕೃತರು
ಧರ್ಮದರ್ಶಿಗಳು, ವಾಲ್ಮೀಕಿ ಗುರುಪೀಠ, ರಾಜನಹಳ್ಳಿ, ಹರಿಹರ.

ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳಾದವು. ನಿಮ್ಮ ನೆನಪು ಸದಾ ಹಚ್ಚ ಹಸಿರಾಗಿದ್ದು, ನಿಮ್ಮ ಪ್ರೀತಿ - ವಾತ್ಸಲ್ಯ - ಆದರ್ಶ - ಶಿಸ್ತು - ಪ್ರಾಮಾಣಿಕತೆ ಮತ್ತು ಶ್ರಮದ ಕಾಯಕತ್ವವು ನಮಗೆಲ್ಲಾ ಆದರ್ಶವಾಗಿವೆ. ನೀವು ತೋರಿದ ಸನ್ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇವೆ. ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಧರ್ಮಪತ್ನಿ: ಶ್ರೀಮತಿ ಆರ್.ಟಿ. ಇಂದಿರಮ್ಮ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರು.
ದೂರವಾಣಿ : 08192-260523 ಮೊಬೈಲ್: 94483 25178

## ಕ್ಷುದ್ರ ಗ್ರಹದ ಲೋಹ ಶೋಧಕ್ಕೆ ನಾಸಾದಿಂದ ಗಗನನೌಕೆ ರವಾನೆ

ಕೇಪ್ ಕ್ಯಾನವೆರಲ್, ಅ. 13 – ಕ್ಷುದ್ರ ಗ್ರಹವೊಂದರಲ್ಲಿನ ಅಪರೂಪದ ಲೋಹಕ್ಕಾಗಿ ಅಮೆರಿಕದ ಬಾಹ್ಯಾಕಾಶ ಸಂಸ್ಥೆಯಾದ ನಾಸಾ, ಸೈಕ್ ಗಗನನೌಕೆಯನ್ನು ಉಡಾವಣೆ ಮಾಡಿದೆ.

ಬಹಳಷ್ಟು ಕ್ಷುದ್ರಗ್ರಹಗಳು ಕಲ್ಲು ಇಲ್ಲವೇ ಹಿಮದಿಂದ ಕೂಡಿರುತ್ತವೆ. ಲೋಹವನ್ನು ಶೋಧಿಸಲು ಇದೇ ಮೊದಲ ಬಾರಿಗೆ ಗಗನನೌಕೆ ಕಳಿಸಲಾಗಿದೆ. ಗಗನನೌಕೆ ಆರು ವರ್ಷಗಳ ಕಾಲ ಪ್ರಯಾಣ ಮಾಡಲಿದೆ. ಇದುವರೆಗೂ ಲೋಹ ಇರುವ ಒಂಭತ್ತು ಕ್ಷುದ್ರಗ್ರಹಗಳನ್ನು ಪತ್ತೆ ಮಾಡಲಾಗಿದೆ. ನಾಸಾ ಗಗನನೌಕೆ ಕಳಿಸಿರುವ ಕ್ಷುದ್ರಗ್ರಹವು ಎಲ್ಲಕ್ಕಿಂತ ದೊಡ್ಡದಾಗಿದೆ. ಇದು ಮಂಗಳ ಹಾಗೂ ಗುರು ಗ್ರಹಗಳ ನಡುವೆ ಇದೆ.

## ಮಹಿಳಾ ಶ್ರಮಶಕ್ತಿ ಏರಿಕೆ

ನವದೆಹಲಿ, ಅ. 13 – ದೇಶದ ಶ್ರಮ ಶಕ್ತಿಯಲ್ಲಿ ಮಹಿಳಾ ಸಹಭಾಗಿತ್ವ 2023ರಲ್ಲಿ ಶೇ.4.2ರಷ್ಟು ಹೆಚ್ಚಾಗಿ ಶೇ.37ಕ್ಕೆ ತಲುಪಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಈ ಕುರಿತು ಮಾಹಿತಿಯನ್ನು ಬಿಡು ಗಡೆ ಮಾಡಿದೆ. 2017-18ರಲ್ಲಿ ಮಹಿಳಾ ಸಹಭಾಗಿತ್ವ ಶೇ.23.3ರಷ್ಟಿತ್ತು. ಅದು 2021-22ರಲ್ಲಿ ಶೇ.32.8ಕ್ಕೆ ತಲುಪಿತ್ತು. ನಂತರ 2022-23ರಲ್ಲಿ ಶೇ.37ಕ್ಕೆ ಏರಿಕೆಯಾಗಿದೆ ಎಂದು ತಿಳಿಸಲಾಗಿದೆ.

# ಗ್ರಾಮೀಣ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಕೆಲಸ



ಮಲೇಬೆನ್ನೂರು, ಅ. 13- ಇನ್‌ಸೈಟ್ಸ್ ಐಎಎಸ್ ತರಬೇತಿ ಕೇಂದ್ರದ ಸಂಸ್ಥಾಪಕ ಹಾಗೂ ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಜಿ.ಬಿ. ವಿನಯ್‌ಕುಮಾರ್ ಅವರು ಗುರುವಾರ ಸಂಜೆ ಗ್ರಾಮ ವಾಸ್ತವ್ಯಕ್ಕಾಗಿ ಕೊಪ್ಪ ಗ್ರಾಮಕ್ಕೆ ಆಗಮಿಸಿದಾಗ ಗ್ರಾಮಸ್ಥರು ಅದ್ದೂರಿಯಾಗಿ ಸ್ವಾಗತಿಸಿದರು.

ಮಹಳೆಯರ ಪೂರ್ಣ ಕುಂಭ ಮೇಳ ಹಾಗೂ ಡೊಳ್ಳು ಕುಣಿತದೊಂದಿಗೆ ಮೆರವಣಿಗೆ ಮೂಲಕ ವಿನಯ್‌ಕುಮಾರ್ ಅವರನ್ನು ಗ್ರಾಮಕ್ಕೆ ಬರಮಾಡಿಕೊಳ್ಳಲಾಯಿತು.

ಈ ವೇಳೆ ಹಮ್ಮಿಕೊಂಡಿದ್ದ ವೇದಿಕೆ ಕಾರ್ಯ ಕ್ರಮದಲ್ಲಿ ಮಾತನಾಡಿದ ತಾ.ಪಂ. ಮಾಜಿ ಅಧ್ಯಕ್ಷ ಎಸ್.ಜಿ. ಪರಮೇಶ್ವರಪ್ಪ ಅವರು, ವಿನಯ್‌ಕುಮಾರ್ ಅವರ ಸಾಮಾಜಿಕ ಸೇವೆಗಳು ಮಾದರಿಯಾಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗ್ರಾಮದ ಉಪನ್ಯಾಸಕ ತಿಪ್ಪಣ್ಣ ಕಬ್ಬಾರ್, ಗ್ರಾ.ಪಂ. ಸದಸ್ಯ ಕೆ.ಹೆಚ್. ಚಂದ್ರಪ್ಪ, ಜೋಗಳ್ಳಿ ಕೃಷ್ಣಪ್ಪ, ವೈ. ನಿಂಗಪ್ಪ, ಟಿ. ಹನುಮಂತಪ್ಪ, ಎ.ಕೆ. ಮಂಜಪ್ಪ, ವೈ. ಎನ್. ಕೃಷ್ಣಪ್ಪ, ಡಿ.ಟಿ. ಕುಮಾರ್, ದಾಸರ ಬಸಪ್ಪ, ಕರುಳ್ಳಿ ನಾಗಪ್ಪ, ಯಲೋದಹಳ್ಳಿ ಲಕ್ಷ್ಮಪ್ಪ ಮತ್ತು ಹಾಲಿವಾಣ ಗ್ರಾ.ಪಂ. ಮಾಜಿ ಅಧ್ಯಕ್ಷ ಡಿ.ಡಿ. ರೇವಣಪ್ಪ, ವಕೀಲ ಜಿ.ಕೆ. ಸುರೇಶ್, ಜಿಗಳಿಯ ಕೆ.ಆರ್. ರಂಗಪ್ಪ, ಕೊಮಾರನಹಳ್ಳಿಯ ಎಸ್.ಎಂ. ಮಂಜುನಾಥ್, ಮಲೇಬೆನ್ನೂರಿನ ಕೆ.ಪಿ. ಗಂಗಾಧರ್, ಭೋವಿಕುಮಾರ್, ಕೊಕ್ಕನೂರಿನ ದಾಸರ ಮಾರುತಿ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಈ ವೇಳೆ ಗ್ರಾಮದ ಎಲ್ಲಾ ವಿದ್ಯಾರ್ಥಿಗಳಿಗೆ ನೋಟ್ ಬುಕ್, ಶಬ್ದ ಕೋಶದ ಪುಸ್ತಕ, ಪೆನ್ನುಗಳನ್ನು ವಿತರಿಸಿದ ವಿನಯ್‌ಕುಮಾರ್ ಅವರು, ನಾನು ಇಲ್ಲಿ ವೇದಿಕೆ ಭಾಷಣ ಮಾಡಲು ಬಂದಿಲ್ಲ. ಗ್ರಾಮದ ಹಾಗೂ ಜನರ ಸಮಸ್ಯೆಗಳನ್ನು ಕಣ್ಣಾರೆ ಕಂಡು, ಅನುಭವಿಸಿ, ಮುಂದಿನ ದಿನಗಳಲ್ಲಿ ಆ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡುವ ಉದ್ದೇಶ ಇಟ್ಟುಕೊಂಡು ಬಂದಿದ್ದೇನೆ. ಪೋಷಕರು ಮಕ್ಕಳಿಗೆ ಪುಸ್ತಕ ಪೆನ್ನು ನೀಡಿದರೆ ಸಾಲದು, ಅವರ ಓದಿನ ಹಾಗೂ ಸಹವಾಸದ ಬಗ್ಗೆಯೂ ಗಮನಿಸಬೇಕು. ಶಿಕ್ಷಣದಿಂದ ಬಡವರ, ಶಕ್ತಿ ಇಲ್ಲದವರ ಅಭಿವೃದ್ಧಿ ಸಾಧ್ಯ ಎಂಬುದರ ಬಗ್ಗೆಯೂ ವಿನಯ್‌ಕುಮಾರ್ ಗ್ರಾಮಸ್ಥರಲ್ಲಿ ಅರಿವು ಮೂಡಿಸಿದರು.

> ➢ ಗ್ರಾಮ ವಾಸ್ತವ್ಯ ಪ್ರಚಾರಕ್ಕಾಗಿ ಅಲ್ಲ, ಜನರ ಸಮಸ್ಯೆ ಅನುಭವಿಸಿ, ಪರಿಹಾರ ಒದಗಿಸುವ ಪ್ರಾಮಾಣಿಕ ಪ್ರಯತ್ನ ನನ್ನದು.
>
> ➢ ನಾನು ವಾಸ್ತವ್ಯ ಮಾಡಿದ್ದ ಮನೆಯ ಕವಿತಾ ಮತ್ತು ಲಕ್ಷ್ಮಿ ಸಹೋದರಿಯರು ಸದ್ಯ ಪಿಯುಸಿ ಓದುತ್ತಿದ್ದು, ಡಿಗ್ರಿ ಶಿಕ್ಷಣ ಕೊಡಿಸುವ ಜವಾಬ್ದಾರಿಯನ್ನು ನಾನು ತೆಗೆದುಕೊಳ್ಳುತ್ತೇನೆ.
>
> – ವಿನಯ್‌ಕುಮಾರ್

ರಾತ್ರಿ ಗ್ರಾಮದ ಗೊಲ್ಲರ ಜಯಪ್ಪ ಮತ್ತು ಕೆಂಚಮ್ಮ ಅವರ ಮನೆಯಲ್ಲಿ ವಾಸ್ತವ್ಯ ಮಾಡಿದ್ದ ವಿನಯ್‌ಕುಮಾರ್, ಗ್ರಾಮದ ಪ್ರತಿ ಮನೆಗೂ ಭೇಟಿ ನೀಡಿ, ಅವರ ಸ್ಥಿತಿಗತಿ ಬಗ್ಗೆ ತಿಳಿದುಕೊಂಡರು.

ನಂತರ ಪತ್ರಕರ್ತರೊಂದಿಗೆ ಮಾತನಾಡಿದ ವಿನಯ್ ಅವರು, ಈ ಗ್ರಾಮಕ್ಕೆ ಪ್ರಮುಖವಾಗಿ ಆಗಬೇಕಾದ ಕೆಲಸಗಳು ಆಗಿಲ್ಲ. ಅಂತಹ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವ ಕೆಲಸ ಮಾಡುತ್ತೇನೆ. ಗ್ರಾಮದ ರಸ್ತೆ ಅಗಲೀಕರಣ, ಆಶ್ರಯ ಮನೆ, ಬಸ್ ಸೌಲಭ್ಯದ ಬಗ್ಗೆ ಸರ್ಕಾರದ ಮಟ್ಟದಲ್ಲಿ ಹೋರಾಟ ಮಾಡುತ್ತೇನೆ. ಇಲ್ಲಿನ ಮಕ್ಕಳ ಉನ್ನತ ಶಿಕ್ಷಣಕ್ಕೆ ನನ್ನ ಕೈಲಾದ ಎಲ್ಲಾ ಸಹಕಾರ ನೀಡುತ್ತೇನೆ ಎಂದು ಭರವಸೆ ನೀಡಿದರು.

## ನಗರದ ಶ್ರೀ ದಾನಮ್ಮ ದೇವಸ್ಥಾನದಲ್ಲಿ ಇಂದು ಅಭಿಷೇಕ



ದೊಡ್ಡಪೇಟೆಯಲ್ಲಿರುವ ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮ ದೇವಿ ದೇವಸ್ಥಾನದಲ್ಲಿ ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮ ದೇವಿಗೆ ಇಂದು ಮಹಾನವಮಿ ಅಮಾವಾಸ್ಯೆ ಪ್ರಯುಕ್ತ ಅಭಿಷೇಕ, ಅಲಂಕಾರ ಮತ್ತು ಪ್ರಸಾದ ವಿನಿಯೋಗ ನಡೆಯಲಿದೆ.

ಬೇತೂರು ಶ್ರೀಮತಿ ಪುಷ್ಪಲತಾ ಕರಿಬಸಪ್ಪ, ಮಗ ಸೋಮಶೇಖರ ಮತ್ತು ಕುಟುಂಬದವರು, ದೇವರಮನಿ ಚನ್ನಬಸಮ್ಮ ಮುರಿಗೆಪ್ಪ ಇವರ ನೆನಪಿಗಾಗಿ ದೇವರಮನಿ ಶ್ರೀಮತಿ ರತ್ನಮ್ಮ ಮಹಾ ರುದ್ರಪ್ಪ ಮತ್ತು ಮಕ್ಕಳು ಹಾಗೂ ಕುಟುಂಬದವರು, ದಿ. ಚನ್ನವೀರಪ್ಪ (ನಿವೃತ್ತ ಶಿಕ್ಷಕರು) ಎನ್.ಪಿ. ಇವರ ಸ್ಮರಣಾರ್ಥವಾಗಿ ಶ್ರೀಮತಿ ಜಿ.ಇ. ನಾಗರತ್ನಮ್ಮ ಮತ್ತು ಕುಟುಂಬದವರು ದಾಸೋಹ ಸೇವಾಕರ್ತರಾಗಿದ್ದಾರೆ.

## ಕಾಳಿಕಾದೇವಿ ವಿಶ್ವಕರ್ಮ ದೇವಸ್ಥಾನದಲ್ಲಿ ನಾಳೆಯಿಂದ ದಸರಾ ಮಹೋತ್ಸವ



ದಾವಣಗೆರೆ, ಅ. 13- ನವರಾತ್ರಿ ಪ್ರಯುಕ್ತ ನಗರದ ಕಾಳಿಕಾದೇವಿ ರಸ್ತೆಯಲ್ಲಿರುವ ಶ್ರೀ ಕಾಳಿಕಾದೇವಿ ವಿಶ್ವಕರ್ಮ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 15ರ ಭಾನುವಾರ ಪ್ರಾತಃಕಾಲ ಗಣಪತಿ ಪೂಜೆ, ಪುಣ್ಯಾಹ ವಾಚನ ಘಟಸ್ಥಾಪನೆ ಮತ್ತು ಧ್ವಜಾರೋಹಣ ನಡೆಯುವುದು. ಇದೇ ದಿನಾಂಕ 15 ರಿಂದ 24ರ ಮಂಗಳವಾರವರೆಗೆ ಶ್ರೀ ಅಮ್ಮನವರಿಗೆ ವೇದೋಕ್ತ ಪಂಚಾಮೃತಾಭಿಷೇಕ, ಅಲಂಕಾರ ಮತ್ತು ದುರ್ಗಾಹೋಮಗಳು ನಡೆಯಲಿವೆ. ಪ್ರತಿದಿನ ಸಂಜೆ 6 ರಿಂದ 7 ರವರೆಗೆ ಶ್ರೀ ಕಾಳಿಕಾದೇವಿ ಮಹಿಳಾ ಭಜನಾ ಮಂಡಳಿಯಿಂದ ಲಲಿತಾ ಸಹಸ್ರನಾಮ ಪಾರಾಯಣ ಮತ್ತು ಸಂಜೆ 7 ರಿಂದ 9 ರವರೆಗೆ ಟಿ. ಪರಮೇಶ್ವರಚಾರ್ ಮತ್ತು ಎನ್. ರಮೇಶಚಾರ್ ಅವರಿಂದ ಶ್ರೀ ದೇವಿಯ ಪಾರಾಯಣ ನಡೆಯಲಿದೆ.

# ಡಿಆರ್‌ಎಂ ಪ್ರೌಢ ಶಾಲಾ ಕಟ್ಟಡ ನಿರ್ಮಾಣಕ್ಕೆ ಅಧಿಕಾರಿಗಳ ನಿರ್ಲಕ್ಷ್ಯ : ಹರಿಹರದಲ್ಲಿ ಪ್ರತಿಭಟನೆ



ಹರಿಹರ, ಅ. 13- ನಗರದ ಡಿಆರ್‌ಎಂ ಶಾಲಾ ಕಟ್ಟಡ ಶಿಥಿಲವಾ ಗಿದ್ದು, ಶಾಲೆಯನ್ನು ತೆರವುಗೊಳಿಸುವಂತೆ ಸರ್ಕಾರ ಆದೇಶವನ್ನು ನೀಡಿದ್ದರೂ ಸಹ ಸ್ಥಳಿಯ ಶಿಕ್ಷಣ ಇಲಾಖೆ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ. ಈ ಕಟ್ಟಡ ತೆರವುಗೊಳಿಸಿ, ಗುಣಮಟ್ಟದ ಕಟ್ಟಡ ಕಟ್ಟುವಂತೆ ಆಗ್ರಹಿಸಿ ಶಾಲಾ ಅಭಿವೃದ್ಧಿ ಸಂಸ್ಥೆ ಪದಾಧಿಕಾರಿಗಳು ಮತ್ತು ಸಂಘ-ಸಂಸ್ಥೆಯವರು ತಹಶೀಲ್ದಾರ್ ಕಚೇರಿ ಮುಂಭಾಗ ಪ್ರತಿಭಟನೆ ಮಾಡಿದರು.

ಈ ವೇಳೆ ಮಾತನಾಡಿದ ಶಾಲಾ ಅಭಿವೃದ್ಧಿ ಸಂಸ್ಥೆ ಅಧ್ಯಕ್ಷ ಜಬಿವುಲ್ಲಾ, ಉಪಾಧ್ಯಕ್ಷ ಶಿವಕುಮಾರ್, ನಗರಸಭೆ ಸದಸ್ಯ ದಾದಾ ಖಲಂದರ್, ಡಿ.ಆರ್.ಎಂ. ಪ್ರೌಢಶಾಲೆ ಮತ್ತು ಕಾಲೇಜು ಕಟ್ಟಡವನ್ನು ಸುಮಾರು 77 ವರ್ಷಗಳ ಹಿಂದೆ ಕಟ್ಟಿದ್ದು, ಇಲ್ಲಿನ ಶಾಲೆಯ 17 ಕೊಠಡಿಗಳಲ್ಲಿ 415 ವಿದ್ಯಾರ್ಥಿಗಳು ಓದುತ್ತಿದ್ದಾರೆ. ಶಾಲೆ ಕಟ್ಟಡ ಬಹಳ ಶಿಥಿಲವಾಗಿ ಗೋಡೆಗಳು ಕುಸಿಯುವ ಹಂತದಲ್ಲಿ ಇದ್ದು, ಮತ್ತು ಶಾಲೆಯಲ್ಲಿ ಎಲ್ಲೆಂದರಲ್ಲಿ ಗುಟ್ಕಾ ಉಗುಳುವಿಕೆ, ಮದ್ಯದ ಬಾಟಲಿಗಳನ್ನು ಹಾಕಿರುವುದಲ್ಲದೆ ಅನೇಕ ಅನೈತಿಕ ಚಟುವಟಿಕೆಗಳ ತಾಣವಾಗಿದೆ ಎಂದು ಹೇಳಿದರು.

ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತರಲಾಗಿದ್ದರ ಪರಿಣಾಮ 2017 ರಲ್ಲಿ ಸರ್ಕಾರ ಶಾಲೆಯ ಕಟ್ಟಡವನ್ನು ತೆರವುಗೊಳಿಸಿ, ನೂತನ ಕಟ್ಟಡ ನಿರ್ಮಾಣಕ್ಕೆ ಆದೇಶವನ್ನು ನೀಡಿದ್ದರೂ ಸಹಿತ ಇದುವರೆಗೂ ಸ್ಥಳೀಯ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ಯಾವುದೇ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಈ ಬಗ್ಗೆ ಐದು ತಿಂಗಳ ಕಾಲ ಸತತವಾಗಿ ಎಲ್ಲಾ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ರೀತಿಯ ಪ್ರಯೋಜನ ಆಗಿರುವುದಿಲ್ಲ. ಈ ರೀತಿಯ ನಿರ್ಲಕ್ಷ್ಯ ತೋರಿ ಮುಂದಿನ ದಿನಗಳಲ್ಲಿ ಶಾಲೆಯಲ್ಲಿ ಓದುವ ಮಕ್ಕಳಿಗೆ ಏನಾದರೂ ಅನಾಹುತ ಸಂಭವಿಸಿದರೆ ನೇರವಾಗಿ ಅಧಿಕಾರಿಗಳನ್ನು ಹೊಣೆ ಮಾಡಲಾಗುತ್ತದೆ ಎಂದು ಅವರು ಎಚ್ಚರಿಸಿದರು.

ಈ ಸಂದರ್ಭದಲ್ಲಿ ರೆಹಮತ್ತುಲ್ಲಾ ರೆಹಮಾನ್, ಸೈಯದ್ ಆಶ್ರಫ್ ಅಲಿ, ರಕ್ಷಣಾ ವೇದಿಕೆ ರಮೇಶ್ ಮಾನೆ, ಪ್ರೀತಂ ಬಾಬು, ಕೆ. ಆಸೀಫ್ ಕನವಳ್ಳಿ, ಸಿಕಂದರ್, ಅಫ್ರೋಸ್ ಹಾಗು ಇತರರು ಹಾಜರಿದ್ದರು.

## ಖಾಸಗಿ ಲಾಕರ್‌ಗಳಲ್ಲಿ 500 ಕೋಟಿ ರೂ., 50 ಕೆಜಿ ಚಿನ್ನ ಎಂದು ಬಿಜೆಪಿ ಸಂಸದನ ಆರೋಪ

ಜೈಪುರ, ಅ. 13 – ರಾಜಸ್ಥಾನದ ಜೈಪುರದ 100 ಖಾಸಗಿ ಲಾಕರ್‌ಗಳಲ್ಲಿ 500 ಕೋಟಿ ರೂ. ಕಪ್ಪು ಹಣ ಹಾಗೂ 50 ಕೆ.ಜಿ. ಬಂಗಾರ ಇರಿಸಲಾಗಿದೆ ಎಂದು ಬಿಜೆಪಿ ರಾಜ್ಯಸಭಾ ಸದಸ್ಯ ಕಿರೋಡಿ ಮೀನಾ ಆರೋಪಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಈ ಆರೋಪ ಮಾಡಿರುವ ಮೀನಾ, ಈ ಬಗ್ಗೆ ಪೊಲೀಸರು ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದ್ದಾರೆ. ನಂತರ ಅವರು ಲಾಕರ್ ಇದೆ ಎಂದು ಹೇಳಲಾದ ಉದ್ಯಮ ಕಚೇರಿಗೆ ತೆರಳಿದರು.

ಆದಾಯ ತೆರಿಗೆ ಇಲಾಖೆ ಹಾಗೂ ಜಾರಿ ನಿರ್ದೇಶನಾಲಯಗಳು ಈ ಕಚೇರಿಗೆ ತೆರಳಿ ಪರಿಶೀಲಿಸಿವೆ ಎಂದೂ ಮೀನಾ ಹೇಳಿದ್ದಾರೆ.

## ಆರ್‌ಬಿಐ ಕಚೇರಿ ಎದುರು ಸರದಿ

**(1ನೇ ಪುಟದಿಂದ)** ಬರುತ್ತಿದ್ದಾರೆ. 2 ಸಾವಿರ ರೂ.ಗಳ ನೋಟುಗಳನ್ನು ಚಲಾವಣೆಯಿಂದ ವಾಪಸ್ ಪಡೆಯುವು ದಾಗಿ ಮೇ 19ರಂದು ರಿಸರ್ವ್ ಬ್ಯಾಂಕ್ ತಿಳಿ ಸಿತ್ತು. ಅಕ್ಟೋಬರ್ 7ರವರೆಗೆ ಬ್ಯಾಂಕುಗಳಲ್ಲಿ ವಿನಿಮಯಕ್ಕೆ ಅವಕಾಶ ನೀಡಲಾಗಿತ್ತು. ನಂತರ ರಿಸರ್ವ್ ಬ್ಯಾಂಕ್ ಕಚೇರಿಗಳಲ್ಲಿ ಮಾತ್ರ ನೋಟು ಬದಲಾವಣೆಗೆ ಅವಕಾಶ ಇದೆ.

ರಾಜಧಾನಿ ದೆಹಲಿ ಸೇರಿದಂತೆ ಹಲವೆಡೆ ರಿಸರ್ವ್ ಬ್ಯಾಂಕ್ ಕಚೇರಿಗಳ ಎದುರು ಜನರು ಸರದಿಯಲ್ಲಿ ನಿಂತಿದ್ದು ಕಂಡು ಬಂದಿದೆ. ಇನ್ನು 12 ಸಾವಿರ ಕೋಟಿ ರೂ.ಗಳ ನೋಟುಗಳು ವಾಪಸ್ ಬಂದಿಲ್ಲ ಎಂದು ಆರ್.ಬಿ.ಐ. ಗವರ್ನರ್ ಶಕ್ತಿಕಾಂತ್ ದಾಸ್ ಕಳೆದ ಶುಕ್ರವಾರ ತಿಳಿಸಿದ್ದರು.

## ಹರಿಹರ: 'ನನ್ನ ಮಣ್ಣು, ನನ್ನ ದೇಶ' ಜಾಥಾ



ಹರಿಹರ, ಅ.13- ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಕಾಲೇಜು ಶಿಕ್ಷಣ ಇಲಾಖೆ ವತಿಯಿಂದ 'ನನ್ನ ಮಣ್ಣು, ನನ್ನ ದೇಶ' ಎಂಬ ರಾಷ್ಟ್ರೀಯ ಅಭಿಯಾನ ಜಾಥಾ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ವಿದ್ಯಾರ್ಥಿನಿ ಒಬ್ಬರು ಕುಂಭವನ್ನು ತಲೆಯ ಮೇಲೆ ಹೊತ್ತು ನಡೆದರು. ಸಮಾಳ, ಪುರುವಂತರ ಒಡಪುಗಳು ಮೆರವಣಿಗೆಗೆ ಮೆರಗನ್ನು ನೀಡಿದವು.

ಮೆರವಣಿಗೆ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಿಂದ ಪ್ರಾರಂಭಗೊಂಡು, ಹೈಸ್ಕೂಲ್ ಬಡಾವಣೆ, ರಾಣಿ ಚೆನ್ನಮ್ಮ ವೃತ್ತ, ಮುಖ್ಯರಸ್ತೆ ಮುಖಾಂತರ ಸಂಚರಿಸಿ ಗಾಂಧಿ ವೃತ್ತದಲ್ಲಿ ಅಂತ್ಯಗೊಂಡಿತು. ಈ ಸಂದರ್ಭದಲ್ಲಿ ಪ್ರಾಂಶುಪಾಲ ವಿರುಪಾಕ್ಷಪ್ಪ, ಚಂದ್ರಶೇಖರ್ ನಾಯ್ಕ್, ಉಪನ್ಯಾಸಕ ಮಂಜುನಾಥ್, ಗಾಯತ್ರ, ಲತಾ, ಬಿಂದು, ಸೌಂದರ್ಯ ಇತರರು ಹಾಜರಿದ್ದರು.

## ಜಗಳೂರು : ನೂತನ ತಹಶೀಲ್ದಾರ್ ಸೈಯದ್ ಕಲೀಮ್‌ಉಲ್ಲಾ ಅಧಿಕಾರ



ಜಗಳೂರು,ಅ.13- ತಾಲ್ಲೂಕಿನ ನೂತನ ತಹಶೀಲ್ದಾರ್ ಆಗಿ ಸೈಯದ್ ಕಲೀಮ್ ಉಲ್ಲಾ ಅವರು ಅಧಿಕಾರ ವಹಿಸಿಕೊಂಡರು. ಹಿಂದಿನ ತಹಶೀಲ್ದಾರ್ ಜಿ.ಸಂತೋಷ್ ಕುಮಾರ್ ಅವರ ವರ್ಗಾವಣೆ ಯಿಂದ ಆ ಸ್ಥಾನ ತೆರವಾಗಿತ್ತು.

# ಜಗತ್ತಿನಾದ್ಯಂತ ಹೆಚ್ಚುತ್ತಿರುವ ಪುರುಷರ ಬಂಜೆತನ ಜಾಗತಿಕ ಮಾರ್ಗಸೂಚಿಗೆ ಪರಿಣಿತರ ಆಗ್ರಹ

ನವದೆಹಲಿ, ಅ. 13 – ವಿಶ್ವದಾದ್ಯಂತ ಪುರುಷರಲ್ಲಿ ಬಂಜೆತನ ಹೆಚ್ಚಾಗುತ್ತಿದೆ. ಈ ಬಗ್ಗೆ ಸರ್ಕಾರಗಳು ಹಾಗೂ ಆರೋಗ್ಯ ವ್ಯವಸ್ಥೆಗಳು ಪರಿಗಣಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಹಲವು ದೇಶಗಳ ಪರಿಣಿತರು ಕರೆ ನೀಡಿದ್ದಾರೆ.

ಪುರುಷರಲ್ಲಿ ಬಂಜೆತನ ವಿಶ್ವದಾದ್ಯಂತ ಸಾಮಾನ್ಯವಾಗುತ್ತಿದೆ. ವಿಶ್ವದ ಶೇ.16ರಷ್ಟು ದಂಪತಿ ಈಗ ಬಂಜೆತನದ ಸಮಸ್ಯೆ ಎದುರಿಸುತ್ತಿದ್ದಾರೆ ಎಂದು ವಿಶ್ವ ಆರೋಗ್ಯ ಸಂಘಟನೆ ಕಳೆದ ಏಪ್ರಿಲ್ 4, 2023ರಂದು ಹೊರಡಿಸಲಾದ ಪ್ರಕಟಣೆಯಲ್ಲಿ ತಿಳಿಸಿತ್ತು.

ಇದೇ ಮೊದಲ ಬಾರಿಗೆ ಪರಿಣಿತರು ಈ ಸಮಸ್ಯೆ ಎದುರಿಸುವ ಜಾಗತಿಕ ಮಾರ್ಗಸೂಚಿಗೆ ಒತ್ತಾಯಿಸಿದ್ದಾರೆ. ಈ ಕುರಿತ ಶಿಫಾರಸ್ಸುಗಳನ್ನು ನೇಚರ್ ರಿವ್ಯೂಸ್ ಯುರಾಲಜಿ ನಿಯತಕಾಲಿಕದಲ್ಲಿ ಪ್ರಕಟಿಸಲಾಗಿದೆ. ಆಸ್ಟ್ರೇಲಿಯಾದ ಯುನಿವರ್ಸಿಟಿ ಆಫ್ ಮೆಲ್ಬೋರ್ನ್ ನೇತೃತ್ವದ ವಿಜ್ಞಾನಿಗಳ ತಂಡ ಈ ವರದಿ ರೂಪಿಸಿದೆ.

ಬಂಜೆತನದ ರೋಗಿಗಳು ಅರ್ಥಪೂರ್ಣ ತಪಾಸಣೆ ಹಾಗೂ ಚಿಕಿತ್ಸೆಯ ಹಕ್ಕು ಹೊಂದಿದ್ದಾರೆ. ಆದರೆ, ಸಂಶೋಧನೆಯಲ್ಲಿನ ಕೊರತೆ ಹಾಗೂ ಅಗತ್ಯ ಸಂಪನ್ಮೂಲದ ಕೊರತೆಯಿಂದ ಸಾಕಷ್ಟು ಪ್ರಕರಣಗಳಲ್ಲಿ ನೆರವು ಸಾಧ್ಯವಾಗುತ್ತಿಲ್ಲ ಎಂದು ವರದಿ ತಿಳಿಸಿದೆ.

ಈ ಸಮಸ್ಯೆ ಎದುರಿಸಲು ಜಾಗತಿಕವಾಗಿ ಪುರುಷರ ಅಂಗಾಂಶದ ಬಯೋಬ್ಯಾಂಕ್ ಹಾಗೂ ಚಿಕಿತ್ಸಾ ಮಾಹಿತಿ ಸಂಗ್ರಹಣೆಯಾಗಬೇಕು. ಬಂಜೆತನಕ್ಕೆ ಕಾರಣವಾಗುವ ಗ್ರಾಹಕ ಬಳಕೆ ವಸ್ತುಗಳು ಹಾಗೂ ಪರಿಸರದ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಲಾಗಿದೆ.

ಇತ್ತೀಚಿನ ದಶಕಗಳಲ್ಲಿ ಪುರುಷರ ಉತ್ಪಾದಕತೆ ಆರೋಗ್ಯ ಕುಸಿತವಾಗುತ್ತಿರುವುದು ವಿಶ್ವದಾದ್ಯಂತ ಕಂಡು ಬರುತ್ತಿದೆ. ಆದರೆ, ಈ ವಿಷಯದಲ್ಲಿ ಹೆಚ್ಚಿನ ಸಂಶೋಧನೆಯ ಅಗತ್ಯವಿದೆ ಎಂದು ಸಂಶೋಧನಾ ಬರಹದ ನೇತೃತ್ವ ವಹಿಸಿದ್ದ ವಿಶ್ವವಿದ್ಯಾನಿಲಯದ ವಿಜ್ಞಾನ ವಿಭಾಗದ ಡೀನ್ ಮೊಯಿರಾ ಒಬ್ರಾನ್ ಹೇಳಿದ್ದಾರೆ.

ವೀರ್ಯದ ಗುಣಮಟ್ಟ ಕುಸಿಯುತ್ತಿದೆ ಹಾಗೂ ವೃಷಣಗಳ ಕ್ಯಾನ್ಸರ್ ಹೆಚ್ಚಾಗುತ್ತಿದೆ. ಇದು ಜಾಗತಿಕವಾಗಿ ಪುರುಷರ ಉತ್ಪಾದಕತೆ ಆರೋಗ್ಯ ಕಡಿಮೆಯಾಗುತ್ತಿರುವುದು ತೋರಿಸುತ್ತಿದೆ. ಇದಕ್ಕೆ ಕಾರಣವೇನು ಎಂಬುದನ್ನು ಪತ್ತೆ ಮಾಡಿ ಪರಿಸ್ಥಿತಿ ಬದಲಿಸಬೇಕಿದೆ ಎಂದು ಒಬ್ರಾನ್ ಹೇಳಿದ್ದಾರೆ.

ಪುರುಷರ ಬಂಜೆತನ ಕುರಿತ ಈ ಬೃಹತ್ ಅಧ್ಯಯನದಲ್ಲಿ ಆಸ್ಟ್ರೇಲಿಯಾ, ಅರ್ಜೆಂಟಿನಾ, ಕೆನಡಾ, ಚೀನಾ, ಡೆನ್ಮಾರ್ಕ್ ಸೇರಿದಂತೆ 26 ದೇಶಗಳ ಪರಿಣಿತರು ಭಾಗಿಯಾಗಿದ್ದರು.

ಬಹಳಷ್ಟು ಪ್ರಕರಣಗಳಲ್ಲಿ ಪುರುಷರ ಬಂಜೆತನಕ್ಕೆ ಕಾರಣವೇನು ಎಂಬುದು ಪತ್ತೆಯಾಗುವುದಿಲ್ಲ. ಪ್ರಸಕ್ತ ಕೆಲವೇ ಪರೀಕ್ಷೆಗಳತ್ತ ಗಮನ ಹರಿಸಲಾಗುತ್ತಿದೆ. ಬಂಜೆತನ ಜಾಗತಿಕ ಆರ್ಥಿಕತೆ ಹಾಗೂ ಸಾಮಾಜಿಕತೆಗೆ ಹೊರೆಯಾಗುತ್ತಿದೆ. ಈ ಬಗ್ಗೆ ಅಗತ್ಯ ಗಮನ ಹರಿಸಲಾಗುತ್ತಿಲ್ಲ ಎಂದು ಒಬ್ರಾನ್ ಹೇಳಿದ್ದಾರೆ.

ಬಂಜೆತನ ಎದುರಿಸುವ ಪುರುಷರು ಅನಾರೋಗ್ಯದ ಸಮಸ್ಯೆ ಎದುರಿಸುವುದೂ ಹೆಚ್ಚು. ಅಲ್ಲದೇ ಅವರ ಜೀವನಾವಧಿಯೂ ಕಡಿಮೆ. ಈ ಬಗ್ಗೆಯೂ ಹೆಚ್ಚಿನ ಸಂಶೋಧನೆಗಳಾಗಬೇಕಿದೆ ಎಂದವರು ಹೇಳಿದ್ದಾರೆ.

# ನಗರದಲ್ಲಿ ಜಿಲ್ಲಾ ಪೊಲೀಸ್ ವತಿಯಿಂದ ಪಥ ಸಂಚಲನ



ದಾವಣಗೆರೆ, ಅ.13- ನಗರದ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮೈದಾನದಲ್ಲಿ ಪ್ರತಿಷ್ಠಾಪಿಸಿರುವ ಗಣೇಶ ವಿಸರ್ಜನಾ ಮೆರವಣಿಗೆ ನಾಳೆ ಶನಿವಾರ ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಇಂದು ಸಂಜೆ ನಗರದಲ್ಲಿ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಉಮಾ ಪ್ರಶಾಂತ್ ಅವರ ನೇತತ್ವದಲ್ಲಿ 'ಪೊಲೀಸ್ ಪಥ ಸಂಚನ' ಹಮ್ಮಿಕೊಳ್ಳಲಾಗಿತ್ತು.

ಪೊಲೀಸ್ ಪಥ ಸಂಚನಲ ಡಿಎಆರ್ ಕವಾಯತು ಮೈದಾನದಿಂದ ಆರಂಭವಾಗಿ ರಾಮ್ ಅಂಡ್ ಕೋ ವೃತ್ತ, ಎವಿಕೆ ಕಾಲೇಜು ರಸ್ತೆ, ಅಂಬೇಡ್ಕರ್ ವೃತ್ತ, ವಿದ್ಯಾರ್ಥಿ ಭವನ, ಕೆಟಿಜೆ ನಗರ 8ನೇ ಕ್ರಾಸ್ ಮೂಲಕ ಶಿವಪ್ಪ ವೃತ್ತ, ಜಯದೇವ ವೃತ್ತ, ಪಿಬಿ ರಸ್ತೆ ಮೂಲಕ ಅರುಣ ವೃತ್ತ ಸಾಗಿ ಡಿಎಅರ್ ಮೈದಾನಕ್ಕೆ ಮುಕ್ತಾಯವಾಗಿತು.

ಪಥಸಂಚಲನದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಆರ್.ಬಿ.ಬಸರಗಿ, ನಗರ ಪೊಲೀಸ್ ಉಪಾಧೀಕ್ಷಕ ಮಲ್ಲೇಶ್ ದೊಡ್ಡಮನಿ, ಗ್ರಾಮಾಂತರ ಪೊಲೀಸ್ ಉಪಾಧೀಕ್ಷಕ ಬಿ.ಎಸ್. ಬಸವರಾಜ್, ಚನ್ನಗಿರಿ ಪೊಲೀಸ್ ಉಪಾಧೀಕ್ಷಕ ಪ್ರಶಾಂತ್ ಮನ್ನೊಳಿ, ಡಿಎಆರ್ ಡಿವೈಎಸ್ಪಿ ಪಿ.ಬಿ.ಪ್ರಕಾಶ್, ಪೊಲೀಸ್ ನಿರೀಕ್ಷಕರುಗಳು ಸೇರಿದಂತೆ ಪೊಲೀಸ್ ಅಧಿಕಾರಿ ಸಿಬ್ಬಂದಿಗಳು, ಡಿಎಆರ್ ತುಕಡಿಗಳು, ಕೆಎಸ್‌ಆರ್‌ಪಿ ತುಕಡಿಗಳು, ಕ್ಯೂ ಆರ್ ಟಿ ತಂಡ ಭಾಗವಹಿಸಿದ್ದರು.

ಗಣೇಶ ವಿಸರ್ಜನಾ ಮೆರವಣಿಗೆ ಸಂಬಂಧವಾಗಿ ದಾವಣಗೆರೆ ನಗರದಾದ್ಯಂತ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಮುನ್ನೇಚ್ಚರಿಕಾ ಕ್ರಮವಾಗಿ ಜಿಲ್ಲಾ ಪೊಲೀಸ್ ವತಿವಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಅಧಿಕಾರಿ ಸಿಬ್ಬಂದಿ ಹಾಗೂ ಸಶಸ್ತ್ರ ತುಕಡಿಗಳನ್ನು ನಿಯೋಜಿಸಲಾಗಿದ್ದು, ಸೂಕ್ತ ಪೊಲೀಸ್ ಬಂದೋಬಸ್ತ್ ಹಮ್ಮಿಕೊಳ್ಳಲಾಗಿರುತ್ತದೆ.


## ಆಲೂರು ಜಿ. ಮಹೇಶ್ವರಪ್ಪ ನಿಧನ



ದಾವಣಗೆರೆ ತಾಲ್ಲೂಕು ಆಲೂರು ಗ್ರಾಮದ ವಾಸಿ ಶಿಕ್ಷಕರಾದ

**ಆಲೂರು ಗರಗಪ್ಪರ ಮಹೇಶ್ವರಪ್ಪ**

ಇವರು ದಿನಾಂಕ : 13.10.2023ರ ಶುಕ್ರವಾರ ಮಧಾಹ್ನ 1.10ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ ಸುಮಾರು 59 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 14.10.2023 ರ ಶನಿವಾರ ಮಧ್ಯಾಹ್ನ 12.30 ಗಂಟೆಗೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಆಲೂರು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**- : ದುಃಖತಪ್ತ ಕುಟುಂಬ ವರ್ಗ : -**

**ಮೊ : 90369 59540, 91135 36737**

## ಕಾಶಿಪುರ ಎ.ಎಂ.ರೇವಣಸಿದ್ದಪ್ಪ ನಿಧನ



ದಾವಣಗೆರೆ ಜಿಲ್ಲೆ ಹಾಗೂ ತಾಲ್ಲೂಕಿನ ಕಾಶಿಪುರ ಗ್ರಾಮದ ವಾಸಿ, ನ್ಯಾಯಬೆಲೆ ಅಂಗಡಿ ಮಾಲೀಕರಾದ

**ಶ್ರೀ ಎ.ಎಂ. ರೇವಣಸಿದ್ದಪ್ಪ**

ಇವರು ದಿನಾಂಕ 13-10-2023ರ ಶುಕ್ರವಾರ ಸಂಜೆ 4:25ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 62 ವರ್ಷ ವಯಸ್ಸಾಗಿತ್ತು.

ಪತ್ನಿ, ಓರ್ವ ಪುತ್ರ, 4 ಜನ ಪುತ್ರಿಯರು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 14-10-2023ರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ದಾವಣಗೆರೆ ತಾಲ್ಲೂಕು ಕಾಶಿಪುರ ಗ್ರಾಮದಲ್ಲಿರುವ ಅವರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

**ದು:ಖತಪ್ತ ಕುಟುಂಬ ವರ್ಗ**

**7892518820, 9916836394**

## ಹಲುವಾಗಲು ಲಕ್ಷ್ಮವ್ವ ನಿಧನ



ದಾವಣಗೆರೆ ಕೆಟಿಜೆ ನಗರ, 3ನೇ ಮೇನ್, 13ನೇ ಕ್ರಾಸ್ ವಾಸಿ ಕೆ.ಇ.ಬಿ. ನಿವೃತ್ತ ಹಿರಿಯ ಸಹಾಯಕರಾದ ದಿ. ಗುಡ್ಡಪ್ಪ ಇವರ ಧರ್ಮಪತ್ನಿ

**ಶ್ರೀಮತಿ ಲಕ್ಷ್ಮವ್ವ**

ಇವರು ದಿನಾಂಕ : 13.10.2023ರ ಶುಕ್ರವಾರ ರಾತ್ರಿ 7.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 75 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಅಕ್ಕ-ತಂಗಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 14.10.2023 ರ ಶನಿವಾರ ಮಧ್ಯಾಹ್ನ 2 ಗಂಟೆಗೆ ಮೃತರ ಸ್ವಗ್ರಾಮವಾದ ಹರಪನಹಳ್ಳಿ ತಾಲ್ಲೂಕು ಹಲುವಾಗಲು ಗ್ರಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ : 78992 96970, 97310 08723**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 13-10-2023 ರಂದು ನಿಧನರಾದ ಕಾಶೀಪುರದ

**ಶ್ರೀ ಎ.ಎಂ. ರೇವಣಸಿದ್ದಪ್ಪ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅಗಲಿಕೆಯ ದು:ಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

**ಜಿ.ವಿ.ಪಾಟೀಲ್,**
**ಕೆರೆಯಾಗಳಹಳ್ಳಿ ಗ್ರಾ.ಪಂ. ಮಾಜಿ ಸದಸ್ಯರು ಹಾಗೂ ವರ್ತಕರು, ದಾವಣಗೆರೆ.**


## ಪತ್ರಕರ್ತ ಪಿ.ಸೀತಾರಾಮ್ ನಿಧನ



ದಾವಣಗೆರೆ, ಅ.13 - ನಗರದ ಹಿರಿಯ ಪತ್ರಕರ್ತ ಪಿ.ಸೀತಾರಾಮ್ ಇಂದು ಮಧ್ಯಾಹ್ನ ನಿಧನರಾದರು. ಮೃತರಿಗೆ ಸುಮಾರು 72 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಉಸಿರಾಟದ ತೊಂದರೆಯಿಂದಾಗಿ ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಮೃತರ ಅಂತ್ಯಕ್ರಿಯೆಯು ನಾಳೆ ದಿನಾಂಕ 14 ರ ಶನಿವಾರ ಬೆಳಿಗ್ಗೆ 11 ಕ್ಕೆ ನಗರದ ಆರ್.ಹೆಚ್ ಬೃಂದಾವನದಲ್ಲಿ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಸೀತಾರಾಮ್ ಅವರು, ಡಿ.ಜಿ ನಾಗರಾಜ್ ಸಂಪಾದಕತ್ವದ ಲೋಕ ಪ್ರಭ, ಎಂ.ನೀಲಕಂಠ ರಾವ್ ಸಂಪಾದಕತ್ವದ ಜನಕ್ರಾಂತಿ ಹಾಗೂ ಸಿದ್ದ ಲಿಂಗ ಸ್ವಾಮಿ ಸಂಪಾದಕತ್ವದ ಕ್ರಾಂತಿ ಕೇಸರಿಯಲ್ಲಿ ವರದಿಗಾರರಾಗಿ ದ್ದರು.

**ಸಂತಾಪ :** ಸೀತಾರಾಮ್ ನಿಧನಕ್ಕೆ ಹಿರಿಯ ಪತ್ರಕರ್ತರಾದ ಎಸ್.ಬಿ ಜಿನದತ್ತ, ಬಕ್ಕೇಶ್ ನಾಗನೂರು, ಐ.ಗುರುಶಾಂತಪ್ಪ, ಹಳೇಬೀಡು ರಾಮಪ್ರಸಾದ್, ಬಾಬು ದಾಮೋದರ್, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಕೆ. ಏಕಾಂತಪ್ಪ, ಕಾರ್ಯನಿರತ ಪತ್ರಕರ್ತ ಸಂಘದ ಅಧ್ಯಕ್ಷ ಇ.ಎಂ ಮಂಜುನಾಥ, ಪ್ರಧಾನ ಕಾರ್ಯದರ್ಶಿ ಎ.ಪಕ್ರುದ್ಧೀನ್, ಕಾರ್ಯದರ್ಶಿ ಜೆ.ಎಸ್ ವೀರೇಶ್, ಬಿ.ಚನ್ನವೀರಯ್ಯ ಮತ್ತಿತರ ಸಹೋದ್ಯೋಗಿಗಳು ಸಂತಾಪ ಸೂಚಿಸಿದ್ದಾರೆ.

KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಮತ ಯಂತ್ರಗಳಿಂದ ಪಾರದರ್ಶಕತೆ, ದಕ್ಷತೆ ಹೆಚ್ಚಾಗಿದೆ : ಮೋದಿ**
ನವದೆಹಲಿ : ಮತ ಯಂತ್ರಗಳಿಂದಾಗಿ ದೇಶದ ಚುನಾವಣಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ಹಾಗೂ ದಕ್ಷತೆ ಹೆಚ್ಚಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಮುಂದಿನ ವರ್ಷ ನಡೆಯುವ ಲೋಕಸಭಾ ಚುನಾವಣೆಯಲ್ಲಿ ದೇಶದ 100 ಕೋಟಿ ಜನರು ಮತದಾನದ ಅರ್ಹತೆ ಪಡೆಯಲಿದ್ದಾರೆ ಎಂದೂ ಅವರು ತಿಳಿಸಿದ್ದಾರೆ.

**ಸಿಖ್ ಗಲಭೆ ಸಂತ್ರಸ್ತರಿಗೆ 2014ರ ನಂತರ ನ್ಯಾಯ : ಅಮಿತ್ ಷಾ**
ನವದೆಹಲಿ : 1984ರ ಸಿಖ್ ವಿರೋಧಿ ಗಲಭೆಗಳ ಸಂತ್ರಸ್ತರಿಗೆ 2014ರಲ್ಲಿ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ನ್ಯಾಯ ಸಿಗುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಹೇಳಿದ್ದಾರೆ. ರಾಜಕೀಯ ಪ್ರೇರಿತವಾಗಿ 1984ರಲ್ಲಿ ಸಿಖ್ ವಿರೋಧಿ ಗಲಭೆ ನಡೆಸಲಾಗಿತ್ತು ಎಂದೂ ಅವರು ಹೇಳಿದ್ದಾರೆ.

**ಮಣಿಪುರ ವಿದ್ಯಾರ್ಥಿಗಳ ಕಣ್ಮರೆ ಪ್ರಕರಣ; ಓರ್ವನ ಬಂಧನ**
ನವದೆಹಲಿ : ಮಣಿಪುರದ ಇಬ್ಬರು ವಿದ್ಯಾರ್ಥಿಗಳ ಕಣ್ಮರೆ ಪ್ರಕರಣದ ಸಂಚಿನ ರೂವಾರಿ ಎನ್ನಲಾದ 22 ವರ್ಷದ ವ್ಯಕ್ತಿಯನ್ನು ಸಿ.ಬಿ.ಐ. ಪುಣೆಯಲ್ಲಿ ಬಂಧಿಸಿದೆ. ಕಣ್ಮರೆಯಾಗಿರುವ ವಿದ್ಯಾರ್ಥಿಗಳು ಹತರಾಗಿರುವ ಶಂಕೆ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

**ಬಿಜೆಪಿ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿದೆ : ಠಾಕೂರ್**
ಮುಂಬೈ : ಪ್ರತಿ ಚುನಾವಣೆಯನ್ನು ಬಿಜೆಪಿ ಗಂಭೀರವಾಗಿ ಪರಿಗಣಿಸುತ್ತದೆ. ಹೀಗಾಗಿಯೇ ಮುಂಬರುವ ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಗೆ ಕೇಂದ್ರ ಸಚಿವರು ಹಾಗೂ ಸಂಸದರನ್ನು ಕಣಕ್ಕಿಳಿಸಲಾಗಿದೆ ಎಂದು ಕೇಂದ್ರ ಸಚಿವ ಹಾಗೂ ಬಿಜೆಪಿ ನಾಯಕ ಅನುರಾಗ್ ಠಾಕೂರ್ ಹೇಳಿದ್ದಾರೆ.

**ಮುಂಚೂಣಿ ಹಂತದಲ್ಲಿ ಭಾರತ – ಬ್ರಿಟನ್ ವ್ಯಾಪಾರಿ ಒಪ್ಪಂದ**
ನವದೆಹಲಿ : ಭಾರತ ಮತ್ತು ಬ್ರಿಟನ್ ನಡುವೆ ಮುಕ್ತ ವ್ಯಾಪಾರಿ ಒಪ್ಪಂದದ ಪ್ರಸ್ತಾಪ ಮುಂಚೂಣಿ ಹಂತದಲ್ಲಿದೆ. ಭಿನ್ನಾಭಿಪ್ರಾಯಗಳ ನಿವಾರಣೆಗಾಗಿ ಉಭಯಂತರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಸರ್ಕಾರದ ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

**ಕ್ರಿಪ್ಟೋ ಕುರಿತು ತ್ವರಿತ ಕ್ರಮಕ್ಕೆ ಜಿ20 ಸಚಿವರ ಆಗ್ರಹ**
ನವದೆಹಲಿ : ಕ್ರಿಪ್ಟೋ ಆಸ್ತಿಗಳಿಗೆ ಸಂಬಂಧಿಸಿದಂತೆ ಜಿ20 ಮಾರ್ಗ ಸೂಚಿಯನ್ನು ತ್ವರಿತವಾಗಿ ಜಾರಿಗೆ ತರಬೇಕು ಎಂದು ಜಿ20 ದೇಶಗಳ ಹಣಕಾಸು ಸಚಿವರು ಅಭಿಪ್ರಾಯಪಟ್ಟಿದ್ದಾರೆ. ಈ ದಿಸೆಯಲ್ಲಿ ತ್ವರಿತ ಹಾಗೂ ಸಮನ್ವಯದ ಕ್ರಮಗಳ ಅಗತ್ಯವಿದೆ ಎಂದವರು ಹೇಳಿದ್ದಾರೆ.

**ಕಾಶ್ಮೀರ : ಉಗ್ರರ ಸ್ಫೋಟ ಸಂಚು ಬಯಲು**
ನವದೆಹಲಿ : ಜಮ್ಮು ಮತ್ತು ಕಾಶ್ಮೀರದ ಕುಪ್ವಾರ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾರೀ ಸ್ಫೋಟ ನಡೆಸುವ ಸಂಚನ್ನು ಸೈನ್ಯ ತಪ್ಪಿಸಿದೆ. ಈ ಮಾರ್ಗದಲ್ಲಿ ಸುಮಾರು ಸಾವಿರ ನಾಗರಿಕ ವಾಹನಗಳು ಹಾಗೂ 200 ರಕ್ಷಣಾ ವಾಹನಗಳು ಸಂಚರಿಸುತ್ತವೆ. ಸುಧಾರಿತ ಸ್ಫೋಟಕವನ್ನು 10 ಕೆ.ಜಿ.ಯ ಮೂರು ಅಡುಗೆ ಅನಿಲ ಸಿಲಿಂಡರ್‌ಗಳಿಗೆ ಅಳವಡಿಸಲಾಗಿತ್ತು.

**ಆಫ್ಘಾನ್ ಮಸೀದಿಯಲ್ಲಿ ಆತ್ಮಹತ್ಯಾ ದಾಳಿ, 7 ಸಾವು**
ಕಾಬೂಲ್ : ಉತ್ತರ ಆಫ್ಘಾನಿಸ್ತಾನದ ಮಸೀದಿಯಲ್ಲಿ ಆತ್ಮಹತ್ಯಾ ಬಾಂಬ್ ದಾಳಿ ನಡೆಸಲಾಗಿದ್ದು, ಏಳು ಜನ ಸಾವನ್ನಪ್ಪಿದ್ದಾರೆ ಹಾಗೂ 15 ಜನ ಗಾಯಗೊಂಡಿದ್ದಾರೆ. ಶಿಯಾ ಮಸೀದಿಯ ಮೇಲೆ ದಾಳಿ ನಡೆಸಲಾಗಿದೆ ಎಂದು ಆಫ್ಘಾನ್ ಅಧಿಕಾರಿಗಳು ಹೇಳಿದ್ದಾರೆ.

# ಇಸ್ರೇಲ್ ಎಚ್ಚರಿಕೆ: ಉತ್ತರ ಗಾಜಾ ತೊರೆಯುತ್ತಿರುವ ಜನ

ಜೆರುಸಲೇಂ, ಅ. 13 – ಗಾಜಾದ ಮೇಲೆ ನೆಲದ ಮೂಲಕ ಕಾರ್ಯಾಚರಣೆ ನಡೆಸಲು ಉದ್ದೇಶಿಸಿರುವ ಇಸ್ರೇಲ್, ಅಲ್ಲಿನ ಹತ್ತು ಲಕ್ಷ ಜನರು ಬೇರೆಡೆ ತೆರಳುವಂತೆ ತಿಳಿಸಿದೆ. ಇದರಿಂದಾಗಿ ಜನರು ಉತ್ತರ ಗಾಜಾದಿಂದ ಸಾಮೂಹಿಕವಾಗಿ ವಲಸೆ ಹೋಗುತ್ತಿದ್ದಾರೆ.

ಗಾಜಾದ ಜನಸಂಖ್ಯೆಯ ಬಹುತೇಕ ಅರ್ಧದಷ್ಟು ಜನರು ಸ್ಥಳಾಂತರಗೊಳ್ಳಲು ಇಸ್ರೇಲ್ ತಿಳಿಸಿದೆ. ಇದರಿಂದಾಗಿ ಸಾವು-ನೋವುಗಳು ಉಂಟಾಗಲಿವೆ ಎಂದು ವಿಶ್ವಸಂಸ್ಥೆ ಎಚ್ಚರಿಸಿದೆ.

ಕುಟುಂಬಗಳು ಕಾರು, ಲಾರಿ ಹಾಗೂ ಕತ್ತೆ ಗಾಡಿಗಳ ಮೂಲಕ ಗಾಜಾ ನಗರದಿಂದ ಹೊರಗೆ ಹೋಗುತ್ತಿದ್ದಾರೆ.

ಶುಕ್ರವಾರದಂದು ದಕ್ಷಿಣ ಗಾಜಾ ಬಡಾವಣೆಗಳ ಮೇಲೆ ಇಸ್ರೇಲ್ ತೀವ್ರ ದಾಳಿ ನಡೆಸಿತ್ತು. ಅದರ ಪಡೆಗಳು ತಾತ್ಕಾಲಿಕವಾಗಿ ಗಾಜಾಗೆ ತೆರಳಿ ಉಗ್ರರ ವಿರುದ್ಧ ಕಾರ್ಯಾಚರಣೆ ನಡೆಸಿದ್ದವು.

ಇಸ್ರೇಲ್ ಮೇಲೆ ತೀವ್ರ ದಾಳಿ ನಡೆಸುವ ಮೂಲಕ ಸಂಘರ್ಷ ಆರಂಭಿಸಿದ್ದ ಹಮಾಸ್, ಈಗಲೂ ಹೋರಾಟ ಮುಂದುವರೆಸುವ ಸೂಚನೆ ನೀಡಿದೆ. ಜನರು ಇಸ್ರೇಲ್ ಸೂಚನೆ ಪಾಲಿಸಬಾರದು. ಒಗ್ಗಟ್ಟನ್ನು ಮುರಿಯಲು ಇಸ್ರೇಲ್ ಮಾನಸಿಕ ಯುದ್ಧ ನಡೆಸುತ್ತಿದೆ ಎಂದು ಹಮಾಸ್ ಹೇಳಿದೆ.

ಹಮಾಸ್‌ನ ಸೈನಿಕ ನೆಲೆಗಳನ್ನು ಧ್ವಂಸಗೊಳಿಸಲು ಇಸ್ರೇಲ್ ಬಯಸಿದೆ. ಆದರೆ, ಈ ನೆಲೆಗಳು ನೆಲದಡಿ ಇವೆ. ಹೀಗಾಗಿ ವಿಮಾನ ದಾಳಿಯ ಮೂಲಕ ಉಗ್ರ ನೆಲೆಗಳ ನಾಶ ಸಾಧ್ಯವಿಲ್ಲ.

ಜನರನ್ನು ಗಾಜಾದಿಂದ ಹಿಂದೆ ಸರಿಸಿ ಕಾರ್ಯಾಚರಣೆ ನಡೆಸಲು ಇಸ್ರೇಲ್ ಸೈನ್ಯ ಬಯಸಿದೆ. ಇದರಿಂದ ನಾಗರಿಕರ ಸಾವು ನೋವುಗಳನ್ನು ತಪ್ಪಿಸಬಹುದಾಗಿದೆ. ಯುದ್ಧ ಮುಗಿದ ನಂತರ ನಾಗರಿಕರು ತಮ್ಮ ನೆಲೆಗಳಿಗೆ ಮರಳಬಹುದು ಎಂದು ಇಸ್ರೇಲ್ ಹೇಳಿದೆ.

ಹಮಾಸ್ ಉಗ್ರರು ನಾಗರಿಕ ನೆಲೆಗಳಿಂದ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಪ್ಯಾಲೆಸ್ತೇನ್ ನಾಗರಿಕರನ್ನು ಉಗ್ರರು ಮಾನವ ಕೋಟೆಯಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ಇಸ್ರೇಲ್ ಸಾಕಷ್ಟು ದಿನಗಳಿಂದ ಹೇಳುತ್ತಾ ಬಂದಿದೆ.

ಈ ಬಗ್ಗೆ ಮಾತನಾಡಿರುವ ಇಸ್ರೇಲ್ ರಕ್ಷಣಾ ಸಚಿವ ಯೋವ್ ಗ್ಯಾಲಂಟ್, ಉಗ್ರರು ನಾಗರಿಕರ ನಡುವೆ ಬಚ್ಚಿಕೊಳ್ಳುತ್ತಿದ್ದಾರೆ. ಹೀಗಾಗಿ ಅವರನ್ನು ಜನರಿಂದ ಪ್ರತ್ಯೇಕಿಸಬೇಕಿದೆ. ಜೀವ ಉಳಿಸಿಕೊಳ್ಳಬೇಕಾದವರು ದಯವಿಟ್ಟು ದಕ್ಷಿಣ ಪ್ರದೇಶಕ್ಕೆ ಹೋಗಿ ಎಂದಿದ್ದಾರೆ.

ಗಾಜಾದಲ್ಲಿರುವ ಅರ್ಧದಷ್ಟು ಜನರು 1948ರ ಯುದ್ಧದ ವಲಸಿಗರೇ ಆಗಿದ್ದಾರೆ. ಆ ಸಂದರ್ಭದಲ್ಲಿ ನಡೆದ ಯುದ್ಧದ ಕಾರಣದಿಂದಾಗಿ ಅವರು ಗಾಜಾಗೆ ವಲಸೆ ಬಂದಿದ್ದರು. ಈಗ ಮತ್ತೆ ವಲಸೆ ಹೋದರೆ ತಮ್ಮ ನೆಲೆಗಳಿಗೆ ಮರಳಲು ಸಾಧ್ಯವಾಗದೇ ಇರಬಹುದು ಎಂಬ ಕಳವಳ ಸಾಕಷ್ಟು ಜನರಲ್ಲಿದೆ.

ಗಾಜಾ ಜನರು ಎದುರಿಸುತ್ತಿರುವ ಸಂಕಷ್ಟಗಳ ಬಗ್ಗೆ ಪ್ರತಿಕ್ರಿಯಿಸಿರುವ ಇಸ್ರೇಲ್ ಸೈನ್ಯದ ವಕ್ತಾರ ರಿಯರ್ ಅಡ್ಮಿರಲ್ ಡೇನಿಯಲ್ ಹಗರಿ, ಇದು ಯುದ್ಧ ವಲಯವಾಗಿದೆ. ಜನರು ಬೇರೆಡೆಗೆ ತೆರಳದಂತೆ ಹಮಾಸ್ ತಡೆದರೆ, ಅವರ ಹೊಣೆ ಆ ಸಂಘಟನೆಯದ್ದೇ ಆಗಿದೆ ಎಂದಿದ್ದಾರೆ.

ಈ ನಡುವೆ, ಸಾಕಷ್ಟು ಜನರು ಈಜಿಪ್ಟ್ ಕಡೆ ತೆರಳುತ್ತಿದ್ದಾರೆ. ಪ್ಯಾಲೆಸ್ತೇನಿನ ಸಾವಿರಾರು ಜನರು ಗಾಜಾದಿಂದ ತನ್ನ ನೆಲಕ್ಕೆ ಬರುತ್ತಿರುವುದು ಈಜಿಪ್ಟ್‌ಗೆ ಸಮಸ್ಯೆ ತಂದಿದೆ.

ಪ್ಯಾಲೆಸ್ತೇನಿನ ಜನರು ಗಡಿ ಉಲ್ಲಂಘಿಸುವುದನ್ನು ತಡೆಯಲು ಈಜಿಪ್ಟ್ ಸಾವಿರಾರು ಸೈನಿಕರನ್ನು ಗಡಿಗೆ ರವಾನಿಸಿದೆ.



## ಹರಿಹರ : ದುಶ್ಚಟಗಳ ದಾಸರಾಗದೇ ಓದಿನ ಕಡೆ ಆಸಕ್ತಿ ತೋರಬೇಕು

### ಎಸ್.ಜೆ.ವಿ.ಪಿ. ಕಾಲೇಜಿನ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ

ಹರಿಹರ, ಅ,13- ವಿದ್ಯಾರ್ಥಿ ಗಳು ತಮ್ಮ ವಿದ್ಯಾಭ್ಯಾಸದ ದಿನಗಳಲ್ಲಿ ದುಶ್ಚಟಗಳಿಗೆ ದಾಸರಾಗದೇ, ಓದು ವುದರ ಕಡೆಗೆ ಹೆಚ್ಚು ಆಸಕ್ತಿ ತೋರಿ ಸಿದರೆ ಮುಂದಿನ ದಿನಗಳಲ್ಲಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಬಹುದು ಎಂದು ದಾವಣಗೆರೆಯ ಹಿರಿಯ ಪತ್ರಕರ್ತ ಹಾಗೂ ಸಾಹಿತಿ ಬಾ.ಮ. ಬಸವರಾಜಯ್ಯ ಅಭಿಪ್ರಾಯಪಟ್ಟರು.

ನಗರದ ಎಸ್.ಜೆ.ವಿ.ಪಿ. ಕಾಲೇಜು ಸಭಾಂಗಣದಲ್ಲಿ ನಿನ್ನೆ ನಡೆದ ಶೈಕ್ಷಣಿಕ ಚಟುವಟಿಕೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ ಓದುವ ಸಮಯ ಮತ್ತೆ ಜೀವನದಲ್ಲಿ ಸಿಗದೇ ಇರುವಂತಹ ಸುವರ್ಣ ಅವಕಾಶ ವಾಗಿರುತ್ತದೆ. ಈ ಸಂದರ್ಭವನ್ನು ಯಾವ ವಿದ್ಯಾರ್ಥಿ ಸರಿಯಾದ ರೀತಿ ಯಲ್ಲಿ ಸದ್ಬಳಕೆ ಮಾಡಿಕೊಳ್ಳುತ್ತಾ ರೋ, ಶಿಸ್ತು, ಸಂಯಮ, ಏಕಾಗ್ರತೆ ಹಾಗೂ ಸಮಯ ಪಾಲನೆ ಇವೆಲ್ಲವನ್ನೂ ಯಾರು ಸರಿದೂಗಿಸಿ ಕೊಂಡು ಹೋಗುತ್ತಾರೋ ಅವರು ಜೀವನದಲ್ಲಿ ಸತ್ಪ್ರಜೆಗಳಾಗಿ ಹೊರಹೊಮ್ಮುತ್ತಾರೆ, ದೇಶದ ಉನ್ನತ ಸ್ಥಾನ ಅಲಂಕರಿಸುತ್ತಾರೆ ಎಂದರು.

ವಿದ್ಯಾರ್ಥಿಗಳಲ್ಲಿ ನಿರ್ಲಕ್ಷ್ಯ ಭಾವನೆಗಳು ಇದ್ದರೆ ಯಶಸ್ಸು ಕಾಣುವುದು ಕಷ್ಟವಾಗುತ್ತದೆ. ಹಾಗಾಗಿ ಲವಲವಿಕೆ ಹೆಚ್ಚು ಇರಬೇಕು. ಪುಸ್ತಕಗಳನ್ನು ಹೆಚ್ಚು ಓದಬೇಕು. ಓದಿನ ಜೊತೆಗೆ ವಿವಿಧ ಸಾಮಾಜಿಕ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವ ಮನೋಭಾವನೆ ಬೆಳೆಸಿಕೊಳ್ಳಬೇಕು. ಕೀಳರಿಮೆ ಭಾವ ನೆಗಳನ್ನು ಬೆಳೆಸಿಕೊಳ್ಳದೇ, ಆರೋಗ್ಯ ಕರ ಪೈಪೋಟಿ ಬೆಳೆಸಿಕೊಂಡರೆ ಗುಣ ಮಟ್ಟದ ಶಿಕ್ಷಣ ಪಡೆಯಬಹುದು ಎಂದು ಹೇಳಿದರು.

ಡಾ. ವೀರಣ್ಣ ಬಿ. ಶೆಟ್ಟರ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಈ ಸಂದರ್ಭದಲ್ಲಿ ಎಸ್.ಜೆ.ವಿ.ಪಿ. ಕಾಲೇಜು ಉಪಾಧ್ಯಕ್ಷ ಡಿ.ಎಂ. ಹಾಲಸ್ವಾಮಿ, ನಿರ್ದೇಶಕ ಎನ್.ಹೆಚ್. ಪಾಟೀಲ್, ಪ್ರಾಂಶುಪಾಲೆ ಎನ್.ಹೆಚ್. ಶಿವಗಂಗಮ್ಮ, ರಮೇಶ್ ಕೆ. ಪರ್ವತಿ, ವಿಶಾಲ ಬೆಂಚಳಾ, ಜಿ. ರಶ್ಮಿ, ನಳಿನಾ ಇತರರು ಹಾಜರಿದ್ದರು.

## ನಗರದಲ್ಲಿ ಇಂದು ಗಣಪತಿ ವಿಸರ್ಜನೆ ವಾಹನ ಸಂಚಾರ ಮಾರ್ಗ ಬದಲಾವಣೆ

ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ಪ್ರತಿಷ್ಠಾಪನೆ ಮಾಡಿರುವ ಗಣೇಶ ಮೂರ್ತಿಯ ವಿಸರ್ಜನಾ ಮೆರವಣಿಗೆ ಸಂದರ್ಭದಲ್ಲಿ ಹೆಚ್ಚಿನ ಜನ ಸೇರುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಇಂದು ಬೆಳಗ್ಗೆ 6 ರಿಂದ ರಾತ್ರಿ 10 ಗಂಟೆಯವರೆಗೆ ಮಾತ್ರ ಕೆಎಸ್‌ಆರ್‌ಟಿಸಿ ಮತ್ತು ಖಾಸಗಿ ಬಸ್‌ನಿಲ್ದಾಣಗಳಿಗೆ ಬರುವ ಬಸ್‌ಗಳ ಮಾರ್ಗ ಬದಲಾವಣೆ ಮಾಡಿ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ದಂಡಾಧಿಕಾರಿ ಡಾ.ಎಂ.ವಿ ವೆಂಕಟೇಶ್ ಆದೇಶಿಸಿದ್ದಾರೆ.



**ಮಾರ್ಗ ಬದಲಾವಣೆ ವಿವರ:** ಚನ್ನಗಿರಿ ರಸ್ತೆ ಕಡೆಯಿಂದ ಬರುವ ಬಸ್‌ಗಳು ಹದಡಿ ರಸ್ತೆಯಲ್ಲಿರುವ ಮಾಗನೂರು ಬಸಪ್ಪ ಮೈದಾನದಲ್ಲಿ ನಿಲುಗಡೆ ಮಾಡಿಕೊಂಡು ನಿರ್ಗಮಿಸುವುದು.

ಜಗಳೂರು ಕಡೆಯಿಂದ ಬರುವ ಬಸ್‌ಗಳು ಕೆ.ಆರ್.ರಸ್ತೆ ಗಣೇಶ ಗುಡಿ ಪಕ್ಕದಲ್ಲಿರುವ ಜಗಳೂರು ಬಸ್ ನಿಲ್ದಾಣದಲ್ಲಿ ನಿಲುಗಡೆ ಮಾಡಿಕೊಂಡು ನಂತರ ಆರ್‌ಎಂಸಿ ಯಾರ್ಡ್ ರಸ್ತೆ ಮೂಲಕ ಫ್ಲೈ ಓವರ್ ಹತ್ತಿರ ಬಂದು ವಾಪಾಸ್ ಅದೇ ಮಾರ್ಗವಾಗಿ ಹೋಗುವುದು.

ಚಿತ್ರದುರ್ಗ ಮತ್ತು ಸಂತೇಬೆನ್ನೂರು, ಬೀರೂರು ಸಮ್ಮಸಗಿ ರಸ್ತೆಯಿಂದ ಬರುವ ಬಸ್‌ಗಳು ನಗರದ ನಿರ್ಮಾಣ ಹಂತದಲ್ಲಿರುವ ಹೊಸ ಕೆಎಸ್‌ಆರ್‌ಟಿಬಸ್ ನಿಲ್ದಾಣಕ್ಕೆ ಬಂದು ವಾಪಾಸ್ ಬಾಡಾ ಕ್ರಾಸ್ ನ ರಸ್ತೆ ಮೂಲಕ ಹರಿಹರ, ಹಾವೇರಿ ಕಡೆಗೆ ಹೋಗುವುದು,

ಹರಿಹರ ಮತ್ತು ಶಾಮನೂರು ಕಡೆಯಿಂದ ಬರುವ ವಾಹನಗಳನ್ನು ನಗರದ ಎಸಿಬಿ ಕಛೇರಿ ಎದುರುಗಡೆ ರಿಂಗ್ ರಸ್ತೆಯಲ್ಲಿರುವ ಎರಡು ಖಾಲಿ ಜಾಗದಲ್ಲಿ ನಿಲುಗಡೆ ಮಾಡಿಕೊಂಡು ನಿರ್ಗಮಿಸಬೇಕೆಂದು ತಿಳಿಸಲಾಗಿದೆ.

ಹಿಂದೂ ಮಹಾ ಗಣಪತಿ ಮೂರ್ತಿ ವಿಸರ್ಜನಾ ಮೆರವಣಿಗೆ ಎ.ವಿ.ಕೆ ರಸ್ತೆ, ಚೇತನ್ ಹೋಟೆಲ್ ಎಡಭಾಗದಿಂದ ಅಂಬೇಡ್ಕರ್ ವೃತ್ತ, (ಮುಸ್ಲಿಂ ಹಾಸ್ಟೆಲ್ ಕಾಂಪ್ಲೆಕ್ಸ್), ಜಯದೇವ ಸರ್ಕಲ್, ಲಾಯರ್ ರಸ್ತೆ, ಪಿ.ಬಿ .ರಸ್ತೆ, ಗಾಂಧಿ ವೃತ್ತ, ಹಳೇ ಬಸ್ ನಿಲ್ದಾಣ, ಅರಸು ಕ್ರಾಸ್, ಮಹಾನಗರ ಪಾಲಿಕೆ, ರಾಣಿ ಚೆನ್ನಮ್ಮ ವೃತ್ತ, ಈದ್ಗಾ ಮೈದಾನ (ಖಬರಸ್ಥಾನ್), ಮದೀನ ಮಸೀದಿ, ಕೋರ್ಟ್ ವೃತ್ತದ ಮೂಲಕ ಸಂಗೊಳ್ಳಿ ರಾಯಣ್ಣ ವೃತ್ತಕ್ಕೆ ಬಂದು ಮೆರವಣಿಗೆ ಮುಕ್ತಾಯ ಮಾಡಿ ಗಣೇಶ ಮೂರ್ತಿಯನ್ನು ಬಾತಿ ಕೆರೆಯಲ್ಲಿ ವಿಸರ್ಜನೆ ಮಾಡಲಾಗುತ್ತದೆ.

## ನಗರದಲ್ಲಿ ಇಂದು ಯಕ್ಷಗಾನ ತಾಳಮದ್ದಳೆ 'ವೀರ ಸನ್ಯಾಸಿ'

ಯಕ್ಷಾಭಿಮಾನಿಗಳ ಪಾಯೋಜಕತ್ವದಲ್ಲಿ ಇಂದು ಸಂಜೆ 7 ಕ್ಕೆ ಏಕವ್ಯಕ್ತಿ ಯಕ್ಷಗಾನ ತಾಳಮದ್ದಳೆಯಲ್ಲಿ 'ವೀರ ಸನ್ಯಾಸಿ' ಕಾರ್ಯಕ್ರಮವು ವಿನೋಬ ನಗರದ ಕೆನರಾ ಬ್ಯಾಂಕ್ ಎದುರು ಇರುವ ರಾಮಕೃಷ್ಣ ಮಿಷನ್‌ನಲ್ಲಿ ನಡೆಯಲಿದೆ.

## ನಗರದಲ್ಲಿ ಇಂದು ಯಕ್ಷಗಾನ ತಾಳಮದ್ದಳೆ 'ಶ್ರೀ ಕೃಷ್ಣ ನಿರ್ಯಾಣ'

ಬ್ರಹ್ಮ ಚೈತನ್ಯ ಮಂದಿರದ ಪಾಯೋಜಕತ್ವದಲ್ಲಿ ಇಂದು ಮಧ್ಯಾಹ್ನ 11.30 ರಿಂದ ಏಕವ್ಯಕ್ತಿ ಯಕ್ಷಗಾನ ತಾಳಮದ್ದಳೆಯಲ್ಲಿ 'ಶ್ರೀ ಕೃಷ್ಣ ನಿರ್ಯಾಣ' ಕಾರ್ಯಕ್ರಮವು ರಿಂಗ್ ರಸ್ತೆ ಶ್ರೀ ಶಾರದಾಂಬಾ ದೇವಸ್ಥಾನದ ಬಳಿ ಇರುವ ಶ್ರೀ ಸದ್ಗುರು ಬ್ರಹ್ಮ ಚೈತನ್ಯ ಮಂದಿರದಲ್ಲಿ ನಡೆಯಲಿದೆ.

## ರಾಜಕೀಯ ಉದ್ದೇಶವಿಲ್ಲದೆ ಐಟಿ ದಾಳಿ ನಡೆಯುವುದಿಲ್ಲ : ಡಿ.ಕೆ. ಶಿವಕುಮಾರ್

ಬೆಂಗಳೂರು, ಅ.13 - ರಾಜಕೀಯ ಉದ್ದೇಶವಿಲ್ಲದೆ ದೇಶದಲ್ಲಿ ಆದಾಯ ತೆರಿಗೆ (ಐ.ಟಿ) ದಾಳಿ ನಡೆಯುವುದಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಐಟಿ ದಾಳಿ ಹಿಂದೆ ರಾಜಕೀಯ ಇದೆಯೇ ಎಂದು ಕೇಳಿದಾಗ, ರಾಜಕೀಯ ಇಲ್ಲದೇ ಯಾವ ಐಟಿ ದಾಳಿಯೂ ನಡೆಯುವುದಿಲ್ಲ. ಕೇವಲ ನಮ್ಮಲ್ಲಿ ಮಾತ್ರ ಅಲ್ಲ ಬೇರೆ ರಾಜ್ಯಗಳಲ್ಲೂ ರಾಜಕೀಯ ಪ್ರೇರಿತ ಐಟಿ ದಾಳಿ ಆಗುತ್ತಿವೆ ಎಂದು ತಿಳಿಸಿದರು.

ಪಂಚರಾಜ್ಯಗಳ ಚುನಾವಣೆಗೆ ಕರ್ನಾಟಕದಿಂದ ಹಣ ಕಳಿಸಲಾಗುತ್ತಿದೆ ಎಂಬ ಮಾಜಿ ಸಚಿವ ಅಶ್ವತ್ಥ ನಾರಾಯಣ ಅವರ ಆರೋಪದ ಬಗ್ಗೆ ಕೇಳಿದಾಗ, ಹಾದಿ ಬೀದಿಯಲ್ಲಿ ಹೋಗುವವರ ಮಾತಿಗೆ ನಾನು ಉತ್ತರಿಸುವುದಿಲ್ಲ ಎಂದು ತಿಳಿಸಿದರು.

ಬಿಬಿಎಂಪಿಯಿಂದ ಬಿಡುಗಡೆ ಆದ 650 ಕೋಟಿ ಅನುದಾನದಲ್ಲಿ ಪಡೆದ ಕಮೀಷನ್ ಹಣವನ್ನು ಅಂಬಿಕಾಪತಿ ಮೂಲಕ ಕಳಿಸುತ್ತಿದ್ದರು ಎಂಬ ಆರೋಪದ ಬಗ್ಗೆ ಕೇಳಿದಾಗ, ಈ ವಿಚಾರವಾಗಿ ನನಗೆ ಗೊತ್ತಿಲ್ಲ ಎಂದು ತಿಳಿಸಿದರು.

ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರು ಬಿಲ್ ಪಾವತಿಗೆ ಸಂಬಂಧಿಸಿದಂತೆ ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಆತಂಕ ಪಡುವ ಅಗತ್ಯವಿಲ್ಲ. ಏನಾದರೂ ಇದ್ದರೆ ಬಂದು ನಮ್ಮ ಬಳಿ ಮಾತನಾಡಲಿ. ನಾವು ನ್ಯಾಯ ಒದಗಿಸುತ್ತೇವೆ ಎಂದರು.

ಕೆಂಪಣ್ಣ ಅವರ ಮನವಿ ಮೇರೆಗೆ ನಾವು ತನಿಖೆ ಪಕ್ಕಕ್ಕಿಟ್ಟು, ಆದ್ಯತೆ ಮೇರೆಗೆ ಕಾಮಗಾರಿಗಳ 60-70% ಹಣ ಬಿಡುಗಡೆ ಮಾಡಿದ್ದೇವೆ. ಬಿಲ್ ಪಾವತಿ ಸಮಯದಲ್ಲಿ ಜಿಎಸ್‌ಟಿ ಕೂಡ ಪಾವತಿ ಮಾಡಬೇಕು. ಹೀಗಾಗಿ ತನಿಖಾ ವರದಿ ಬರುವ ಮುನ್ನವೇ ನಾವು ಸುಮಾರು ಮುಕ್ಕಾಲು ಭಾಗ ಹಣ ಬಿಡುಗಡೆ ಮಾಡಿದ್ದೇವೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

## ಬೆಂಗಳೂರು ನಗದು ಅಭಿವೃದ್ಧಿ ಇಲಾಖೆಯ ಕೈ ಕರಾಮತ್ತು

### ಐ.ಟಿ. ದಾಳಿಯಲ್ಲಿ 42 ಕೋಟಿ ರೂ. ಸಿಕ್ಕ ಬಗ್ಗೆ ಕುಮಾರಸ್ವಾಮಿ ಲೇವಡಿ

ಬೆಂಗಳೂರು, ಅ.13 - ಗುತ್ತಿಗೆದಾರನ ಮನೆಯಲ್ಲಿ ಸಿಕ್ಕಿರುವ 42 ಕೋಟಿ ರೂಪಾಯಿ ಕಂತೆ ಕಂತೆ ಹಣದ ಮೂಲವನ್ನು ಪ್ರಶ್ನೆ ಮಾಡಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು, ಇದು 'ಬೆಂಗಳೂರು ನಗದು ಅಭಿವೃದ್ಧಿ ಇಲಾಖೆ'ಯ ಕೈ ಕರಾಮತ್ತು ಎಂದು ಕಾಂಗ್ರೆಸ್ ಪಕ್ಷಕ್ಕೆ ಕಾಲೆಳೆದಿದ್ದಾರೆ.

ಈ ಬಗ್ಗೆ ಖಾರವಾದ ಪ್ರತಿಕ್ರಿಯೆ ನೀಡಿರುವ ಅವರು, ಪಂಚರಾಜ್ಯ ಚುನಾವಣೆ ಘೋಷಣೆ ಆಗಿದ್ದೇ ತಡ, ರಾಜ್ಯದಲ್ಲಿ ಕುರುಡು ಕಾಂಚಾಣ ಕಂತೆ ಕಂತೆಯಾಗಿ ಕಾಟನ್ ಬಾಕ್ಸ್ ಗಳಲ್ಲಿ ಕುಣಿಯುತ್ತಿದೆ. ಅದೂ ಮಂಚದ ಕೆಳಗೆ ಆದಾಯ ತೆರಿಗೆ ಇಲಾಖೆ (ಐ.ಟಿ) ದಾಳಿ ವೇಳೆ ಗುತ್ತಿಗೆದಾರನ ಮನೆಯಲ್ಲಿ ಪತ್ತೆಯಾದ ಹಣ ಯಾರದ್ದು? ಯಾರ ಹೆಣದ ಮೇಲೆ ಸಂಗ್ರಹಿಸಿದ ಪಾಪದ ಹಣವಿದು? ಈ ಪ್ರಶ್ನೆಗಳಿಗೆ ಉತ್ತರ ಬೇಕಿದೆ ಎಂದು ಹೇಳಿದ್ದಾರೆ.

ಆಯ್ದ ಗುತ್ತಿಗೆದಾರರಿಗೆ ಬಿಬಿಎಂಪಿಯಿಂದ 650 ಕೋಟಿ ರೂ. ಬಿಡುಗಡೆಯಾದ ಬೆನ್ನಲ್ಲೇ ಈ 42 ಕೋಟಿ ರೂ. ಐಟಿ ಅಧಿಕಾರಿಗಳಿಗೆ ಸಿಕ್ಕಿಬೀಳುತ್ತದೆ. ಅಲ್ಲಿಗೆ ಕಲೆಕ್ಷನ್ ನಿಜ ಎಂದಾಯಿತು. ಅದು ಎಷ್ಟು ಪರ್ಸೆಂಟೇಜ್? ಅದರ ಹಿಂದೆ ಅಡಗಿ ಕೂತಿರುವ ಆದಿ ಪುರುಷರು ಯಾರು? ಎಂದು ಅವರು ಪ್ರಶ್ನಿಸಿದ್ದಾರೆ.

23 ಬಾಕ್ಸ್ ಗಳಲ್ಲಿ ತುಂಬಿಡಲಾಗಿದ್ದ ಈ ಇಡಗಂಟು ಪಕ್ಕದ ತೆಲಂಗಾಣಕ್ಕೆ ಹೊರಟು ನಿಂತಿತ್ತು ಎನ್ನುವುದು ಮಾಹಿತಿ. ಅಲ್ಲಿಗೆ ಚುನಾವಣೆಗಾಗಿ ಈ ಹಣವನ್ನು ಸಂಗ್ರಹ ಮಾಡಲಾಗಿತ್ತು ಎನ್ನುವುದು ಸತ್ಯ. ಈ ಕನಕ ಮಹಾಲಕ್ಷ್ಮಿಯ ಕಲೆಕ್ಷನ್ ಗೆ 'ಬೆಂಗಳೂರು ನಗದು ಅಭಿವೃದ್ಧಿ ಇಲಾಖೆ'ಯ ಕೈ ಕರಾಮತ್ತು ಅಂತ ಇನ್ನೊಂದು ಮಾಹಿತಿ ಎಂದೂ ಅವರು ಹೇಳಿದ್ದಾರೆ.

## ಚೀನಾದಲ್ಲಿ ಇಸ್ರೇಲ್ ರಾಯಭಾರಿ ಉದ್ಯೋಗಿ ಮೇಲೆ ಹಲ್ಲೆ

ಬೀಜಿಂಗ್, ಅ. 13 – ಚೀನಾದಲ್ಲಿರುವ ಇಸ್ರೇಲ್ ರಾಯಭಾರಿ ಕಚೇರಿಯಲ್ಲಿ ಕೆಲಸ ಮಾಡುವ 50 ವರ್ಷದ ವ್ಯಕ್ತಿಗೆ ವಿದೇಶಿಯನೋರ್ವ ಸೂಪರ್‌ಮಾರ್ಕೆಟ್ ಎದುರು ಇರಿದು ಗಾಯಗೊಳಿಸಿದ ಘಟನೆ ನಡೆದಿದೆ. ದಾಳಿ ನಡೆಸಿದ 53 ವರ್ಷದ ವ್ಯಕ್ತಿಯನ್ನು ಬಂಧಿಸಲಾಗಿದೆ. ದಾಳಿಗೆ ಕಾರಣ ಏನೆಂಬುದು ಸ್ಪಷ್ಟವಾಗಿಲ್ಲ.

**BHARAT SANCHAR NIGAM LIMITED**
(A Government of India Enterprise)
Office of the General Manager, Telecom, Devaraj urs Layout, P.B.Road, Davanagere-06. Ph: 08192-235299, 232999

No: E467/Non-Ex/2023-24/87 Date: 12-10-2023

**ಪತ್ರಿಕಾ ಅಧಿಸೂಚನೆ**

ಶ್ರೀ ಹರೀಶ್ ಪೂಜಾರ್, S/o ಲೇಟ್ ವೈ ನಾಗರತ್ನಮ್ಮ, ATT BSNL ದಾವಣಗೆರೆ SSA, ಮರಣ ಹೊಂದಿದ ದಿನಾಂಕ:22–05–2019, HRMS ಸಂಖ್ಯೆ: 200008266 ರವರ ಗಮನಕ್ಕೆ ನಿಮ್ಮ ತಾಯಿಯ ನಿವೃತ್ತಿ ವೇತನ ಯೋಜನೆ ಇನ್ನೂ ಕ್ಲೈಮ್ ಮಾಡಲಾಗಿಲ್ಲ. ಈ ಕಛೇರಿಯು ಪಿಂಚಣಿ ನಮೂನೆಗಳನ್ನು ಕಛೇರಿ ದಾಖಲೆಗಳ ಪ್ರಕಾರ ಖಾಯಂ ವಿಳಾಸಕ್ಕೆ ಕಳುಹಿಸಿರುವುದರಿಂದ ವಿಳಾಸದಾರರು ಕಂಡುಬಂದಿಲ್ಲ ಎಂದು ಹಿಂದಿರುಗಿಸಲಾಗುತ್ತದೆ. ಆದ್ದರಿಂದ ಈ ಅಧಿಸೂಚನೆಯ 7 ದಿನಗಳಲ್ಲಿ ಕೆಲಸದ ಸಮಯದಲ್ಲಿ ಈ ಕಛೇರಿಯನ್ನು ಸಂಪರ್ಕಿಸಲು ಈ ಮೂಲಕ ಅವಕಾಶವನ್ನು ನೀಡಲಾಗಿದೆ.

**ಸಹಿ/– ಉಪವಿಭಾಗಿಯ ಇಂಜಿನಿಯರ್**
**ಪ್ರಧಾನ ವ್ಯವಸ್ಥಾಪಕರ ಕಛೇರಿ, ಬಿಎಸ್‌ಎನ್‌ಎಲ್, ದಾವಣಗೆರೆ.**

**ಸಾರ್ವಜನಿಕ ನೋಟಿಸ್**

ನಮ್ಮ ಕಕ್ಷಿದಾರರಾದ **ಡಾ: ಹರ್ಷ ಬಾಬಜಿ** ಬಿನ್ ವಿಠ್ಠಲ್ ಬಾಬಜಿ, ವಯಸ್ಸು 42 ವರ್ಷ, ವಾಸ:– ಡೋರ್ ನಂ.743, ವಿ.ಎಂ. ರೋಡ್, ಅಕ್ಕಿಆಲೂರು, ಹಾನಗಲ್ ತಾಲ್ಲೂಕ್, ಹಾವೇರಿ ಜಿಲ್ಲೆ ಆದ ಇವರು ಷೆಡ್ಯೂಲ್ ಸ್ವತ್ತಿನ ಮಾಲೀಕನಾದ ಎಸ್.ವೆಂಕಟೇಶ್ ಅನ್ ಲೇಟ್ ಎಸ್.ಸೂರನಾರಾಯಣ, ವಯಸ್ಸು 52 ವರ್ಷ, ವಾಸ:– ಡೋರ್ ನಂ.644/9, ಉತ್ತಮ್ ಲೇ ಔಟ್, ಆವರಗೆರೆ, ದಾವಣಗೆರೆ ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಆಕ್ಷೇಪಣೆದಾರರು ಇದ್ದಲ್ಲಿ ಖುದ್ದು ಅಥವಾ ವಕೀಲರ ಮೂಲಕ ಪ್ರತ್ಯೇಕ್ಷೇಪಿಸಿ ಅಖಿತ ಮೂಲಕ ಈ ಆಕ್ಷೇಪಣೆಯ ಮುಂದಿನ ಏಳು ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಆಕ್ಷೇಪಣೆಗಳಿಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಖರೀದಿ ವಹಿವಾಟನ್ನು ಕನ್ಸಿಡರೇಷನ್ ಪಾವತಿಸಿ ನೋಂದಾಯಿಸಿಕೊಳ್ಳುತ್ತಾರೆ ತಿಳಿಯಿರಿ.

**ಷೆಡ್ಯೂಲ್:** ದಾವಣಗೆರೆ ತಾಲ್ಲೂಕ್, ಸಬ್‌ರಿಜಿಸ್ಟ್ರಾರ್‌ರವರ ಆಫೀಸಿನ ಅಧಿಕಾರಕ್ಕೆ ಒಳಪಟ್ಟ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶ್ಯಾಬನೂರು ಗ್ರಾಮದ ರಿ.ಸರ್ವೆ ನಂ.112/31ಬಿ ವಿಸ್ತೀರ್ಣ 00–01½ ಗುಂಟೆವುಳ್ಳ ಪ್ರದೇಶವು ಈ ಹಿಂದೆ ವಾಸೋಪಯೋಗಕ್ಕಾಗಿ ಚಿತ್ರದುರ್ಗ ವಿಶೇಷ ಜಿಲ್ಲಾಧಿಕಾರಿಗಳವರಿಂದ ನಂ. ಎಎಲ್‌ಎನ್/ಎಸ್‌ಆರ್/35/85–86. ದಿನಾಂಕ: 19–07–1985 ರ ಆರ್ಡರ್ ಪ್ರಕಾರ ಅಲಿನೇಷನ್ ಮಂಜೂರಾಗಿ, ನಂತರ ಸದರಿ ಪ್ರದೇಶದಲ್ಲಿ ಸೈಟಿನ ಬಗ್ಗೆ ಸೈಟ್ ಪ್ಲಾನನ್ನು ತಯಾರು ಮಾಡಿ, ಸದರಿ ಪ್ಲಾನನ್ನು ದಾವಣಗೆರೆ ನಗರ ಯೋಜನಾ ಪ್ರಾಧಿಕಾರ ಇವರಿಂದ ನಂ. 1135/85–86, ದಿನಾಂಕ: 28–08–1985 ರ ಅರ್ಡರ್ ಪ್ರಕಾರ ಅಪ್ರೂವಲ್ ಮಾಡಿಸಿ ಈ ಹಿಂದೆ ಶಾಬನೂರು ಗ್ರಾಮ ಪಂಚಾಯತಿಗೆ ಅಭಿವೃದ್ಧಿ ಶುಲ್ಕವನ್ನು ಪಾವತಿ ಮಾಡಿ ಡೋರ್ ನಂಬರ್ ಹಾಗೂ ಖಾತೆ ಸಹ ದಾಖಲಾಗಿ ಇತ್ತೀಚೆಗೆ ದಾವಣಗೆರೆ ಮಹಾನಗರ ಪಾಲಿಕೆಗೆ ಸೇರ್ಪಡೆಯಾಗಿ ದಾವಣಗೆರೆ ಸಿಟಿ, ಸಿದ್ಧವೀರಪ್ಪ ಬಡಾವಣೆ, 7ನೇ ಕ್ರಾಸ್‌ನಲ್ಲಿ ಬರತಕ್ಕ ಪ್ಲಾನ್‌ನಲ್ಲಿ ಕಂಡ ಸೈಟ್ ನಂ.45 (ನಲವತ್ತೈದು), ಚಾಲ್ತಿ ಡೋರ್ ನಂ. 1987/45, ಅಳತೆ 30x40 ಅಡಿ ವುಳ್ಳ ಪೂರಾ ಜಾಗದ ಪೈಕಿ ಪಶ್ಚಿಮ ಭಾಗದ ಕಡೆಯ 15x40 ಅಡಿವುಳ್ಳ ಸ್ವತ್ತಿಗೆ ಚಕ್ಕುಬಂಧಿ: ಪೂರ್ವಕ್ಕೆ: ಇದೇ ಡೋರ್ ನಂಬರ್ ಪೈಕಿ ಉಳಿದ ಅರ್ಧ ಭಾಗದ ಸ್ವತ್ತು, **ಪಶ್ಚಿಮಕ್ಕೆ:** ಸೈಟ್ ನಂ. 46, **ಉತ್ತರಕ್ಕೆ** : ಸೈಟ್ ನಂ 36, **ದಕ್ಷಿಣಕ್ಕೆ** : ಸಿದ್ದವೀರಪ್ಪ ಬಡಾವಣೆ, 7ನೇ ಕ್ರಾಸ್ ರಸ್ತೆ, ಈ ಮಧ್ಯದ ಸ್ವತ್ತು ಒಂದು.

ಸೈಟ್ ನಂ.45 (ನಲವತ್ತೈದು) ಚಾಲ್ತಿ ಡೋರ್ ನಂಬರ್. 1987/45, ಅಳತೆ 30x40 ಅಡಿವುಳ್ಳ ಪೂರಾ ಜಾಗದ ಪೈಕಿ ಪೂರ್ವಭಾಗದ ಕಡೆಯ 15x40 ಅಡಿವುಳ್ಳ ಸ್ವತ್ತಿಗೆ **ಚಕ್ಕು ಬಂದಿ:–** ಪೂರ್ವಕ್ಕೆ :– ಸೈಟ್ ನಂ.44, **ಪಶ್ಚಿಮಕ್ಕೆ :–** ಇದೇ ಡೋರ್ ನಂಬರ್ ಪೈಕಿ ಉಳಿದ ಅರ್ಧ ಭಾಗ, **ಉತ್ತರಕ್ಕೆ:** ಸೈಟ್ ನಂ.36 : **ದಕ್ಷಿಣಕ್ಕೆ** : ಸಿದ್ದವೀರಪ್ಪ ಬಡಾವಣೆ, 7ನೇ ಕ್ರಾಸ್ ರಸ್ತೆ. ಈ ಮಧ್ಯದ ಸ್ವತ್ತು ಒಂದು.

ಈ ಎರಡೂ ಷೆಡ್ಯೂಲ್ ಸ್ವತ್ತುಗಳಲ್ಲಿ ಹಳೆಯ ಕಟ್ಟಡ ಇರುತ್ತದೆ.

**ಜಿ.ಎಸ್. ಸಣ್ಣವೀರಪ್ಪ,** B.Com., LL.B
ವಕೀಲರು.
ಗಾಯತ್ರಿ ಕಾಂಪ್ಲೆಕ್ಸ್, ರೂಂ. ನಂ. 3,
ಬ್ರಾಹ್ಮಣ ಸೇವಾ ಸಮಾಜ ಬಿಲ್ಡಿಂಗ್,
ಹಳೇ ಕೋರ್ಟ್ ರಸ್ತೆ, ದಾವಣಗೆರೆ.
ಮೊ. 9845946188, 9110819479

**ಡಾ. ಹರ್ಷಾ ಬಾಬಜಿ**
**ಬಿನ್ ವಿಠಲ ಬಾಬಜಿ**
**ಕಕ್ಷಿದಾರರು**
**(98867–36541)**

# ಈಜಿಪ್ಟಿಗೆ ಈಗ ವಲಸಿಗರ ಚಿಂತೆ

## ಗಾಜಾದ ಜನರು ಒಳಬರದಂತೆ ಸಾವಿರಾರು ಸೈನಿಕರ ನಿಯೋಜನೆ

ಕೈರೊ, ಅ. 13 – ಹಮಾಸ್ ಉಗ್ರರ ವಿರುದ್ಧ ನೆಲದ ಮೂಲಕ ಕಾರ್ಯಾಚರಣೆ ನಡೆಸುವ ಸಲುವಾಗಿ ಗಾಜಾ ಪಟ್ಟಿಯ ಹತ್ತು ಲಕ್ಷ ಜನರ ಸ್ಥಳಾಂತರಕ್ಕೆ ಇಸ್ರೇಲ್ ಸೂಚಿಸಿದೆ. ಈ ಸೂಚನೆ ಈಜಿಪ್ಟ್‌ಗೆ ವಲಸಿಗರ ಸಮಸ್ಯೆ ತಂದಿದೆ.

ಗಾಜಾ ಮೇಲೆ ಇಸ್ರೇಲ್ ದಾಳಿ ನಡೆಸಿದ ದಿನದಂದಲೂ ಮಾನವೀಯ ನೆರವು ನೀಡಲು ಈಜಿಪ್ಟ್ ಪ್ರಯತ್ನ ನಡೆಸಿದೆ. ಆದರೆ, ವೈಮಾನಿಕ ದಾಳಿಯ ಕಾರಣದಿಂದಾಗಿ ಈ ನೆರವು ಸಾಧ್ಯವಾಗುತ್ತಿಲ್ಲ. ಮಾನವೀಯ ನೆರವಿಗೆ ಅವಕಾಶ ನೀಡುವಂತೆ ಇಸ್ರೇಲ್ ಮನವೊಲಿಸಲು ಈಜಿಪ್ಟ್‌ಗೆ ಸಾಧ್ಯವಾಗುತ್ತಿಲ್ಲ.

ಒಂದೆಡೆ ಮಾನವೀಯ ನೆರವಿಗೆ ಪ್ರಯತ್ನ ನಡೆಸುತ್ತಿರುವ ಈಜಿಪ್ಟ್ ಅಧ್ಯಕ್ಷ ಅಬ್ದೆಲ್ ಫತಾ ಎಲ್ - ಸಿಸ್ಸಿ, ಮತ್ತೊಂದೆಡೆ ಪ್ಯಾಲೆಸ್ತೇನ್ ಜನರು ತಮ್ಮ ದೇಶಕ್ಕೆ ಬರುವುದನ್ನು ಬಯಸುತ್ತಿಲ್ಲ.

ಈಜಿಪ್ಟ್‌ನಲ್ಲಿ ಈಗಾಗಲೇ 90 ಲಕ್ಷ ಜನ ವಲಸಿಗರಿದ್ದಾರೆ. ಇನ್ನಷ್ಟು ಜನ ಬರುವುದನ್ನು ಬಯಸುವುದಿಲ್ಲ. ಜನರು ತಮ್ಮ ನೆಲೆಗಳಲ್ಲೇ ಸುಸ್ಥಿರವಾಗಿರಬೇಕು ಎಂದು ಅಬ್ದೆಲ್ ಹೇಳಿದ್ದಾರೆ.

ಈ ವರ್ಷವೇ ಸಮರ ಪೀಡಿತ ಸೂಡಾನ್‌ನ 3 ಲಕ್ಷ ಜನರು ಈಜಿಪ್ಟ್‌ಗೆ ವಲಸೆ ಬಂದಿದ್ದಾರೆ. ಈಜಿಪ್ಟ್ ಈಗಾಗಲೇ ಆರ್ಥಿಕ ಸಮಸ್ಯೆಯಲ್ಲಿದ್ದು, ಇನ್ನಷ್ಟು ವಲಸಿಗರನ್ನು ಕರೆದುಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಲಕ್ಷಾಂತರ ಜನರು ತನ್ನಲ್ಲಿ ಶಾಶ್ವತ ವಲಸಿಗರಾಗಬಹುದು. ಅವರು ತಮ್ಮ ನೆಲೆಗಳಿಗೆ ಮರಳಬಹುದು ಎಂಬ ಯಾವುದೇ ಗ್ಯಾರಂಟಿ ಇಲ್ಲ ಎಂದು ಮಧ್ಯ ಪ್ರಾಚ್ಯ ಸಂಸ್ಥೆಯ ಹಿರಿಯ ಪ್ರಾಧ್ಯಾಪಕ ಖಲೀದ್ ಜೆಂಡಿ ಹೇಳಿದ್ದಾರೆ.

1948ರಲ್ಲಿ ಇಸ್ರೇಲ್ ರೂಪಿಸುವ ಸಂದರ್ಭದಲ್ಲಿ ನಡೆದ ಯುದ್ಧದಲ್ಲಿ ಸಾಕಷ್ಟು ಜನರು ನೆರೆ ದೇಶಗಳಿಗೆ ಪಲಾಯನ ಮಾಡಿದ್ದರು. ಆನಂತರ ಅವರು ತಮ್ಮ ನೆಲೆಗಳಿಗೆ ಮರಳಿಲ್ಲ. ಈಗ ಮತ್ತೆ ಅದೇ ಪರಿಸ್ಥಿತಿ ಉಂಟಾಗಬಹುದು ಎಂಬ ಕಳವಳ ಇದೆ.

ಗಾಜಾದಿಂದ ಈಜಿಪ್ಟಿಗೆ ತೆರಳಲು ಸಿನ್ಯೆ ಮಾರ್ಗ ಬಳಸಬೇಕಿದೆ. ಸಿನ್ಯೆ ಈಗಾಗಲೇ ಪ್ರಕ್ಷುಬ್ಧಿತವಾಗಿದೆ. ವಲಸೆ ಆರ್ಥಿಕ ಹೊರೆಯನ್ನೂ ತರಲಿದೆ. ಈಗಾಗಲೇ ವಲಸಿಗರಾಗಿರುವ ಗಾಜಾದ ಜನರನ್ನು, ಎರಡನೇ ವಲಸೆಗೆ ಒಳಪಡಿಸುವ ಆಸಕ್ತಿ ಈಜಿಪ್ಟಿನಲ್ಲಿ ಯಾರಿಗೂ ಇಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ.

1948 ಹಾಗೂ 1967ರ ಸಮರಗಳಲ್ಲಿ ಗಾಜಾ ಪ್ರದೇಶವನ್ನು ಈಜಿಪ್ಟ್ ತನ್ನ ಆಳ್ವಿಕೆಗೆ ಒಳಪಡಿಸಿತ್ತು. ಈಗ ಪ್ಯಾಲೆಸ್ತೇನ್ ಜನರನ್ನು ಒಳಗೆ ಸೇರಿಸಿದರೆ, ಗಾಜಾದ ಹೊಣೆಯನ್ನು ತನ್ನ ತಲೆಗೆ ಕಟ್ಟಬಹುದು ಎಂಬ ಶಂಕೆಯೂ ಈಜಿಪ್ಟ್‌ಗೆ ಇದೆ.

ಗಾಜಾ ಪಟ್ಟಿಯನ್ನು ಹಮಾಸ್ ತನ್ನ ತೆಕ್ಕೆಗೆ ತೆಗೆದುಕೊಂಡ ನಂತರದಿಂದಲೂ ಆ ವಲಯದ ಮಾರ್ಗಗಳ ಮೇಲೆ ಈಜಿಪ್ಟ್ ಸಾಕಷ್ಟು ನಿರ್ಬಂಧ ಹೇರಿದೆ.

ಗಾಜಾಗೆ ಹೊಂದಿಕೊಂಡಿರುವ ತನ್ನ ಗಡಿ ಉಲ್ಲಂಘನೆಯಾಗುವುದನ್ನು ತಪ್ಪಿಸಲು ಸಾವಿರಾರು ಭದ್ರತಾ ಪಡೆಗಳನ್ನು ನಿಯೋಜಿಸಲಾಗಿದೆ ಎಂದು ಈಜಿಪ್ಟ್‌ನ ಹಿರಿಯ ಭದ್ರತಾ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಈ ಹಿಂದೆ 2008ರಲ್ಲಿ ಹಮಾಸ್ ಉಗ್ರರು ಈಜಿಪ್ಟ್ ಗಡಿಯನ್ನು ಧ್ವಂಸಗೊಳಿಸಿ ಲಕ್ಷಾಂತರ ಜನರು ಸಿನೈಗೆ ನುಗ್ಗಲು ಅವಕಾಶ ಮಾಡಿಕೊಟ್ಟಿದ್ದರು.

ಈ ರೀತಿಯ ಕೃತ್ಯವನ್ನು ಮತ್ತೆ ಎಸಗದಂತೆ ಹಮಾಸ್ ನಾಯಕರಿಗೆ ಈಜಿಪ್ಟ್ ನಾಯಕರು ಎಚ್ಚರಿಕೆ ನೀಡಿದ್ದಾರೆ ಎಂದು ಸರ್ಕಾರಿ ಸ್ವಾಮ್ಯದ ಅಲ್ - ಅಹರಮ್ ಪತ್ರಿಕೆ ತಿಳಿಸಿದೆ.

ರಫಾ ಗಡಿಯ ಮೂಲಕ ಅಗತ್ಯ ವಸ್ತುಗಳನ್ನು ಪೂರೈಸಲು ಅವಕಾಶ ನೀಡಬೇಕು ಹಾಗೂ ಗಾಜಾದ ಒಳಗೆ ಸುರಕ್ಷಿತ ವಲಯ ಸೃಷ್ಟಿಸಬೇಕು ಎಂದು ಈಜಿಪ್ಟ್ ಅಧಿಕಾರಿಗಳು ಅಂತರರಾಷ್ಟ್ರೀಯ ಸಂಸ್ಥೆಗಳಿಗೆ ತಿಳಿಸುತ್ತಲೇ ಬಂದಿದ್ದಾರೆ. ಆದರೆ, ಇಸ್ರೇಲ್ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

## ವಿಕಾಸವಾದ, ಸಾಪೇಕ್ಷ ಸಿದ್ಧಾಂತ ಪ್ರಶ್ನಿಸುವ ಅರ್ಜಿ ತಳ್ಳಿ ಹಾಕಿದ ಸುಪ್ರೀಂ

ನವದೆಹಲಿ, ಅ. 13 – ಡಾರ್ವಿನ್ ವಿಕಾಸವಾದ ಹಾಗೂ ಐನ್‌ಸ್ಟೀನ್ ವಿಶೇಷ ಸಾಪೇಕ್ಷ ಸಿದ್ಧಾಂತಗಳನ್ನು ಪ್ರಶ್ನಿಸಿ ದಾಖಲಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

ವೈಜ್ಞಾನಿಕ ನಂಬಿಕೆಗಳನ್ನು ಪ್ರಶ್ನಿಸಲು ಸಂವಿಧಾನದ 32ನೇ ವಿಧಿ ಬಳಸಿಕೊಳ್ಳಲಾಗದು ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಹಾಗೂ ನ್ಯಾಯಮೂರ್ತಿ ಸುಧಾಂಶು ಧುಲಿಯಾ ಅವರನ್ನು ಒಳಗೊಂಡ ಪೀಠ ಹೇಳಿದೆ. ಡಾರ್ವಿನ್ ಸಿದ್ಧಾಂತ ಹಾಗೂ ಐನ್‌ಸ್ಟೀನ್ ಸೂತ್ರಗಳು ತಪ್ಪು ಎಂಬುದನ್ನು ಸಾಬೀತು ಪಡಿಸುವ ವೇದಿಕೆ ಬೇಕು ಎಂದು ಅರ್ಜಿದಾರರು ಬಯಸಿದ್ದಾರೆ. ಇವುಗಳು ತಪ್ಪು ಎಂದು ಅರ್ಜಿದಾರರು ನಂಬುವುದಾದರೆ ಅದು ಅವರ ಸ್ವಂತ ನಂಬಿಕೆ ಎಂದು ಪೀಠ ಹೇಳಿದೆ.

ಇದಕ್ಕಾಗಿ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ಸಂವಿಧಾನದ 32ನೇ ವಿಧಿ ಬಳಸಿಕೊಂಡು ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಲಾಗದು ಎಂದು ನ್ಯಾಯಾಲಯ ಹೇಳಿದೆ. ನ್ಯಾಯಾಲಯದಲ್ಲಿ ಕೇಸರಿ ವಸ್ತ್ರ ಧರಿಸಿದ್ದ ರಾಜ್ ಕುಮಾರ್ ಎಂಬುವವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿದ್ದರು. ಈ ಸೂತ್ರಗಳು ಸರಿ ಇಲ್ಲ ಎಂದಾದರೆ ಅದನ್ನು ಉತ್ತಮ ಪಡಿಸಿ. ಇದರಲ್ಲಿ ಸುಪ್ರೀಂ ಕೋರ್ಟ್ ಏನು ಮಾಡುವುದಿದೆ? ಇದರಲ್ಲಿ ಸಂವಿಧಾನದ 32ನೇ ವಿಧಿಯ ಮೂಲಭೂತ ಹಕ್ಕುಗಳು ಎಲ್ಲಿ ಉಲ್ಲಂಘನೆಯಾಗಿವೆ? ಎಂದು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

## ಕು. ಲಕ್ಷ್ಮಿಬಾಯಿ ರಾಜ್ಯ ಮಟ್ಟಕ್ಕೆ ಆಯ್ಕೆ

ದಾವಣಗೆರೆ, ಅ.13- ನಗರದ ಬಸಾಪುರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 6ನೇ ತರಗತಿ ವಿದ್ಯಾರ್ಥಿನಿ ಕು. ಲಕ್ಷ್ಮಿ ಬಾಯಿ ಅವರು ಜಿಲ್ಲಾ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಲಕ್ಷ್ಮಿ ಬಾಯಿ, ಬಸಾಪುರದ ನಾಗರಾಜನಾಯ್ಕ ಮತ್ತು ಸುಮಾಬಾಯಿ ದಂಪತಿ ಪುತ್ರಿ.

# ಪಿತೃಪಕ್ಷ ಹಿರಿಯರ ಸ್ಮರಣೆಯ ಪರ್ವ...

**ತೃಪ್ಯಂತು ಪಿತರಃ ಸರ್ವೇ**
**ಮಾತೃಮಾತಾ**
**ಮಹಾದಯಃ ॥**
**ಅತೀತ ಕುಲಕೋಟೀನಾಂ**
**ಸಪ್ತದ್ವೀಪ ನಿವಾಸಿನಾಂ ...**



ಹುಟ್ಟಿದ ಪ್ರತಿಯೊಬ್ಬ ಮನುಷ್ಯನು ದೇವ ಋಣ, ಋಷಿ ಋಣ, ಹಾಗು ಪಿತೃ ಋಣಗಳೆಂದು ಈ ಮೂರು ಋಣಗಳನ್ನು ತೀರಿಸಬೇಕು. ದೇವ ಋಣವನ್ನು ದೇವತಾರಾಧನೆಯ ಮೂಲಕ, ಋಷಿ ಋಣವನ್ನು ಅಧ್ಯಯನದ ಮೂಲಕ ಹಾಗೂ ಕೊನೆಯದಾಗಿ ಪಿತೃ ಋಣವನ್ನು **'ನಿವಾಪಾಂಜಲಿ ದಾನೇನ ಕೇತನೈಃ ಶ್ರಾದ್ಧಕರ್ಮಭಿಃ'** ಎಂಬಂತೆ ಅವರ ಹೆಸರಿನಲ್ಲಿ ತರ್ಪಣ ದಾನ ಮತ್ತು ಶ್ರಾದ್ಧಾದಿಗಳಿಂದ ತೀರಿಸಲು ಇರುವ ಸದಾವಕಾಶವೇ ಈ ಮಹಾಲಯ ಅಥವಾ ಪಿತೃಪಕ್ಷ. ಅಂದರೆ ಪಿತೃಗಳಿಗೆಂದೇ ಮೀಸಲಾದ ಹದಿನೈದು ದಿನಗಳು. ಈ ಹದಿನೈದು ದಿನಗಳಲ್ಲಿ ಮೃತರಾದ ನಮ್ಮ ಪೂರ್ವಿಕರನ್ನು ಸ್ಮರಿಸುವುದು ಮಾತ್ರವಲ್ಲದೇ ಮೃತ ಬಂಧುಗಳನ್ನೂ ಕೂಡ ನೆನೆಯುತ್ತಾರೆ ಮತ್ತು ಅವರ ಹೆಸರಿನಲ್ಲಿ ಶ್ರಾದ್ಧಾದಿಗಳನ್ನು ದಾನ-ಧರ್ಮಗಳನ್ನೂ ಮಾಡುತ್ತಾರೆ. ಹಾಗಾದರೆ ಈ ಮಹಾಲಯ ಎಂಬ ಶಬ್ದಕ್ಕೆ ಅರ್ಥವೇನು? ಅದನ್ನು ಆಚರಿಸುವುದರಿಂದ ಬರುವ ಫಲವೇನು? ಎಂಬುದನ್ನು ತಿಳಿಯಲು ಪ್ರಯತ್ನಿಸೋಣ.

'ಮಹಾಲಯ' ಎಂಬ ಶಬ್ದಕ್ಕೆ ರೂಢಿಯಲ್ಲಿ ಹಲವಾರು ಅರ್ಥಗಳಿದ್ದರೂ ಇದೊಂದು ಪಾರಿಭಾಷಿಕ ಶಬ್ದ.ಇದರ ಪ್ರಕಾರ **'ಪಿತ್ಣಾಂ ಮಹಸ್ಯ ಉತ್ಸವಸ್ಯ ಆಲಯಃ'** ಎಂಬುದಾಗಿ ವೀರಮಿತ್ರೋದಯದಲ್ಲಿ ವಿವರಿಸಿದ್ದಾರೆ. ಪಿತೃಗಳನ್ನು ಉದ್ದೇಶಿಸಿ ಹದಿನಾರು ದಿನಗಳ ಪರ್ಯಂತ ಅವಿಚ್ಛಿನ್ನವಾಗಿ ನಡೆಸುವ ಹಬ್ಬ. (ಇದನ್ನೇ ಬಿಹಾರ ರಾಜ್ಯದಲ್ಲಿರುವ ಗಯಾ (ಬೌದ್ಧ ಗಯಾ ಅಲ್ಲ) ಕ್ಷೇತ್ರದಲ್ಲಿ 'ಪಿತೃ ಮೇಳ' ಎಂಬುದಾಗಿ ದೊಡ್ಡ ಉತ್ಸವವೇ ನಡೆಯುತ್ತದೆ). ಇದನ್ನು ಇನ್ನೂ ಸ್ವಲ್ಪ ವಿಸ್ತರಿಸಿ ಹೇಳಬಹುದಾದರೆ, 'ಮಹಾಲಯೇ ಭಾದ್ರಪದ ಅಪರಪಕ್ಷೇ ಪಿತೃಣಾಂ ಅತಿಶಯ ಲಯಾತ್' ಎಂದು ವೀರಮಿತ್ರೋದಯದಲ್ಲಿ ಹೇಳುತ್ತಾ ನಮ್ಮನ್ನು ಸಾಕಿ, ಸಲಹಿ, ನಮ್ಮ ಭವಿಷ್ಯಕ್ಕೋಸ್ಕರ ತಮ್ಮ ಆಸೆ, ಆಕಾಂಕ್ಷೆಗಳನ್ನು ಬದಿಗಿಟ್ಟು, ವೃದ್ಧಾಪ್ಯದ ಅನೇಕ ಸಮಸ್ಯೆಗಳನ್ನು ಎದುರಿಸಿ ಕೊನೆಗೆ ಮೃತರಾದ ಹಿರಿಯರನ್ನು, ನಮಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಉಪಕರಿಸಿದವರಿಗೆ ಮಾಡುವ ಪಿಂಡ ದಾನವೇ ಶ್ರಾದ್ಧದ ಮುಖ್ಯಾಂಗ. ಈ ಮಹಾಲಯವನ್ನು ಮುಖ್ಯವಾಗಿ ಮಹಾಭರಣೆ, ಮಧ್ಯಾಷ್ಟಮೀ, ಹಾಗೂ ಅಮಾವಾಸ್ಯಾ ಮೂರು ವಿಭಾಗಗಳನ್ನು ಮಾಡಿ ನಿತ್ಯ ಶ್ರಾದ್ಧ ಮಾಡಲಾಗದಿದ್ದರೆ ಮೇಲ್ಕಂಡ ದಿನಗಳಲ್ಲಾಗಲೀ ಅಥವಾ ಮೃತರ ತಿಥಿಯಲ್ಲಾಗಲೀ ಮಾಡಬಹುದು.

ಈ ಸಂದರ್ಭದಲ್ಲಿ ಸುಮಂಗಲಿಯಾಗಿ ಮೃತರಾದ ವರಿಗೆ ಅವಿಧವಾನವಮೀ ದಿನ ಹಾಗೂ ಅಪಘಾತ ಅಥವಾ ಆತ್ಮಹತ್ಯೆ ಮೊದಲಾದ ಅಸಹಜ ಸಾವನ್ನಪ್ಪಿದವರಿಗೆ ಘಾತ ಚತುರ್ದಶಿಯಂದು ವಿಶೇಷ ಶ್ರಾದ್ಧಾದಿಗಳನ್ನು ಮಾಡುತ್ತಾರೆ.

ಹೀಗೆ ಅವರನ್ನು ತಿಲೋದಕ ದಾನ ಮೊದಲಾವು ಗಳಿಂದ ಸಂತೃಪ್ತಿಪಡಿಸಿದಾಗ, ಸಂತುಷ್ಟರಾದ ಅವರು ನಮಗೆ 'ಆಯುಷ್ಯ, ಸಂತತಿ, ಸಂಪತ್ತು, ವಿದ್ಯೆ, ಸ್ವರ್ಗ ಸಮಾನವಾದ ಸುಖ-ಭೋಗ, ಮೋಕ್ಷ ಸಾಧನೆ ಮಾರ್ಗ ಇವೆಲ್ಲವನ್ನೂ ಕೊಡುವರು.

ಒಂದುವೇಳೆ ಕಾರಣಾಂತರದಿಂದ ಪಕ್ಷ ಮಾಸದಲ್ಲಿ ಮಾಡಲಾಗದಿದ್ದಲ್ಲಿ ಕೊನೆಯ ಪಕ್ಷ ತುಲಾ ಮಾಸದ ಲ್ಲಾಗಲಿ (ಅಶ್ವಯುಜ ಮಾಸ ಕೃಷ್ಣಪಕ್ಷ) ಮಾಡಬಹುದು. ಇದನ್ನು ಗೌಣ ಪಕ್ಷವೆನ್ನುತ್ತಾರೆ. ನಂತರ ತುಲಾ ಸಂಸ್ಥೇ

**ಸಹಸ್ರಾಂಶೌ ಪ್ರದೋಷೇ ಭೂತದರ್ಶಯೋಃ ।**
**ಉಲ್ಕಾಹಸ್ತಾ ನರಾಃ ಕುರ್ಯುಃ**
**ಪಿತೃಣಾಂ ಮಾರ್ಗದರ್ಶನಮ್ ॥**

(ಕಾರ್ತೀಕ ಮಹಾತ್ಮೆ) ಎಂಬಂತೆ ದೀಪಾವಳಿಯ ಅಮಾವಾಸ್ಯೆಯಂದು ಸಂತೃಪ್ತರಾದ ಪಿತೃಗಳು ನಾವು ತೋರುವದೀಪದ ಬೆಳಕಿನಲ್ಲಿ (ಆಕಾಶಬುಟ್ಟಿಯಲ್ಲಿರುವ ದೀಪದ ಬೆಳಕಿನಲ್ಲಿ) (ಆಕಾಶ ಬುಟ್ಟಿಯನ್ನು ಮನೆಯ ಮುಂದೆ ಕಟ್ಟುವ ಉದ್ದೇಶವೇ ಇದು) ಸ್ವರ್ಗಲೋಕಕ್ಕೆ ಮರಳುತ್ತಾರೆ. ಇಲ್ಲವಾದಲ್ಲಿ ನಿರಾಶಾಃ ಪಿತರೋಗತಾಃ ಎಂಬಂತೆ ನಿರಾಶೆಯಿಂದ ನೊಂದು ಹಿಂತಿರುಗುತ್ತಾರೆ. ಆದ್ದರಿಂದ ಈ ಸಂದರ್ಭದಲ್ಲಿ ನಮ್ಮ ಶಕ್ತ್ಯಾನುಸಾರ ಶ್ರಾದ್ಧಾದಿ ಕರ್ಮಗಳನ್ನು ಮಾಡಿ ಆ ಮುಕ್ತಾತ್ಮರಿಗೆ ಭಗವಂತನು ಸದ್ಗತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸೋಣ.

**- ಜಯತೀರ್ಥಾಚಾರ್ ವಡೇರ್**
ದಾವಣಗೆರೆ., (9448666678)

# ಮಹಾಲಯ ಅಮಾವಾಸ್ಯೆ - ಆತ್ಮಾವಲೋಕನದ ಪರ್ವಕಾಲ

ಹಿರಿಯರ ಆಶೀರ್ವಾದ, ದೇವರ ದಯೆ ಇದ್ದರೆ ಮಾತ್ರ ನಮಗೆ ಏನಾದರೂ ಸಾಧನೆ ಮಾಡಲು, ಏನನ್ನಾದರೂ ಗಳಿಸಲು ಸಾಧ್ಯ. ಇಲ್ಲದಿದ್ದರೆ ಎಲ್ಲವೂ ಅಸಾಧ್ಯ ಎಂಬುದು ಒಂದು ನಂಬಿಕೆ.

ನಮ್ಮ ಮಕ್ಕಳ ಒಳಿತು ನಾವು ಬಯಸುವ ಹಾಗೆ, ನಮ್ಮ ಒಳಿತು ನಮ್ಮ ಹಿರಿಯರು ಬಯಸುತ್ತಾರೆ. ಆದ್ದರಿಂದ ಅವರು ಮಹಾಲಯ ಅಮಾವಾಸ್ಯೆ ದಿನ ಆಶೀರ್ವಾದ ಮಾಡಲು ಬರುತ್ತಾರೆ ಎಂಬ ನಂಬಿಕೆ ಎಲ್ಲರಲ್ಲಿದೆ.

ಆದ್ದರಿಂದಲೇ ಮಹಾಲಯ ಅಮಾವಾಸ್ಯೆ ದಿನ ಹಿರಿಯರ ಪೂಜೆ ಮಾಡುವ ದಿನ ಪ್ರತಿಯೊಬ್ಬರೂ ತಮ್ಮ ತಂದೆ - ತಾಯಿಯ ಋಣ ತೀರಿಸಲು, ಅವರಿಗಾಗಿ ಪೂಜೆ ಸಲ್ಲಿಸುವ ಸಂಪ್ರದಾಯ ಇದೆ. ವಿಶೇಷವಾಗಿ ಈ ಮಹಾಲಯ ಅಮಾವಾಸ್ಯೆ ದಿನ ಪಿತೃಗಳಿಗೆ ತರ್ಪಣ ನೀಡಲಾಗುತ್ತದೆ. ಪೂಜೆ ವ್ರತ ಎಷ್ಟು ಮುಖ್ಯವೋ ಪಿತೃ ಕಾರ್ಯ ಅಷ್ಟೇ ಮುಖ್ಯ.

ದೇಹ ಬಿಟ್ಟ ನಂತರ ಒಳಗಿನ ಆತ್ಮ ಏನಾಗುತ್ತದೆ ? ಎಂಬುದು ಎಲ್ಲರನ್ನೂ ಕಾಡುವ ಪ್ರಶ್ನೆ. ಆತ್ಮಕ್ಕೆ ಅಧಿಷ್ಠಾನ ಎಂದರೆ ವಾಸಸ್ಥಾನ ಈ ದೇಹ. ಆದ್ದರಿಂದ ಕೇವಲ ದೇಹ ಇದ್ದಾಗ ಮಾತ್ರ ಸಾಧನೆ ಮಾಡಬಹುದು.

ದೇಹದಿಂದ ಆತ್ಮ ಹೊರಗೆ ಹೋಗುವಾಗ ಮನಸ್ಸು ಮತ್ತು ಜ್ಞಾನೇಂದ್ರಿಯಗಳನ್ನು ತನ್ನ ಜೊತೆ ಕರೆದುಕೊಂಡು, ಮತ್ತೊಂದು ದೇಹ ಪ್ರವೇಶಿಸುತ್ತದೆ. ಗಾಳಿ ಸುವಾಸನೆ ತೆಗೆದುಕೊಂಡು ಹೋದಂತೆ ಆತ್ಮ ಮನಸ್ಸು ಮತ್ತು ಇಂದ್ರಿಯಗಳ ಜೊತೆ ಬೇರೆ ದೇಹ ಪ್ರವೇಶಿಸಿ ಅಲ್ಲಿ ಬಾಳುತ್ತದೆ ಎಂದು ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ತಿಳಿಸುತ್ತಾನೆ.

ಈ ದೇಹ ಕ್ರಿಮಿ, ಕೀಟ, ಪ್ರಾಣಿ, ಪಕ್ಷಿ ಯಾವುದಾದರೂ ಇರಬಹುದು. ಹಾಗಾಗಿ ನಾವು ಈ ದೇಹ ಬಿಟ್ಟಮೇಲೆ ಯಾವ ದೇಹ ಸಿಗುತ್ತದೆ ಎಂಬ ಪ್ರಶ್ನೆಗೆ ಉತ್ತರವಿಲ್ಲ. ಆದ್ದರಿಂದಲೇ ಎಲ್ಲಾ ಹರಿದಾಸರೂ 'ಮಾನವ ಜನ್ಮ ದೊಡ್ಡದು ಇದ ಹಾಳು ಮಾಡಬೇಡಿ' ಎಂದಿದ್ದಾರೆ. ಕೇವಲ ಮಾನವರು ಅಧ್ಯಾತ್ಮಿಕ ಯೋಚನೆ ಮಾಡುವ ಶಕ್ತಿ ಉಳ್ಳವರು. ಈ ಜನ್ಮದಲ್ಲಿ ಮಾತ್ರ ಭಗವಂತನನ್ನು ಮೆಚ್ಚಿಸುವ ಕೆಲಸ ಮಾಡುವ ಸಾಮರ್ಥ್ಯ ನಮಗೆ ಅವನೇ ಕೊಟ್ಟಿರುತ್ತಾನೆ. ಆ ಕೆಲಸ ಬಿಟ್ಟು ಬೇರೆ ಪ್ರಾಣಿಗಳ ಹಾಗೆ ನಾವೂ ಊಟ, ನಿದ್ರೆ, ಸಂಸಾರ ಸುಖದಲ್ಲಿ ಸಮಯ ಕಳೆದು



ಹೋದರೆ ಬಂದಿದ್ದು ವ್ಯರ್ಥ ! ಮತ್ತೆ ಇಂತಹ ದೇಹ ಈ ಆತ್ಮಕ್ಕೆ ಯಾವಾಗ ಸಿಗುವುದೋ? 'ಏಸು ಕಾಯಗಳ ಕಳೆದು 84 ಲಕ್ಷ ಜೀವರಾಶಿಯನ್ನು ದಾಟಿ ಬಂದ ಈ ಶರೀರ' ಎಂದು ಕನಕದಾಸರು 84 ಲಕ್ಷ ತರಹದ ಶರೀರದ ವಾಸದ ನಂತರ ಈ ಶರೀರ ದೊರಕಿದೆ. ಇದರಲ್ಲಿ ವಾಸಿಸುವಾಗಲೇ, ಸಾಧನೆ ಮಾಡಿ ಮತ್ತೆ ಹುಟ್ಟದಂತೆ ಮೋಕ್ಷ ಗಳಿಸಿ ಎಂದು ಎಚ್ಚರಿಕೆ ನೀಡಿದ್ದಾರೆ.

ಜ್ಞಾನಿಗಳು ಮಹಾಪುರುಷರು ಎಷ್ಟೇ ಎಚ್ಚರಿಕೆ ನೀಡಿದರು ನಮ್ಮ ಮನಸ್ಸು ನಮ್ಮನ್ನು ಕ್ಷಣಿಕ ಸುಖಗಳ ಕಡೆಗೆ ಎಳೆದುಕೊಂಡು ಹೋಗುತ್ತದೆ. ಅದರಿಂದ ಬಿಡುಗಡೆಯಾಗಿ ಪಾರಮಾರ್ಥಿಕದ ಕಡೆಗೆ ಮನಸ್ಸು ಹೋಗಬೇಕಾದರೆ ಒಳಗಿನಿಂದ ತುಡಿತ ಬರಬೇಕು. ಅದನ್ನು ಆ ಪರಮಾತ್ಮನೇ ಕರುಣಿಸಬೇಕು. ನಮಗೆ ಕ್ಷಣಿಕ ಸುಖ ಬೇಕೋ ನಿರಂತರವಾದ ಸುಖ ಬೇಕೋ ? ಎಂದು ಯೋಚನೆ ಮಾಡಬೇಕು.

ಈ ನಿಟ್ಟಿನಲ್ಲಿ ಚಿಂತನೆ ನಡೆಸಲು ಮನಸ್ಸನ್ನು ಗಟ್ಟಿ ಮಾಡಿಕೊಳ್ಳಲು ಈ ಮಹಾಲಯ ಅಮಾವಾಸ್ಯೆ ಪ್ರಚೋದನೆ ನೀಡುತ್ತದೆ. ಎಲ್ಲಾ ಹಿರಿಯರನ್ನು ನೆನೆಯುವಾಗ ಅವರೆಲ್ಲಾ ಇಲ್ಲಿ ಬಾಳಿ ಬದುಕಿದವರು. ಆದರೆ, ಇವರು ಯಾರು ಇಲ್ಲ ಹಾಗೆಯೇ ನಾವು ಇಲ್ಲಿ ಇರುವುದಿಲ್ಲ, ಇದು ಶಾಶ್ವತವಲ್ಲ. ಇಲ್ಲಿ ನಮ್ಮ ಸಮಯ ಕ್ಷಣಿಕ. ಅದನ್ನು ವ್ಯರ್ಥ ಮಾಡಬಾರದು ಎಂಬೆಲ್ಲಾ ಯೋಚನೆಗಳು ನಮ್ಮ ಮನಸ್ಸಿನಲ್ಲಿ ಬಂದು ನಮ್ಮನ್ನು ಎಚ್ಚರಿಸಲಿ ಸನ್ಮಾರ್ಗದಲ್ಲಿ ನಡೆಸಲಿ ಎಂದು ಪ್ರಾರ್ಥಿಸುತ್ತೇನೆ.

**- ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**

# ಪರಮಶಿವಯ್ಯಗೆ ಜಮೀನು

**(1ನೇ ಪುಟದಿಂದ)** ಉಳಿದುಕೊಂಡು ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿನಿಯರು ಮುರುಘಾ ಶರಣರು, ಪರಮಶಿವಯ್ಯ ಸೇರಿ ಐವರ ವಿರುದ್ಧ ಲೈಂಗಿಕ ಕಿರುಕುಳ ಆರೋಪ ಮಾಡಿದ್ದರು. ಮೈಸೂರಿನ ಒಡನಾಡಿ ಸಂಸ್ಥೆಯ ನೆರವಿನಿಂದ ಮೈಸೂರಿನ ನಜರಾಬಾದ್ ಠಾಣೆಯಲ್ಲಿ ಅವರು ದೂರು ದಾಖಲಿಸಿದ್ದರು.

ಇದರ ಆಧಾರದಲ್ಲಿ ಪೊಲೀಸರು ಪೋಕ್ಸೋ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡ (ದೌರ್ಜನ್ಯ ನಿಯಂತ್ರಣ) ಕಾಯಿದೆ ಅಡಿ ಶಿವಮೂರ್ತಿ ಶರಣರು, ಪರಮಶಿವಯ್ಯ ಸೇರಿ ಐವರ ವಿರುದ್ಧ ಪ್ರಕರಣ ದಾಖಲಿಸಿ, ಅದನ್ನು ಚಿತ್ರದುರ್ಗದ ಗ್ರಾಮೀಣ ಠಾಣೆಗೆ ವರ್ಗಾಯಿಸಿದ್ದರು. ಆನಂತರ ಆರೋಪಿಗಳನ್ನು ಬಂಧಿಸಲಾಗಿತ್ತು.

ಆನಂತರ ಮತ್ತಿಬ್ಬರು ವಿದ್ಯಾರ್ಥಿನಿಯರು ನೀಡಿದ ದೂರಿನ ಅನ್ವಯ ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲಾಗಿತ್ತು. ಈ ಎರಡೂ ಪ್ರಕರಣಗಳಲ್ಲಿ ಪರಮಶಿವಯ್ಯ ಅವರು ಆರೋಪಿಯಾ ಗಿದ್ದರು. ಆನಂತರ ಎರಡನೇ ಪ್ರಕರಣದಲ್ಲಿ ಆರೋಪ ಪಟ್ಟಿಯಿಂದ ಪರಮಶಿವಯ್ಯ ಅವರನ್ನು ಕೈಬಿಡಲಾಗಿದೆ. ಮಕ್ಕಳ ಮೇಲೆ ಸ್ವಾಮೀಜಿ ಅತ್ಯಾಚಾರ ಎಸಗಲು ಪರಮಶಿವಯ್ಯ ನೆರವಾಗಿದ್ದಾರೆ ಎಂಬುದು ಅವರ ಮೇಲಿನ ಆರೋಪವಾಗಿದೆ.

ಪರಮಶಿವಯ್ಯ ಅವರ ಪರವಾಗಿ ಹಿರಿಯ ವಕೀಲರಾದ ಸಿ.ವಿ. ನಾಗೇಶ್ ವಾದಿಸಿದ್ದರು. ವಕೀಲರಾದ ಕೆ ಬಿ ಕೆ ಸ್ವಾಮಿ ವಕಾಲತ್ತು ವಹಿಸಿದ್ದರು.

# ರಾಜ್ಯದಲ್ಲಿ ಐಟಿ ದಾಳಿ: ಭಾರೀ ಹಣ ವಶ

**(1ನೇ ಪುಟದಿಂದ)** ವಶಪಡಿಸಿಕೊಂಡಿದ್ದಾರೆ.

ನಗರದ ಮಾಜಿ ಶಾಸಕರ ಸಂಬಂಧಿ, ಮಾಜಿ ಕಾರ್ಪೊರೇಟರ್ ಪತಿ, ರಾಜ್ಯ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷ ಅಂಬಿಕಾಪತಿ ಅವರ ಮನೆಯಲ್ಲಿ 40 ಕೋಟಿ ರೂ.ಗೂ ಹೆಚ್ಚು ವಶಪಡಿಸಿಕೊಂಡಿದ್ದಾರೆ.

ಇದೇ ರೀತಿ ಉದ್ದಿಮೆದಾರರ ಬಳಿ ಸಂಗ್ರಹಗೊಂಡಿದ್ದ ದೊಡ್ಡ ಪ್ರಮಾಣದ ಹಣವನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಸಂಗ್ರಹಗೊಂಡಿದ್ದ ಹಣವನ್ನು ಚೆನ್ನೈನ ಹೊರ ವಲಯಕ್ಕೆ ಸಾಗಾಣಿಕೆ ಮಾಡಲು ಪ್ರಭಾವಿ ನಾಯಕರು ಮುಂದಾಗಿದ್ದರು. ಅವರನ್ನು ಕಳೆದ ಎರಡು ದಿನಗಳಿಂದ ಐ.ಟಿ. ಅಧಿಕಾರಿಗಳು ವಶಕ್ಕೆ ತೆಗೆದುಕೊಂಡಿದ್ದಾರೆ.

ಪ್ರಭಾವಿ ನಾಯಕ ನೀಡಿದ ಮಾಹಿತಿ ಆಧರಿಸಿ ಕ್ಲಬ್‌ವೊಂದರಲ್ಲಿ ಸ್ನೇಹಿತರ ಜತೆ ಕುಳಿತಿದ್ದ ರಾಜ್ಯದ ಪ್ರಮುಖ ನಾಯಕರ ಪುತ್ರರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದ್ದಾರೆ.

ಬೃಹತ್ ಬೆಂಗಳೂರು ವ್ಯಾಪ್ತಿಯಲ್ಲಿ ನಡೆದ ಕಾಮಗಾರಿಯ 650 ಕೋಟಿ ರೂಪಾಯಿಯನ್ನು ಗುತ್ತಿಗೆದಾರರಿಗೆ ಬಿಡುಗಡೆ ಮಾಡಿತ್ತು.

ಗುತ್ತಿಗೆದಾರರ ಸಂಘದ ಉಪಾಧ್ಯಕ್ಷ ಪರ್ಸೆಂಟೇಜ್ ಹಣವನ್ನು ಸಂಗ್ರಹಿಸಿ ಇಡಲಾಗಿದ್ದ ಮನೆ ಮೇಲೆ ಐ.ಟಿ. ಅಧಿಕಾರಿಗಳು ದಾಳಿ ನಡೆಸಿ ವಶಕ್ಕೆ ಪಡೆದಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.

ಐ.ಟಿ. ದಾಳಿಗೂ-ನಮಗೂ ಸಂಬಂಧವಿಲ್ಲ ಎಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಬಿಜೆಪಿ ನಾಯಕರು ಮಾಡುತ್ತಿರುವ ಆರೋಪದಲ್ಲಿ ಯಾವುದೇ ಹುರುಳಿಲ್ಲ ಎಂದಿದ್ದಾರೆ.

ಆಧಾರ ರಹಿತ ಆರೋಪಗಳಿಗೆ ನಾವು ಉತ್ತರಿಸುವ ಅಗತ್ಯವಿಲ್ಲ. ನಾವು ಯಾವ ರಾಜ್ಯಗಳಿಗೂ ಚುನಾವಣಾ ವೆಚ್ಚಕ್ಕಾಗಿ ಹಣ ಕಳುಹಿಸುವುದಿಲ್ಲ. ಇಲ್ಲಿಂದ ಹಣ ಹೋಗುತ್ತಿದೆ ಎಂದು ಹೇಳುವುದಕ್ಕೆ ಬಿಜೆಪಿ ನಾಯಕರು ನೋಡಿದ್ದಾರೆಯೇ? ಎಂದು ಪ್ರಶ್ನಿಸಿದರು.

ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಇಂತಹ ದಾಳಿಗಳು ನಡೆಯುವುದಿಲ್ಲ. ರಾಜಕೀಯವಾಗಿ ಬಿಜೆಪಿಯೇತರ ರಾಜ್ಯಗಳಲ್ಲಿ ಈ ದಾಳಿಗಳು ನಿರಂತರವಾಗಿ ನಡೆಯುತ್ತಿರುತ್ತವೆ ಎಂದಿದ್ದಾರೆ.

ಮುಂಬರುವ ಲೋಕಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು ರಾಜಕೀಯ ದುರುದ್ದೇಶದಿಂದ ಈ ರೀತಿಯ ದಾಳಿ ಮಾಡುತ್ತಿದ್ದಾರೆ ಎಂದು ಅವರು ದೂರಿದ್ದಾರೆ.

# ರಾಜ ವೀರ ಮದಕರಿ ನಾಯಕ ಚತುರ ಆಡಳಿತಗಾರ

ಹರಪನಹಳ್ಳಿ, ಅ. 13- ರಾಜ ವೀರ ಮದಕರಿ ನಾಯಕ ಒಬ್ಬ ಕೆಚ್ಚೆದೆಯ ಸೈನಿಕ. ಚತುರ ಆಡಳಿತಗಾರ. ದೂರದೃಷ್ಟಿ ನಾಯಕ ಎಂದು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ. ಉಚ್ಚೆಂಗೆಪ್ಪ ಹೇಳಿದರು.

ಪಟ್ಟಣದ ವಾಲ್ಮೀಕಿ ಸಮುದಾಯ ಭವನದಲ್ಲಿ ವಾಲ್ಮೀಕಿ ನಾಯಕ ಸಮಾಜ, ಏಕಲವ್ಯ ಸಂಘರ್ಷ ಸಮಿತಿ ಹಾಗೂ ವಾಲ್ಮೀಕಿ ನಾಯಕ ಮಹಿಳಾ ಘಟಕದಿಂದ ಹಮ್ಮಿಕೊಂಡಿದ್ದ ರಾಜ ವೀರ ಮದಕರಿ ನಾಯಕ ಜಯಂತಿ ಆಚರಣೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ದುರ್ಗದ ಮಣ್ಣಿನ ಹೆಮ್ಮೆಯ ಪುತ್ರ, ರಾಜ ವೀರ ಮದಕರಿ ನಾಯಕ ತನ್ನ ಆಳ್ವಿಕೆ ಅವಧಿಯಲ್ಲಿ ಕೈಗೊಂಡ ಹಲವು ರಾಜಕೀಯ ನಿರ್ಣಯಗಳು ಚಿತ್ರದುರ್ಗ ಸಂಸ್ಥಾನದ ಕೀರ್ತಿ ಭಾರತದಲ್ಲೆಲ್ಲಾ ಹರಡಲು ಕಾರಣವಾಗಿದೆ. ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ಮಹತ್ವದ ಪಾತ್ರ ವಹಿಸಿರುವ



ಚಿತ್ರದುರ್ಗದ ನಾಯಕ ಅರಸರಲ್ಲಿ ಕೊನೆಯ ದೊರೆ ರಾಜ ವೀರ ಮದಕರಿ ನಾಯಕ. ಈತನನ್ನು ಇತಿಹಾಸದಲ್ಲಿ ಚಿಕ್ಕ ಮದಕರಿ, ಕೊನೆ ಮದಕರಿ, 5ನೇ ಮದಕರಿ, ವೀರ ಮದಕರಿ ಎಂದೆಲ್ಲಾ ಕರೆಯಲಾಗಿದೆ ಎಂದರು.

ನಿವೃತ್ತ ಶಿಕ್ಷಕ ಎಂ. ಆನಂದ ಬಾಗಳಿ ಹಾಗೂ ಏಕಲವ್ಯ ಸಂಘರ್ಷ ಸಮಿತಿ ಅಧ್ಯಕ್ಷ ರಾಯದುರ್ಗದ ಪ್ರಕಾಶ್ ಮಾತನಾಡಿ, ಮದಕರಿ ನಾಯಕ ಒಂದು ಸಮಾಜಕ್ಕೆ ಸೀಮಿತವಾಗಿರಲಿಲ್ಲ. ಸ್ವಾಭಿಮಾನಿ, ಸಾಹಸಿಯಾಗಿ ಮದಕರಿ ದುರ್ಗದ ಮಣ್ಣಿಗೆ ಸಾಂಸ್ಕೃತಿಕ ಮಹತ್ವ ತಂದುಕೊಡುವಲ್ಲಿ ಮಹತ್ವದ ಪಾತ್ರ ವಹಿಸಿದವರು.

ಸುತ್ತಲಿನ ಹರಪನಹಳ್ಳಿ, ರಾಯದುರ್ಗ, ಬಿದನೂರು, ಸವಣೂರು ಮುಂತಾದ ಸಂಸ್ಥಾನಿಕರೊಂದಿಗೆ ನಿರಂತರ ಕಾಳಗದಲ್ಲಿ ನಿರತನಾಗಿರುತ್ತಿದ್ದ. ಹೈದರಾಲಿಯೊಂದಿಗೆ ವಿಶೇಷ ಸ್ನೇಹ ಇರಿಸಿಕೊಂಡಿದ್ದ. ಇವರ ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಾಣಗೊಂಡವು. ಭರಮಸಾಗರ, ಮತ್ತು ಭೀಮಸಾಗರ ಜಲಾಶಯಗಳು ಇವರ ಕಾಲದಲ್ಲಿ ಆಗಿವೆ ಎಂದರು.

ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಪ್ರಧಾನ ಕಾರ್ಯದರ್ಶಿ ಜಿ. ನಾಗರಾಜ, ಏಕಲವ್ಯ ಸಂಘರ್ಷ ಸಮಿತಿ ಕಾರ್ಯದರ್ಶಿ ಶಿವರಾಜ ತಳವಾರ್, ವಕೀಲರಾದ ಹೆಚ್.ಕೆ. ಮಂಜುನಾಥ, ವಾಲ್ಮೀಕಿ ನಾಯಕ ಮಹಿಳಾ ಘಟಕದ ಗೌರವ ಅಧ್ಯಕ್ಷೆ ಟಿ. ಪದ್ಮಾವತಿ, ಮುಖ್ಯ ಶಿಕ್ಷಕ ಮಲ್ಲೇಶಪ್ಪ, ಮುಖಂಡರಾದ ಮಾರುತಿ ಪೂಜಾರ್, ಅರ್ಜುನ, ಕೆ. ಅಜ್ಜಯ್ಯ, ಮಹಬೂಬ್ ಸಾಬ್, ಶಫೀ, ಜಾಫರ್ ಸಾಧಿಕ್ ಸಾಬ್, ತೆಲಗಿ ಟಿ. ಅಂಜಿನಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.



## ಗಣಪತಿ ಮೆರವಣಿಗೆ ಗಲಾಟೆ

**(1ನೇ ಪುಟದಿಂದ)** ಶುಕ್ರವಾರ ಹಿಂದೂ ಸಂಘಟನೆಯ ಮುಖಂಡರು ಜಯದೇವ ವೃತ್ತದಿಂದ ಬಡಾವಣೆ ಪೊಲೀಸ್ ಠಾಣೆವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಗಲಾಟೆ ಮಾಡಿದವರ ಬಂಧನಕ್ಕೆ ಆಗ್ರಹಿಸಿದ ಪ್ರತಿಭಟನಾಕಾರರು ಬಡಾವಣೆ ಪೊಲೀಸ್ ಠಾಣೆ ಮುಂದೆ ಧರಣಿ ಕುಳಿತರು. ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಮುಖಂಡ ಯಶವಂತರಾವ್ ಜಾಧವ್ ಮಾತನಾಡಿ, ಮೆರವಣಿಗೆ ವೇಳೆ ಡಿಜೆ ಹಾಕದಂತೆ ಅಡ್ಡಿಪಡಿಸಿದ್ದಾರೆ. ಘಟನೆ ವೇಳೆ ಪೊಲೀಸರು ಅವರ ಬೆಂಬಲಿಗರಂತೆ ವರ್ತನೆ ಮಾಡಿದ್ದಾರೆ. ಆದ್ದರಿಂದ ಪೊಲೀಸ್ ಇನ್ ಸ್ಪೆಕ್ಟರ್ ಅಮಾನತ್ತು ಮಾಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಹಿಂದೂ ಮುಖಂಡರಾದ ರಾಜನಹಳ್ಳಿ ಶಿವಕುಮಾರ್, ಬಿ.ಜಿ. ಅಜಯ್‌ಕುಮಾರ್, ಶ್ರೀನಿವಾಸ ದಾಸಕರಿಯಪ್ಪ, ಕೆ.ಎಂ. ವೀರೇಶ್ ಸೇರಿದಂತೆ ಇತರರು ಇದ್ದರು.

# ಕೇಂದ್ರಕ್ಕೆ ನೋಟಿಸ್

**(1ನೇ ಪುಟದಿಂದ)** ಕಳಿಸಿದೆ. ಪೀಠದಲ್ಲಿ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲ ಹಾಗೂ ಮನೋಜ್ ಮಿಶ್ರ ಅವರಿದ್ದಾರೆ.

ಶಸ್ತ್ರಚಿಕಿತ್ಸೆಗಳ ನೇರ ಪ್ರಸಾರದ ಮೇಲೆ ನಿಗಾ ವಹಿಸಲು ರಾಷ್ಟ್ರೀಯ ವೈದ್ಯಕೀಯ ಆಯೋಗ ಸಮಿತಿಯೊಂದನ್ನು ರಚಿಸಬೇಕು. ನೇರ ಪ್ರಸಾರಕ್ಕಾಗಿ ಮಾರ್ಗಸೂಚಿ ರೂಪಿಸಬೇಕು ಎಂದು ದೆಹಲಿಯ ಕೆಲವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ.


**2 BHK ಮನೆ ಬಾಡಿಗೆಗಿದೆ**
ಎಂ.ಸಿ.ಸಿ. 'ಬಿ' ಬ್ಲಾಕ್ ಕುವೆಂಪು ನಗರ, ಡೋರ್ ನಂ. 2551/18, 13ನೇ ಮೇನ್, 6ನೇ ಕ್ರಾಸ್‌ನಲ್ಲಿ ಗ್ರೌಂಡ್ ಫ್ಲೋರ್‌ನಲ್ಲಿ ಬೋರ್‌ವೆಲ್ ಹಾಗೂ ಮುನಿಸಿಪಲ್ ನೀರಿನ ಸೌಕರ್ಯವಿರುವ 2 BHK ಮನೆ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. 96325-97507

**ಮನೆ ಕ್ಲೀನಿಂಗ್**
ಬಾಡಿಗೆ ಕೊಡುವ ಮನೆಗಳನ್ನು ಬಾತ್ ರೂಂಗಳನ್ನು ಆಸಿಡ್ ವಾಷ್ ಮಾಡಿಕೊಡಲಾಗುವುದು.
99863 61250, 80730 24690

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಬಾಡಿಗೆಗಿವೆ**
ಶಾಮನೂರು ಪಕ್ಕ ಡಾಲರ್ಸ್ ಕಾಲೋನಿಯಲ್ಲಿ ಶಿವ ಸದನ ತಿಮ್ಮಾರೆಡ್ಡಿ ಹೈಸ್ಕೂಲ್ ಹತ್ತಿರ 2BHK ಮನೆ ಬಾಡಿಗೆಗೆ ಇವೆ. ಲಿಫ್ಟ್ ವ್ಯವಸ್ಥೆ ಇದೆ.
99722 44667
87623 12789

**ಸೈಟು ಮಾರಾಟಕ್ಕಿದೆ**
ಕುಬೇರ ಹೋಟೆಲ್ ಪಕ್ಕ, ವಿದ್ಯಾನಗರ, NH4ಗೆ 30x55 ಅಳತೆ, ಸೈಟ್ ನಂ. 50
99806 24688

**ಮನೆ ಲೀಸ್‌ಗೆ ಇದೆ**
24ನೇ ವಾರ್ಡ್‌ನ #337/101, ರಲ್ಲಿ 2BHK ಮನೆ ಲೀಸ್‌ಗೆ ಇದೆ. ಗಣೇಶ ಲೇಔಟ್, ದಾವಣಗೆರೆ.
98800 56262

**EC / ಇಸಿ, E-swathu, Khatha Change Building Licence & Property Documents, Loans-All banks**
96118-66449

**ಸರ್ಟಿಫಿಕೇಟ್ ಕಳೆದಿದೆ**
ದಾವಣಗೆರೆ ಶುಗರ್ ಕಂಪನಿಯಲ್ಲಿ ರಾಮಗೊಂಡನಹಳ್ಳಿಯ ಆರ್.ಜೆ. ಶಿವನಗೌಡ ಬಿನ್ ಪಟೇಲ್ ರುದ್ರಪ್ಪ ಇವರ ಹೆಸರಿನ ಷೇರು ಸರ್ಟಿಫಿಕೇಟ್ ( ಸಂಖ್ಯೆ 223782 ಮತ್ತು ಐ ಡಿ ಸಂಖ್ಯೆ ಡಿ ಎಸ್ ಎಸ್ 1985 ) ಕಳೆದಿದೆ . ಸಿಕ್ಕವರು ಮೊ . 9663123398 ಇಲ್ಲಿಗೆ ಕರೆ ಮಾಡಿ ತಲುಪಿಸಬೇಕಾಗಿ ವಿನಂತಿ

**4 BHK Flat For SALE**
in S.S. Layout `A' Block.
93530 08590

**ಬೇಕಾಗಿದ್ದಾರೆ**
ಆನಗೋಡು ಸಮೀಪ NH-48 ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನಲ್ಲಿ ಮತ್ತು ಕ್ಲೀನಿಂಗ್ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ಸಂಪರ್ಕಿಸಿ :
90082 28222
99001 42052

**HOUSE TO LET**
2 BHK, #2720/18, 1st Floor, Behind Kalleshwara apartment, `15th cross, Anjaneya Extension, Davangere.
87928 83134, 94489 48279

**ಬೇಕಾಗಿದ್ದಾರೆ**
ಟಿವಿ ಅಂಗಡಿಗೆ ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಯಾವುದೇ ಪದವೀಧರರಿಗೆ ಮೊದಲ ಆದ್ಯತೆ.
ಸಂಪರ್ಕಿಸಿ : ಪ್ರಕಾಶ ಟಿವಿ ಸೆಂಟರ್, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಕುರುಬರ ಹಾಸ್ಟೆಲ್ ಎದುರು, ಹದಡಿ ರಸ್ತೆ, ದಾವಣಗೆರೆ.

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸಗಾರರು ಬೇಕಾಗಿದ್ದಾರೆ. ಹುಡುಗರು ಮತ್ತು ಹುಡುಗಿಯರು.
94482 29430

**ಮಾರಾಟಕ್ಕೆ ಇದೆ**
ದಾವಣಗೆರೆ-ಚನ್ನಗಿರಿ ರಸ್ತೆ, ಬೈಪಾಸ್‌ನಿಂದ ಕೇವಲ 2 1/2 ಕಿ.ಮೀ. ದೂರದಲ್ಲಿ ಶಿರಮಗೊಂಡನಹಳ್ಳಿ ಗ್ರಾಮದಲ್ಲಿ ಉತ್ತರ ಮುಖದ ರಸ್ತೆಗೆ ಹೊಂದಿರುವ ಜಮೀನು 0:10 ಗುಂಟೆ ರಸ್ತೆಗೆ 100 ಅಡಿ ಬರುವಂತಹ ಈ ಜಾಗ ಮಾರಾಟಕ್ಕೆ ಇದೆ. ಆಸಕ್ತಿಯುಳ್ಳವರು ಈ ಕೆಳಗೆ ಕೊಟ್ಟಿರುವ ನಂಬರ್‌ಗೆ ಕರೆ ಮಾಡಿ.
82175 40468

**ಸೈಟ್ ಮಾರಾಟಕ್ಕಿದೆ**
ಪಿ.ಬಿ. ರೋಡ್, Hyundai Car Showroom ಹಿಂಭಾಗ ಬಸವನಗೌಡ ಬಡಾವಣೆ, ಆವರಗೆರೆ. 30x46 ಉತ್ತರ, 30x46 ದಕ್ಷಿಣ
Rs. 2000/- per sq ft.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
ಆಸಕ್ತರು ಸಂಪರ್ಕಿಸಿ :
ACHARYA REALTORS
Ph. : 826 826 7878

**ನೆಲ ಬಾಡಿಗೆಗೆ ಇದೆ**
ದಾವಣಗೆರೆ ನಗರದ ಡಿ.ಸಿ. ನಿವಾಸದ ಎದುರುಗಡೆ, ರಿಂಗ್ ರೋಡ್‌ಗೆ ಹೊಂದಿಕೊಂಡಂತಿರುವ 17.5x60 ಚ.ಅ. ಜಾಗ ಬಾಡಿಗೆಗಿದೆ. ಆಸಕ್ತರು ಸಂಪರ್ಕಿಸಿ.
91691 52666

**JOB OPPORTUNITY**
**Female Office Assistant**
For Reputed Educational Institution. Good In Office Work-Computer Skills Good In Customer Dealings Freshers can also apply (B.com., & M.Com.,)
for contact : 97312 18567
Send C.V-hardsoftdvg@gmail.com

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಪೀಟರ್ ಇಂಗ್ಲೆಂಡ್
ಮಾಮಾಸ್ ಜಾಯಿಂಟ್ ರೋಡ್, ದಾವಣಗೆರೆ.
80888 96331

**SITE FOR SALE**
Size 30x40, Near Sai baba Temple, Opp. Bhumika Nagara M Arch, Jayanagara Badavane, Near Bus Stop, Hi-Tech Hospital Road, Davangere. Rs. 5100/- per sq ft. Non Negotiable site No. 16
Owner L. Rajashekara
94489 66264

**SALES GIRL REQUIRED**
Experienced Sales Staff needed for innerwear Store
WOMEN'S PARADISE
AVK college Road, Davangere
96204 53208

**HOUSE FOR RENT**
1st floor-3 BHK & Having Solar water & Borewel Water Fecility available for Rent #1982/2, 6th cross, Siddaveerappa Layout, DVG.
94806 93506, 82777 97633

**ಅಡಿಕೆ ಸಸಿಗಳು ಮಾರಾಟಕ್ಕಿವೆ**
ದಾವಣಗೆರೆ ತಾಲ್ಲೂಕು ಅಣ್ಣಾಪುರ ಗ್ರಾಮದಲ್ಲಿ 1 1/2 ವರ್ಷದ ಅಡಿಕೆ ಸಸಿಗಳು ಮಾರಾಟಕ್ಕಿವೆ. ಸಂಪರ್ಕಿಸಿ :
99809 32863
90080 02363

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**TO LET - RENT ONLY**
2 BHK - East facing, First floor, Main road, Swami Vivekananda Badavane, 7th main, 5th Cross, Single house in First floor With Western & Indian toilet. Rent Only, No lease.
M : 94482 01483

**ಶ್ರೀ ಸತ್ಯ ಶನೇಶ್ವರಸ್ವಾಮಿ ಸರ್ವೀಸ್ ಸೆಂಟರ್**
ಗಾರೆ ಕೆಲಸ, ಎಲೆಕ್ಟ್ರೀಷಿಯನ್, ಕಾರ್ಪೆಂಟರ್, ಹೊಸ ಪೇಟಿಂಗ್ / ಹಳೇ ಪೇಟಿಂಗ್, ಟೈಲ್ಸ್ ಮತ್ತು ಬಾತ್ ರೂಮ್, ಆಸೀಡ್ ವರ್ಕ್, ಸಂಪ್ ಕ್ಲೀನಿಂಗ್, ಹೌಸ್ ಕ್ಲೀನಿಂಗ್, ಗಾರ್ಡನ್ / ಮನೆಯ ಕುಂಡಲಗಳ, ಪ್ಲಂಬರ್ ವರ್ಕ್, ವಾಟರ್ ಪ್ರೂಫ್, ಕಡಿಮೆ ಖರ್ಚಿನಲ್ಲಿ ಮಾಡಿಕೊಡಲಾಗುವುದು.
73535 07622, 78995 07623


**ತಕ್ಷಣ ಬೇಕಾಗಿದ್ದಾರೆ**
ಎಲೆಕ್ಟ್ರಿಕಲ್ ಸ್ಕೂಟರ್ ಕಂಪನಿಯಲ್ಲಿ 200 ಜನ ಕೆಲಸಕ್ಕೆ ಯುವಕ, ಯುವತಿಯರು, ಮಹಿಳೆಯರು ಮತ್ತು ಪುರುಷರು ತಕ್ಷಣ ಬೇಕಾಗಿದ್ದಾರೆ. ತಿಂಗಳಿಗೆ 12,000 ರಿಂದ 25000 ದವರೆಗೆ ಸಂಬಳ ಕೊಡಲಾಗುವುದು. ಪಾರ್ಟ್ ಟೈಂ / ಫುಲ್ ಟೈಂ, Any Age.
ಸಂಪರ್ಕಿಸಿ : ಮಂಜುಳ
89703 54479, 73535 07622

**ತಕ್ಷಣವೇ ಬೇಕಾಗಿದ್ದಾರೆ**
ಸೆರಾಕೇರ್ ಹೆಲ್ತ್‌ಕೇರ್‌ನಲ್ಲಿ ಕಾರ್ಯ ನಿರ್ವಹಿಸಲು ಆಸಕ್ತ ಯುವತಿಯರು ಮತ್ತು ಮಹಿಳೆಯರು ಬೇಕಾಗಿದ್ದಾರೆ.
ವಿದ್ಯಾಭ್ಯಾಸ : SSLC, PUC, any Degree, ವೇತನ 6 ತಿಂಗಳ ತರಬೇತಿಯೊಂದಿಗೆ 6,000 ದಿಂದ ಪ್ರಾರಂಭವಾಗುತ್ತದೆ.
72598 75931, 81399 87715

**ಶಾಕಿರ ಬ್ಯೂಟಿ ಪಾರ್ಲರ್**
**Shakeera Beauty Parlour**
ಬ್ಯೂಟಿ ಪಾರ್ಲರ್‌ನಲ್ಲಿ ಕೆಲಸ ಮಾಡಲಿಕ್ಕೆ ಸಹಾಯಕಿಯರು ಬೇಕಾಗಿದ್ದಾರೆ.
Wanted Lady Helpers # 74 1/4, 10th Main, PJ. Extension, Davanagere. Contact :
93420 19013

**ಬೇಕಾಗಿದ್ದಾರೆ**
ನುರಿತ ಪಂಚಕರ್ಮ ಥೆರಪಿಸ್ಟ್
ಪುರುಷರು - 1
ಮಹಿಳೆಯರು - 1
ಸಂಪರ್ಕಿಸಿ :
84978 54095

**ತಕ್ಷಣ ಬೇಕಾಗಿದ್ದಾರೆ**
ರಾಜ್ ಭವನ್ ಬಾರ್ ಅಂಡ್ ರೆಸ್ಟೋರೆಂಟ್ ಹರಿಹರ
• ಬಿಲ್ಲಿಂಗ್ ಆಪರೇಟರ್ಸ್ - 4
• ಸಪ್ಲೈಯರ್ಸ್ • ವೆಂಡರ್ಸ್
ಅನುಭವವುಳ್ಳವರಿಗೆ ಆಕರ್ಷಕ ಸಂಬಳ.
ಸಂಪರ್ಕಿಸಿ.
99726 98591, 94490 37488

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2&3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ.**
ಸರ್ಕಾರಿ ನೌಕರರ ಬಡಾವಣೆಯಲ್ಲಿ ಬಿ ಬ್ಲಾಕ್ 30x50 ಪೂರ್ವ, 30x40 ಪೂರ್ವ, 36x60 ಪೂರ್ವ-ದಕ್ಷಿಣ ಕಾರ್ನರ್ ಮನೆ ಮಾರಾಟಕ್ಕಿದೆ. 30x40 ಪಶ್ಚಿಮ, ಎಸ್. ಎಸ್. ಬಡಾವಣೆಯ ಬಿ ಬ್ಲಾಕ್‌ನಲ್ಲಿ 40x60 ದಕ್ಷಿಣ, ಶ್ರೀ ಸಾಮಾನ್ಯದಲ್ಲಿ 30x43, ಉತ್ತರ ಬೈಪಾಸ್ ಸರ್ವೀಸ್ ರಸ್ತೆಗೆ ಕುಬೇರ ಹೋಟೆಲ್ ಹತ್ತಿರ 30x55 ದಕ್ಷಿಣ (ಕಮರ್ಷಿಯಲ್) ಸೈಟ್ ಮಾರಾಟಕ್ಕೆ ಇದೆ.
- ಸಂಪರ್ಕಿಸಿ. ಸುರೇಶ್ ಪಿ.ಎಸ್. ಶಾಮನೂರು
84314 00907

**NA ಸೈಟ್ ಮಾರಾಟಕ್ಕಿದೆ**
ದಾವಣಗೆರೆ ಬಸಾಪುರ ರಸ್ತೆಯಲ್ಲಿ NA ಸೈಟ್ ಮಾರಾಟಕ್ಕಿದೆ.
ಸಂಪರ್ಕಿಸಿ :
94485 66870

**AVOID MOSQUITOES**
Mosquito Net For Doors & Windowes.
SRI GOWRI ENTERPRISES
# 7C2, 4th Cross, Near Shanesh-wara Temple, Karur Industrial Area, P.B. Road, Davangere-6
72049 94628

**ಸೈಟುಗಳು ಮಾರಾಟಕ್ಕಿವೆ**
1) ಡಾಲರ್ಸ್ ಕಾಲೋನಿ (40x51) ಪಶ್ಚಿಮ
2) ಕುಂದವಾಡ ಸೈ. ನಂ. 44 (30x50) ಪಶ್ಚಿಮ, ನೈಋತ್ಯ ಮೂಲೆ
3) ಕುಂದವಾಡ ಸೈಟ್ ನಂ. 43 (30x50) ಪಶ್ಚಿಮ (ಅಕ್ಕ-ಪಕ್ಕ)
97404 47907

**Security guard ಬೇಕಾಗಿದ್ದಾರೆ**
ಹದಡಿ ರೋಡ್ ನಿಟುವಳ್ಳಿ, ಶಿರಮನಹಳ್ಳಿ ರೋಡ್.
97409 77785

**ಬೇಕಾಗಿದ್ದಾರೆ**
ಶ್ರೀ ಮೈಲಾರಲಿಂಗೇಶ್ವರ ನಗರ ಸಾರಿಗೆ ಡ್ರೈವರ್ ಮತ್ತು ಕಂಡಕ್ಟರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ.
94484 42999, 98448 42189

# ರಾಕ್ಷಸಿ ಕೃತ್ಯ ಸಮರ್ಥನೆ ಕಾಂಗ್ರೆಸ್‌ಗೆ ಹೊಸದಲ್ಲ



## ಚಕ್ರವರ್ತಿ ಸೂಲಿಬೆಲೆ

ದಾವಣಗೆರೆ, ಅ. 13- ಮಹಿಷ ದಸರಾ ಸಮರ್ಥನೆ ಮಾಡುವ ಹೊತ್ತಲ್ಲೇ 'ಇಂಡಿಯಾ' ಒಕ್ಕೂಟ ಪ್ಯಾಲೆಸ್ತೇನ್ ಅನ್ನು ಬೆಂಬಲಿಸುವುದು ಗೊತ್ತಾಗಿದೆ. ರಾಕ್ಷಸಿ ಕೃತ್ಯವನ್ನು ಇಂಡಿಯಾ ಕೂಟ ಸಮರ್ಥಿಸಿದೆ. ರಾಕ್ಷಸಿ ಕೃತ್ಯ ಸಮರ್ಥನೆ ಮಾಡೋದು ಕಾಂಗ್ರೆಸ್‌ಗೆ ಹೊಸದೇನಲ್ಲ. ಮಹಿಷಾ ದಸರಾಕ್ಕೆ ಮೈಸೂರಿಗರು ಒಂದಾಗಿ ಪ್ರತಿಭಟನೆ ಮಾಡುತ್ತಿರುವುದು ಸ್ವಾಗತಾರ್ಹ ಎಂದು ಚಕ್ರವರ್ತಿ ಸೂಲಿಬೆಲೆ ತಿಳಿಸಿದರು.

ರಾಜ್ಯಾದ್ಯಂತ ಆರಂಭವಾಗಿರುವ ಜನ ಗಣ ಮನ ಬೆಸೆಯೋಣ ಬೈಕ್ ರ್‍ಯಾಲಿಯು ಇಂದು ನಗರಕ್ಕಾಗಮಿಸಿದ್ದ ಸಂದರ್ಭದಲ್ಲಿ ರ್‍ಯಾಲಿಗೆ ಚಾಲನೆ ನೀಡಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ರಾಕ್ಷಸರ ಸಮರ್ಥನೆ ಮಾಡುವುದು ವಿಶೇಷವೇನು ಅಲ್ಲ' ಎಂದು ಅವರು ತಿಳಿಸಿದರು.

ರಾಜ್ಯದಾದ್ಯಂತ 3500 ಕಿ.ಮೀ. ಬೈಕ್ ರ್‍ಯಾಲಿ ನಡೆಸುವ ಉದ್ದೇಶವಿದ್ದು, ಕೊನೆಯ ಹಂತದಲ್ಲಿದ್ದೇವೆ. ಕೋಲಾರದಿಂದ ಆರಂಭವಾಗಿ ಬೆಂಗಳೂರಿನಲ್ಲಿ ಕೊನೆಗೊಳ್ಳಲಿದೆ. ನರೇಂದ್ರ ಮೋದಿ ಅವರು ಮೂರನೇ ಬಾರಿ ಪ್ರಧಾನಿ ಆಗಬೇಕು ಎನ್ನುವ ಉದ್ದೇಶದಿಂದ ರ್‍ಯಾಲಿ ನಡೆಸುತ್ತಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ಚಕ್ರವರ್ತಿ ಸೂಲಿಬೆಲೆ ತಿಳಿಸಿದರು.

ನಗರದ ಶಕ್ತಿ ದೇವತೆ ದುರ್ಗಾಂಬಿಕಾ ದೇವತೆಗೆ ವಿಶೇಷ ಪೂಜೆ ಸಲ್ಲಿಸಿ ಛತ್ರಪತಿ ಶಿವಾಜಿ ಮೂರ್ತಿಗೆ ಮಾಲಾರ್ಪಣೆ ಮಾಡಲಾಯಿತು.

ಕೇಸರಿ ಧ್ವಜ ಕಟ್ಟುವ ವೇಳೆ ಮೃತಪಟ್ಟ ಪೃಥ್ವಿರಾಜ್‌ಗೆ ಮೌನಾಚರಿಸಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಯಶವಂತರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ್ ಇತರರು ಇದ್ದರು.

# ವಿಮೆ - ಬರ ಪರಿಹಾರವನ್ನು ಬ್ಯಾಂಕ್‌ಗಳು ಕಡಿತಗೊಳಿಸದೇ ರೈತರಿಗೆ ನೀಡಬೇಕು

## ಜಿಲ್ಲಾ ಬ್ಯಾಂಕರ್ಸ್‌ಗಳ ಸಲಹಾ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ. ವೆಂಕಟೇಶ್ ನಿರ್ದೇಶನ



ದಾವಣಗೆರೆ, ಅ.13- ವಿಮೆ ಹಾಗೂ ಬರ ಪರಿಹಾರ ಇನ್‌ಪುಟ್ ಸಬ್ಸಿಡಿ ಹಣವನ್ನು ಯಾವುದೇ ಬ್ಯಾಂಕ್‌ಗಳು ಸಾಲಗಳಿಗೆ ಕಡಿತಗೊಳಿಸದೆ, ನೇರವಾಗಿ ರೈತರ ಕೈ ಸೇರುವಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ಬ್ಯಾಂಕ್ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಜಿಲ್ಲಾ ಬ್ಯಾಂಕರ್ಸ್‌ಗಳ ಸಲಹಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಸ್ತುತ ವರ್ಷದಲ್ಲಿ ಮಳೆಯ ಕೊರತೆಯಾಗಿ ಬರ ಸಂಭವಿಸಿದ್ದು ಬ್ಯಾಂಕುಗಳು ರಿಸರ್ವ್ ಬ್ಯಾಂಕಿನ ನೀತಿ, ನಿಯಮಗಳನ್ನು ಅನುಸರಿಸಿ ಅರ್ಹ ಎಲ್ಲಾ ರೈತರಿಗೂ ಸರ್ಕಾರದ ನಿರ್ದೇಶನದಂತೆ ವಿಮೆ ಹಾಗೂ ಬರ ಪರಿಹಾರ ಹಣವನ್ನು ಖಾತೆಗೆ ವರ್ಗಾಯಿಸಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜನಪ್ರಿಯ ಯೋಜನೆಗಳನ್ನು ಬ್ಯಾಂಕ್‌ಗ ಳು ರೈತರಿಗೆ ತಲುಪಿಸಬೇಕು ಹಾಗೂ ಪ್ರತಿ ಮನೆ ಮನೆಗೂ ಯೋಜನೆಗಳ ಅರಿವು ಮೂಡಿಸಬೇಕು ಎಂದರು.

ರೈತರು ಬೇರೆ ಉದ್ದೇಶಗಳಿಗೆ ಮಾಡಿದ ಸಾಲ ವನ್ನು ವಿಮೆ ಹಾಗೂ ಬರ ಪರಿಹಾರ ಹಣದಲ್ಲಿ ಕಡಿತಗೊಳಿಸಬಾರದು.

ಜಿಲ್ಲೆಯಲ್ಲಿ ಸುಮಾರು 10,000 ಅರ್ಹ ಪಿಂಚಣಿದಾರರ ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆ ಬಾಕಿ ಇದ್ದು, ಈ ತಿಂಗಳ ಒಳಗಾಗಿ ಬ್ಯಾಂಕ್ ಮಿತ್ರ ಮತ್ತು ಗ್ರಾಮ ಪಂಚಾಯಿತಿ ಅಧಿಕಾರಿಗಳ ಸಹಾಯ ದಿಂದ ಬ್ಯಾಂಕರ್ಸ್ ಕಡ್ಡಾಯವಾಗಿ ಆಧಾರ್ ಜೋಡಣೆ ಮಾಡಿಸಬೇಕು.

ಕೇಂದ್ರ ಸರ್ಕಾರದ ಮಹತ್ತರ ಯೋಜನೆಯಾದ ಪಿ.ಎಂ.ಎಫ್. ಎಂ.ಇ ಯೋಜನೆ ಸಾಲಗಳನ್ನು ಎಲ್ಲಾ ಬ್ಯಾಂಕ್‌ಗಳು ತ್ವರಿತಗತಿಯಲ್ಲಿ ರೈತರಿಗೆ ಮಂಜೂರು ಮಾಡಬೇಕು. ಮಳೆ ಕೊರತೆಯಿಂದ ರೈತರು ಕಂಗಾಲಾಗಿದ್ದು, ಬ್ಯಾಂಕುಗಳು ರೈತರಿಗೆ ಯಾವುದೇ ಒತ್ತಡವನ್ನು ಏರಬಾರದು ಎಂದರು.

ಜಿಲ್ಲಾ ಸಾಮಾಜಿಕ ಭದ್ರತಾ ಇಲಾಖೆಯ ಸಹಾಯಕ ನಿರ್ದೇಶಕರಾದ ಪುಷ್ಪ, ಲೀಡ್ ಬ್ಯಾಂಕ್ ಜಿಲ್ಲಾ ವ್ಯವಸ್ಥಾಪಕ ಪ್ರಕಾಶ್ ಜಿ.ಸಿ, ನಬಾರ್ಡ್ ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕರಾದ ರಶ್ಮಿರೇಖಾ ಉಪಸ್ಥಿತರಿದ್ದರು.

# ಕ್ರಿಕೆಟ್ : ಭಾರತಕ್ಕೆ ಶುಭ ಕೋರಿದ ಎಸ್ಸೆಸ್



ದಾವಣಗೆರೆ, ಅ. 13 - ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತ ತಂಡ ಗೆಲುವು ಸಾಧಿಸಲಿ ಎಂದು ಹಾರೈಸಿ ದಾವಣಗೆರೆ ಕ್ರಿಕೆಟ್ ಅಕಾಡೆಮಿ ಮತ್ತು ಜಿಲ್ಲಾ ಕ್ರೀಡಾಪಟುಗಳ ಸಂಘ ಇಂದು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಭಾಗವಹಿಸಿದ್ದರು.

ನಂತರ ಕ್ರೀಡಾಪಟುಗಳನ್ನುದ್ದೇಶಿಸಿ ಮಾತನಾಡಿದ ಎಸ್ಸೆಸ್, ಭಾರತ ತಂಡ 2 ಬಾರಿ ವಿಶ್ವಕಪ್ ಜಯ ಗಳಿಸಿದ್ದು, ಈ ಬಾರಿಯೂ ಭಾರತ ತಂಡ ವಿಶ್ವಕಪ್ ಗೆಲ್ಲುವ ಮುನ್ಸೂಚನೆ ಇದ್ದು, ವಿಶ್ವಕಪ್ ಗೆಲ್ಲುವ ಮೂಲಕ ನಂಬರ್ 1 ಸ್ಥಾನವನ್ನು ಭಾರತ ತಂಡ ಉಳಿಸಿಕೊಳ್ಳಲಿ ಎಂದು ಹಾರೈಸಿದರು.

ಕ್ರೀಡಾಪಟುಗಳ ಸಂಘದ ಜಿಲ್ಲಾಧ್ಯಕ್ಷ ದಿನೇಶ್ ಕೆ.ಶೆಟ್ಟಿ ಮಾತನಾಡಿ, ಭಾರತ ತಂಡ ಆಡಿದ 2 ಪಂದ್ಯಗಳನ್ನು ಜಯಗಳಿಸಿದ್ದು, ಎಲ್ಲಾ ಪಂದ್ಯಗಳನ್ನು ಜಯಗಳಿಸಿ ವಿಶ್ವಕಪ್ ಪಡೆಯಲಿ ಎಂದು ಶುಭ ಕೋರಿದರು.

ಈ ಸಂದರ್ಭದಲ್ಲಿ ಕ್ರೀಡಾ ಪ್ರೋತ್ಸಾಹಕರಾದ ಹೆಚ್.ಆನಂದಪ್ಪ, ಕ್ರಿಕೆಟ್ ತರಬೇತುದಾರರಾದ ಗೋಪಾಲಕೃಷ್ಣ, ತಿಮ್ಮೇಶ್ ಮತ್ತಿತರರಿದ್ದರು.

# ನಗರದಲ್ಲಿ ಇಂದು ಶಿವಗೋಷ್ಠಿ

ಶಿವಗೋಷ್ಠಿ ಸಮಿತಿ, ಶ್ರೀ ಶಿವಕುಮಾರಸ್ವಾಮಿ ಮಹಾಮಂಟಪ ಹಾಗೂ ಸಾದರ ನೌಕರರ ಬಳಗದ ಸಹಯೋಗದಲ್ಲಿ ಇಂದು ಸಂಜೆ 6.30 ಕ್ಕೆ ತರಳಬಾಳು ಬಡಾವಣೆಯ ಶ್ರೀ ಶಿವಕುಮಾರ ಸ್ವಾಮಿ ಮಹಾಮಂಟಪದಲ್ಲಿ ನಡೆಯಲಿದೆ. ಅಧ್ಯಕ್ಷತೆಯನ್ನು ಎಂ.ಬಿ. ಸ ಂ ಗ ಮೇ ಶ್ವ ರ ಗೌ ಡ್ರು ವಹಿಸುವರು. 'ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ಚಾರಿತ್ರಿಕ ಸಾಧನೆಗಳು' ವಿಷಯ ಕುರಿತು ನಾಗರಾಜ ಸಿರಿಗೆರೆ ಉಪನ್ಯಾಸ ನೀಡುವರು.

ನಿವೃತ್ತ ಉಪನ್ಯಾಸಕ ಲಿಂ. ಕೆ. ಆರ್. ಈಳಿಗೇರ, ಮುಂಡರಗಿ ಇವರ ಸ್ಮರಣೆ ಯನ್ನು ಅಥಣಿ ಕಾಲೇಜು ಪ್ರಾಚಾರ್ಯ ಕೆ. ಷಣ್ಮುಖಪ್ಪ ನಡೆಸಿಕೊಡುವರು. ಕದಳಿ ಮಹಿಳಾ ವೇದಿಕೆ ಅವರಿಂದ ವಚನ ಗಾಯನ ನಡೆಯುವುದು.

# ನೀಲಾನಹಳ್ಳಿಯ ಆದಿನಾಥ ದಿಗಂಬರ ಜೈನ್ ದೇವಾಲಯದಲ್ಲಿ ಪೂಜೆ

ದಾವಣಗೆರೆ ತಾಲ್ಲೂಕಿನ ನೀಲಾನಹಳ್ಳಿಯ ಭಗವಾನ್ ಶ್ರೀ 1008 ಆದಿನಾಥ ದಿಗಂಬರ ಜೈನ ಮಂದಿರದಲ್ಲಿ ಇಂದು ಅಮಾವಾಸ್ಯೆ ಪ್ರಯುಕ್ತ ಭಗವಾನ್ ಶ್ರೀ 1008 ಮುನಿಸುವ್ರತ ತೀರ್ಥಂಕರರಿಗೆ ಬೆಳಿಗ್ಗೆ ನಿತ್ಯ ಪೂಜೆ, ಆರಾಧನೆ, ಕಳಸಾಭಿಷೇಕ ಮತ್ತು ಪಾಲಕಿ ಉತ್ಸವ ಕಾರ್ಯಕ್ರಮಗಳು ನಡೆಯಲಿವೆ.

ವರ್ಷದ ಯಾವುದೇ ತಿಂಗಳ ಶನಿವಾರ ಅಮಾವಾಸ್ಯೆ ಬಂದಾಗ ಭಗವಾನ್ ಶ್ರೀ 1008 ಮುನಿಸುವ್ರತ ತೀರ್ಥಂಕರರಿಗೆ ಪೂಜೆ, ಆರಾಧನೆ, ಕಳಸಾಭಿಷೇಕ ಮತ್ತು ಪಾಲಕಿ ಉತ್ಸವಗಳು ಪದ್ಧತಿಯಂತೆ ಇರುತ್ತವೆ ಎಂದು ನೀಲಾನಹಳ್ಳಿಯ ಭಗವಾನ್ ಶ್ರೀ 1008 ಆದಿನಾಥ ದಿಗಂಬರ ಜೈನ ಟ್ರಸ್ಟ್ ತಿಳಿಸಿದೆ.

# ಕಿತ್ತೂರು ರಾಣಿ ಚನ್ನಮ್ಮನ ವಿಜಯೋತ್ಸವ ರಥಕ್ಕೆ ಸ್ವಾಗತ



ದಾವಣಗೆರೆ, ಅ.13- ಕಿತ್ತೂರು ರಾಣಿ ಚನ್ನಮ್ಮನ ವಿಜಯೋತ್ಸವದ ರಥವು ಇಂದು ಸಂಜೆ ನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್, ಅಪರ ಜಿಲ್ಲಾಧಿಕಾರಿ ಲೋಕೇಶ್, ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಪ್ರಧಾನ ಧರ್ಮದರ್ಶಿ ಬಿ.ಸಿ.ಉಮಾಪತಿ, ತಹಶೀಲ್ದಾರ್ ಡಾ.ಅಶ್ವತ್ಥ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ ಮತ್ತಿತರರು ಸ್ವಾಗತಿಸಿದರು.

ದೇವರಮನೆ ಶಿವಕುಮಾರ್, ಎಂ.ದೊಡ್ಡಪ್ಪ, ಕಾಶಿನಾಥ್, ನೀಲಗುಂದ ಜಯಮ್ಮ, ಮಲ್ಲಿನಾಥ್, ಮೀನಾ ಪ್ರಸಾದ್ ಅನುಪೂರ್, ಅಂದನೂರು ವಸಂತಾ, ವೀಣಾ ನಟರಾಜ್ ಬೆಳ್ಳೂಡಿ,ಮುರಿಗೆಮ್ಮ, ಸುಧಾ, ವೀರಭದ್ರಪ್ಪ, ವಕೀಲ ಬಸವರಾಜ್ ಉಚ್ಚಂಗಿದುರ್ಗ, ಸ್ವರೂಪ್ ಅಂಗಡಿ, ಮಂಜುನಾಥ ಪುರವಂತರ್,ಲಿಂಗರಾಜ್, ನಂದೀಶ್ ಬಳ್ಳಾರಿ, ಶ್ರೀಧರ್ ಸಣ್ಣಪ್ಪನವರ್, ಕುಮಾರ್ ಹುಂಬಿ, ಬಾದಾಮಿ ಜಯಣ್ಣ, ನಿಂಗಪ್ಪ ಇಟ್ಟಿಗಿ, ಸಾಹಿತ್ಯ ಪರಿಷತ್‌ನ ಪರಮೇಶ್ವರಪ್ಪ, ಬೇತೂರ್ ಷಡಾಕ್ಷರಪ್ಪ ಮುಂತಾದವರು ಉಪಸ್ಥಿತರಿದ್ದು ರಥವನ್ನು ಸ್ವಾಗತಿಸಿದರು.

# ಶಾಮನೂರಿನ ಮಾಲಸಾಂಬಾ ಗಂಗಮಾಳಮ್ಮ ದೇವಸ್ಥಾನದಲ್ಲಿ ಇಂದಿನಿಂದ ದಸರಾ ಪೂಜೆ



ದಾವಣಗೆರೆ - ಶಾಬನೂರಿನ (ಹೊಸ ಕ್ಯಾಂಪ್) ನಲ್ಲಿರುವ ಶ್ರೀ ಮಾಲಸಾಂಬಾ ಗಂಗಮಾಳಮ್ಮ ದೇವಸ್ಥಾನದಲ್ಲಿ ನಾಡ ಹಬ್ಬ ದಸರಾ ಪ್ರಯುಕ್ತ ಇಂದು ಬೆಳಿಗ್ಗೆ 9 ಗಂಟೆಗೆ ಶ್ರೀ ಸ್ವಾಮಿ ಮತ್ತು ದೇವಿಯ ಅಭಿಷೇಕ ನಡೆಯಲಿದೆ.

ನಾಳೆ ಭಾನುವಾರ ಬೆಳಿಗ್ಗೆ ಗಣಹೋಮ ಹಾಗೂ ರಾತ್ರಿ 8.30 ಕ್ಕೆ ದೀಪಾರಾಧನೆ ಹಮ್ಮಿಕೊಳ್ಳಲಾಗಿದೆ. ಅಂದಿನಿಂದ ಪ್ರತಿದಿನ ಸಂಜೆ ಶ್ರೀ ಮಾಲಸಾಂಬಾ ಗಂಗಮಾಳಮ್ಮ ದೇವಿ ದೀಪಾರಾಧನೆ ಮತ್ತು ಪುರಾಣ ಪ್ರವಚನ ನಡೆಯುವುದು. ಅಲ್ಲದೇ, ಪ್ರತಿದಿನ ಒಂದೊಂದು ಕಾರ್ಯಕ್ರಮ ನಡೆಯುವುದು ಎಂದು ಸಮಿತಿಯ ಕಾರ್ಯದರ್ಶಿ ಸುರೇಶ್ ಚೌವ್ಹಾಣ್ ತಿಳಿಸಿದ್ದಾರೆ.

# ಆಫ್ ಅಂಡ್ ಆನ್ ಪದ್ಧತಿ ರದ್ದುಗೊಳಿಸಿ ನಿರಂತರ 100 ದಿನ ನೀರು ಹರಿಸುವಂತೆ ಸಂಸದ ಸಿದ್ದೇಶ್ವರ ಆಗ್ರಹ



ದಾವಣಗೆರೆ, ಅ. 13 - ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರ ನೇತೃತ್ವದಲ್ಲಿ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಮತ್ತು ಭದ್ರಾ ನೀರಾವರಿ ಸಲಹಾ ಸಮಿತಿ (ಐ.ಸಿ.ಸಿ) ಅಧ್ಯಕ್ಷ ಮಧು ಬಂಗಾರಪ್ಪ ಅವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ಭೇಟಿ ಮಾಡಲಾಯಿತು.

ಜಿಲ್ಲೆಯಲ್ಲಿ ರೈತರು ಸುಮಾರು 1.5 ಲಕ್ಷ ಎಕರೆಯಲ್ಲಿ ಭತ್ತದ ನಾಟಿ ಮಾಡಿದ್ದಾರೆ. ಬೆಳೆದಿರುವ ಭತ್ತದ ಬೆಳೆ ನಾಶವಾಗುತ್ತದೆ. ಆಫ್ ಅಂಡ್ ಆನ್ ಪದ್ಧತಿ ರದ್ದುಗೊಳಿಸಬೇಕು ಮತ್ತು ನಿರಂತರ 100 ದಿನ ನೀರು ಹರಿಸಬೇಕು ಎಂದು ಆಗ್ರಹಿಸಲಾಯಿತು.

ಜಿ.ಎಂ. ಸಿದ್ದೇಶ್ವರ ಅವರ ನೇತೃತ್ವದ ನಿಯೋಗದಲ್ಲಿ ವಿಧಾನ ಪರಿಷತ್ ಸದಸ್ಯ ಕೆ.ಎಸ್ ನವೀನ್, ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಲೋಕಿಕೆರೆ ನಾಗರಾಜ್, ರೈತ ಮುಖಂಡರಾದ ಕೋಳೇನಹಳ್ಳಿ ಬಿ.ಎಂ. ಸತೀಶ್, ಧನಂಜಯ ಕಡ್ಲೆಬಾಳು, ಶಾಗಲೆ ದೇವೇಂದ್ರಪ್ಪ, ಬಾತಿ ವೀರೇಶ್ ದೊಗ್ಗಳ್ಳಿ, ಬಿ.ಕೆ. ಶಿವಕುಮಾರ್, ವಕೀಲ ಕೆ.ಎನ್. ಹನುಮಂತಪ್ಪ, ಅಥಿತ್ ಅಂಬರಕರ್, ಕೊಟ್ರೇಶ್ ಗೌಡ ಮುಂತಾದವರು ಭಾಗವಹಿಸಿದ್ದರು.

# ಪ್ರಸಕ್ತ ಸಾಲಿನ ರೇಷ್ಮೆ ಕೃಷಿ ಪ್ರಶಸ್ತಿಗಾಗಿ ರೇಷ್ಮೆ ಬೆಳೆಗಾರರಿಂದ ಅರ್ಜಿ

ದಾವಣಗೆರೆ, ಅ. 13 - ರೇಷ್ಮೆ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ರೇಷ್ಮೆ ಕೃಷಿ ಪ್ರಶಸ್ತಿಗಾಗಿ ಉತ್ತಮ ಪ್ರಗತಿ ಸಾಧಿಸಿರುವ ರೇಷ್ಮೆ ಬೆಳೆಗಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಇಚ್ಛಿಸುವ ರೇಷ್ಮೆ ಬೆಳೆಗಾರರು ಕನಿಷ್ಠ 1 ಎಕರೆ ಹಿಪ್ಪು ನೇರಳೆ ತೋಟ ಹಾಗೂ ಪ್ರತ್ಯೇಕ ಹುಳು ಸಾಕಾಣಿಕಾ ಮನೆ ಹೊಂದಿರಬೇಕು.

100 ಮೊಟ್ಟೆಗೆ ಸರಾಸರಿ ರೇಷ್ಮೆ ಗೂಡಿನ ಇಳುವರಿ 65 ಕೆ.ಜಿ ಹಾಗೂ ಒಂದು ಎಕರೆಗೆ ರೇಷ್ಮೆಗೂಡಿನ ಉತ್ಪಾದನೆ 500 ಕೆ.ಜಿ.ಗಿಂತ ಕಡಿಮೆ ಇರಬಾರದು.

ರೇಷ್ಮೆಬೆಳೆಗಾರರು ರೇಷ್ಮೆಪಾಸ್‌ಬುಕ್, ರೇಷ್ಮೆ ಮೊಟ್ಟೆ ಅಥವಾ ಚಾಕಿ ಖರೀದಿಸಿರುವ ಹಾಗೂ ರೇಷ್ಮೆ ಗೂಡು ಮಾರಾಟ ಮಾಡಿರುವ ಬಗ್ಗೆ ದಾಖಲಾತಿಗಳನ್ನು ಹೊಂದಿರಬೇಕು.

ಆಸಕ್ತರು ಸ್ಥಳೀಯ ರೇಷ್ಮೆ ವಿಸ್ತರಣಾಧಿಕಾರಿ ಅಥವಾ ರೇಷ್ಮೆಸಹಾಯಕ ನಿರ್ದೇಶಕರ ಕಚೇರಿಯಿಂದ ಅರ್ಜಿ ಪಡೆದು ಅಗತ್ಯ ದಾಖಲೆಗಳೊಂದಿಗೆ ಅ.17 ರೊಳಗಾಗಿ ಕಚೇರಿಗೆ ಸಲ್ಲಿಸಬೇಕು ಎಂದು ರೇಷ್ಮೆಉಪನಿರ್ದೇಶಕರು ತಿಳಿಸಿದ್ದಾರೆ.

# ಧೈರ್ಯ, ಸ್ಥೈರ್ಯ, ಸನ್ನಡತೆ ಕಲಿಸುವ ಸ್ಕೌಟ್ಸ್, ಗೈಡ್ಸ್ ಸಂಸ್ಥೆ



## ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಜಿ. ಕೊಟ್ರೇಶ್ ಮೆಚ್ಚುಗೆ

ದಾವಣಗೆರೆ, ಅ. 13- ವಿಶ್ವವ್ಯಾಪಿಯಾಗಿರುವ ಭಾರತ್ ಸ್ಕೌಟ್ಸ್, ಗೈಡ್ಸ್ ಸಂಸ್ಥೆಯು ಸನ್ನಡತೆ, ಶಿಸ್ತು, ಸೇವಾ ಮನೋಭಾವನೆ, ಧೈರ್ಯ, ಸ್ಥೈರ್ಯವನ್ನು ಕಲಿಸುತ್ತದೆ. ಸಂಸ್ಥೆಯಲ್ಲಿ ಪಡೆದ ತರಬೇತಿಯಿಂದ ಉತ್ತಮ ವ್ಯಕ್ತಿತ್ವವನ್ನು ರೂಢಿಸಿಕೊಳ್ಳಲು ಸಾಧ್ಯವಿದೆ ಎಂದು ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಜಿ. ಕೊಟ್ರೇಶ್ ಹೇಳಿದರು.

ನಗರದ ಪಿ.ಜೆ. ಬಡಾವಣೆಯಲ್ಲಿರುವ ಬಾಪೂಜಿ ಕೇಂದ್ರೀಯ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ನೇತಾಜಿ ಸ್ಕೌಟ್ಸ್ ಗ್ರೂಪ್ ಮತ್ತು ಚೇತನಾ ಗೈಡ್ ಗ್ರೂಪ್‌ನ 25 ವಸಂತಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಹಮ್ಮಿಕೊಂಡಿದ್ದ 'ರಜತ ವೈಭವ' ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಈ ಸಂಸ್ಥೆಯು ಪರೋಪಕಾರ ಗುಣ, ಮಾನಸಿಕ ಮತ್ತು ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ನೆರವಾಗಲಿದೆ. ಭಾರತೀಯ ಸಂಸ್ಕೃತಿ, ಪರಂಪರೆಯನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಸಂಸ್ಥೆ ಮುಂದಡಿಯಿಟ್ಟಿದೆ ಎಂದರು.

ಇಂದು ಪರಿಸರ ಉಳಿಸಿ, ಬೆಳೆಸುವ ಅಗತ್ಯತೆ ಹೆಚ್ಚಾಗಿದೆ. ಮಕ್ಕಳಲ್ಲಿ ವೈಜ್ಞಾನಿಕ ಮತ್ತು ವೈಚಾರಿಕತೆ ಬಗ್ಗೆ ಚಿಂತನೆ ನಡೆಸಲು ಅವಕಾಶವನ್ನು ಪೋಷಕರು ಮಾಡಬೇಕಾಗಿದೆ ಎಂದು ಕರೆ ನೀಡಿದರು.

ಸಮಾಜಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದರೆ ಜೀವನ ಸಾರ್ಥಕವಾಗುತ್ತದೆ. ಇಂದಿನ ಮಕ್ಕಳೂ ಸಹ ಸಮಾಜ, ದೇಶಕ್ಕೆ ಕೊಡುಗೆ ನೀಡಬೇಕೆಂದು ತಿಳಿಸಿದರು.

ಜಿಲ್ಲಾ ಸ್ಕೌಟ್ ಆಯುಕ್ತ ಎ.ಪಿ. ಷಡಾಕ್ಷರಪ್ಪ ಮಾತನಾಡಿ, ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಗಳಿಸಿದ ಸಂಸ್ಥೆಯಾಗಿದ್ದು, ಪ್ರಪಂಚದ 160 ದೇಶಗಳಲ್ಲಿ ಸ್ಕೌಟ್ಸ್ ಅಂಡ್ ಗೈಡ್ಸ್ ಸಂಸ್ಥೆಗಳನ್ನು ತೆರೆಲಾಗಿದೆ. ತನ್ಮೂಲಕ ಮಕ್ಕಳಿಗೆ ನೈತಿಕ, ಅಧ್ಯಾತ್ಮಿಕ, ಸಾಮಾಜಿಕ ಶಿಕ್ಷಣವನ್ನು ನೀಡುತ್ತಾ ಬರಲಾಗುತ್ತಿದೆ ಎಂದರು.

ಸೇವಾ ಮನೋಭಾವ, ಉತ್ತಮ ಸಂಸ್ಕಾರವನ್ನು ಸಹ ಮಕ್ಕಳಲ್ಲಿ ಬೆಳೆಸಲಾಗುತ್ತದೆ. ನೇತಾಜಿ ಸ್ಕೌಟ್ಸ್ ಗ್ರೂಪ್ ಮತ್ತು ಚೇತನಾ ಗೈಡ್ಸ್ ಗ್ರೂಪ್ ಜಿಲ್ಲೆಯಲ್ಲಿ ಉತ್ತಮ ಸೇವಾ ಕಾರ್ಯಗಳನ್ನು ಮಾಡುತ್ತಿವೆ ಎಂದು ಶ್ಲಾಘಿಸಿದರು.

ತರಬೇತುದಾರ ಡಿ. ಬಸವರಾಜ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಗೈಡ್ ಆಯುಕ್ತರಾದ ಶಾರದಾ ಮಾಗಾನಹಳ್ಳಿ, ನೇತಾಜಿ ಸ್ಕೌಟ್ ಗ್ರೂಪ್ ಪೋಷಕರ ಸಮಿತಿ ಅಧ್ಯಕ್ಷ ಶಿವಮೂರ್ತಿ, ರಾಮಚಂದ್ರಪ್ಪ, ರಾಜಸ್ಥಾನದ ಸಂಸ್ಥೆ ಜಿಲ್ಲಾ ಅಧಿಕಾರಿ ಮುಖೇಶ್ ಜಿ, ದಾವಣಗೆರೆ ನೇತಾಜಿ ಸ್ಕೌಟ್ಸ್ ಗ್ರೂಪ್ ಸಂಸ್ಥಾಪಕ ಜಿ.ಎಸ್. ವಿಜಯ್, ಕಾವೇರಿ ಮತ್ತಿತರರು ಉಪಸ್ಥಿತರಿದ್ದರು.

ಎ.ಪಿ. ಷಡಾಕ್ಷರಪ್ಪ, ಸಿ.ಆರ್.ಮರುಳಪ್ಪ, ಶಿವಮೊಗ್ಗದ ರಾಜೇಶ ಅವಲಕ್ಕಿ, ಆರ್. ಗಾಯತ್ರಿ, ಹಾಸನದ ಕಾಂಚನಾ ಮಾಲಾ, ಟಿ.ಎಂ. ರವೀಂದ್ರಸ್ವಾಮಿ, ಚಿತ್ರದುರ್ಗದ ಗುರುಮೂರ್ತಿ, ಮುಖೇಶ್ ಜೀ ಮತ್ತಿತರರನ್ನು ಗೌರವಿಸಲಾಯಿತು.

# ನಗರದಲ್ಲಿ ನಾಳೆ ವಾಸ್ಕ್ಯುಲರ್ ಶಸ್ತ್ರ ಚಿಕಿತ್ಸಾ ಸಮಾಲೋಚನೆ

ದಾವಣಗೆರೆ, ಅ. 13 - ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯ ವಾಸ್ಕ್ಯುಲರ್ ಶಸ್ತ್ರಚಿಕಿತ್ಸಾ ತಜ್ಞ ರಾದ ಡಾ. ಬಿ. ರಾಜೇಂದ್ರ ಪ್ರಸಾದ್ ಅವರು ನಗರದ ಆರ್ಕೆ ಆಸ್ಪತ್ರೆಯಲ್ಲಿ ನಾಡಿದ್ದು ದಿನಾಂಕ 15ರ ಭಾನುವಾರ ಬೆಳಿಗ್ಗೆ 10 ರಿಂದ 1 ರವರೆಗೆ ಸಮಾಲೋಚನೆಗೆ ಲಭ್ಯವಿರುತ್ತಾರೆ.

ಉಬ್ಬಿರುವ ರಕ್ತನಾಳಗಳು, ಕೈ ಮತ್ತು ಕಾಲುಗಳ ಊತ ಮತ್ತು ನೋವು, ಮಧುಮೇಹ, ಡಯಾಲಿಸಿ ಸ್, ವಾಸಿಯಾಗದ ಗಾಯಗಳು, ಕಾಲು ಬೆರಳುಗಳ ಬಣ್ಣ ಬದಲಾವಣೆ, ಗ್ಯಾಂಗ್ರೀನ್ ಮುಂತಾದ ಸಮಸ್ಯೆಗಳ ಬಗ್ಗೆ ತಜ್ಞರ ಜೊತೆ ಸಮಾಲೋಚನೆ ಮಾಡಲು ಬಯಸುವವರು ಮೊ. 80505 60580 ನಂಬರ್‌ಗೆ ಸಂಪರ್ಕಿಸಬಹುದು.

# ಎಂ.ಪಿ.ರೇಣುಕಾಚಾರ್ಯಗೆ ಎಂಎಲ್‌ಎ ಟಿಕೆಟ್ ಕೂಡ ಸಿಗಲ್ಲ



ದಾವಣಗೆರೆ, ಅ.13- ಹೊನ್ನಾಳಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರು ಬರುವ ಲೋಕಸಭಾ ಚುನಾವಣೆಗೆ ಬಿಜೆಪಿ ಟಿಕೆಟ್ ಆಕಾಂಕ್ಷಿ ಎಂದು ಹೇಳಿಕೊಂಡು ಓಡಾಡುತ್ತಿದ್ದು, ಅವರಿಗೆ ಎಂಪಿ ಇರಲಿ ಎಂಎಲ್‌ಎ ಚುನಾವಣೆಗೂ ಕೂಡಾ ಟಿಕೆಟ್ ಸಿಗುವುದಿಲ್ಲ ಎಂದು ದಾವಣಗೆರೆ ಎಪಿಎಂಸಿ ಮಾಜಿ ಅಧ್ಯಕ್ಷ ಬಿ. ಗಂಗಾಧರ್ ತುಂಬಿಗೆರೆ ಹೇಳಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಹಾಲಿ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಸತತ 4 ಬಾರಿ ಗೆದ್ದು ಜಿಲ್ಲೆಯ ಸಮಸ್ತ ನಾಗರಿಕರಿಗೆ ಚಿರಪರಿಚಿತರಾಗಿದ್ದಾರೆ. ಈ ಹಿಂದೆ ರೇಣುಕಾ ಮಂದಿರದಲ್ಲಿ ನಡೆದ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಕೂಡ 2024 ರ ಲೋಕಸಭಾ ಚುನಾವಣೆಗೆ ಜಿ.ಎಂ. ಸಿದ್ದೇಶ್ವರ ಅವರೇ ಅಭ್ಯರ್ಥಿ ಎಂದು ಘೋಷಣೆ ಮಾಡಿದ್ದಾರೆ ಎಂದರು.

ರೇಣುಕಾಚಾರ್ಯ ಯಾವಾಗ ಕಾಂಗ್ರೆಸ್ ಮುಖಂಡರನ್ನು ಭೇಟಿ ಮಾಡಿದರೋ ಅಲ್ಲಿಗೆ ಅವರಿಗೆ ಎಂಪಿ ಅಲ್ಲ ಎಂಎಲ್‌ಎ ಟಿಕೆಟ್ ಕೂಡ ಸಿಗುವುದಿಲ್ಲ. ಮೊದಲು ಇದನ್ನು ಅವರು ಗಟ್ಟಿ ಮಾಡಿಕೊಳ್ಳಬೇಕು ಎಂದು ಗಂಗಾಧರ ಹೇಳಿದ್ದಾರೆ.

# ಗಂಗನರಸಿಯಲ್ಲಿ ಇಂದು ಅಮಾವಾಸ್ಯೆ ವಿಶೇಷ ಪೂಜೆ



ಹರಿಹರ ತಾಲ್ಲೂಕು ಗಂಗನರಸಿಯ ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಹೊರಮಠ, ಶ್ರೀ ಹನುಮಂತ ದೇವರ ಜೀರ್ಣೋದ್ಧಾರ ಸಮಿತಿಯಿಂದ ಇಂದು ಮಹಾನವಮಿ ಅಮಾವಾಸ್ಯೆ ವಿಶೇಷ ಪೂಜೆ ನಡೆಯ ಲಿದೆ. ಅಂದು ಬೆಳಿಗ್ಗೆ 11 ಕ್ಕೆ ಶ್ರೀ ಗೋಣಿ ಬಸವೇಶ್ವರ, ನಾಗದೇವತಾ ಸ್ವಾಮಿಗಳಿಗೆ ವಿಶೇಷ ಪೂಜೆ, ಅಭಿಷೇಕ ನಡೆಯುವುದು. ನಂತರ 11.30 ಕ್ಕೆ ಮಹಾ ಪ್ರಸಾದ ಸೇವೆಯನ್ನು ಶ್ರೀಮತಿ ಬಸಜ್ಜರ ಗೌರಮ್ಮ ರಾಜ್ಯ ಇಮ್ಮಡಿ ಚಿಕ್ಕ ಭೂಪಾಲ್ ಕಿರಣ್ ದೊಡ್ಡಡ್ಡೇರ, ಜಿಗಳಿ, ಇವರು ಏರ್ಪಡಿಸಿದ್ದಾರೆ ಎಂದು ಸಮಿತಿಯ ಪ್ರಧಾನ ಕಾರ್ಯದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

# ಪ್ರಧಾನಿ 'ಪರೀಕ್ಷಾ ಪೇ ಚರ್ಚಾ' ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿ ಯುವಶ್ರೀ



ದಾವಣಗೆರೆ, ಅ.13- ನಗರದ ಸೋಮೇಶ್ವರ ವಿದ್ಯಾಲಯದ ವಿದ್ಯಾರ್ಥಿನಿ ಸಿ. ಎಸ್.ಯುವಶ್ರೀ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ 'ಪರೀಕ್ಷಾ ಪೇ ಚರ್ಚಾ' ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಶಂಸಾ ಪತ್ರ ಪಡೆದಿರುತ್ತಾರೆ.

ಭಾರತವು 2047ಕ್ಕೆ ಸ್ವಾತಂತ್ರ್ಯದ ಶತಮಾನೋತ್ಸವ ಆಚರಿಸಲಿದೆ. ಈ ದೃಷ್ಟಿಯಿಂದ ಮುಂದಿನ 25 ವರ್ಷಗಳ ಕಾಲವು ನಮಗೆ 'ಅಮೃತ ಕಾಲ'ವಾಗಿದೆ. ನಾವೆಲ್ಲರೂ ಸೇರಿ ನಮ್ಮ ದೇಶದ ಇತಿಹಾಸದಲ್ಲಿ ಉಜ್ವಲ ಯುಗವನ್ನಾಗಿ ಮಾಡೋಣ ಮತ್ತು 'ವಿಕಸಿತ ಭಾರತ ಕಟ್ಟುವ ದೃಢ ಸಂಕಲ್ಪ, ಗುಲಾಮಗಿರಿಯ ಮಾನಸಿಕತೆಯಿಂದ ಮುಕ್ತಿ, ನಮ್ಮ ಪರಂಪರೆಯ ಬಗ್ಗೆ ಹೆಮ್ಮೆ, ಒಗ್ಗಟ್ಟಿನ ಬಲವರ್ಧನೆ ಮತ್ತು ಕರ್ತವ್ಯಗಳತ್ತ ಗಮನ' ಈ ಐದು ಪಂಚಪ್ರಾಣ ತತ್ವಗಳನ್ನು ಕಾಯಾ ವಾಚಾ ಮನಸಾ ಅನುಸರಿಸೋಣ ಎಂಬ ಸಂದೇಶವಿರುವ ಪತ್ರವನ್ನು ಯುವಶ್ರೀಗೆ ಕಳುಹಿಸಿರುವ ಪ್ರಧಾನಿಯವರು ನಿಮ್ಮ ಭವಿಷ್ಯ ಉಜ್ವಲವಾಗಿರಲಿ ಎಂದು ಶುಭ ಹಾರೈಸಿದ್ದಾರೆ.

BUSINESS OPPORTUNITY



INDIA'S MOST 155 YEARS OLD TRUSTED BRAND

Wanted financial advisors For DAVANGERE Branch".

Age Group: Above 25 years. Qualification: Minimum SSLC, PUC, ANY DEGREE, Can apply any professionalist, retired employees, house wife's.

(OPPORTUNITY TO EARN UNLIMITED. WORK FULL-TIME OR PART-TIME)

Call For Registration:

98805 73887 and 98441 29091

Visiting time.10:30 am to 1.30 pm Come with ur biodata

# ಭದ್ರಾ ನಾಲೆಯಲ್ಲಿ ಸತತವಾಗಿ ನೀರು ಹರಿಸಿ : ಸಚಿವ ಎಸ್ಸೆಸ್ಸೆಂ



ಬೆಂಗಳೂರು, ಅ.13- ಭದ್ರಾ ಜಲಾಶಯದಿಂದ ಬಲದಂಡೆ ನಾಲೆಗೆ 'ಆಫ್ ಅಂಡ್ ಆನ್' ಮಾಡದೇ 100 ದಿನ ಮುಗಿಯುವವರೆಗೂ ಸತತವಾಗಿ ನೀರು ಹರಿಸಿ ಎಂದು ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಒತ್ತಾಯಿಸಿದ್ದಾರೆ.

ಅವರು ಶುಕ್ರವಾರ ಸಂಜೆ ಬೆಂಗಳೂರಿನ ಕುಮಾರ ಕೃಪ ಅತಿಥಿ ಗೃಹದಲ್ಲಿ ಜಲ ಸಂಪನ್ಮೂಲ ಸಚಿವರೂ ಆದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಆಫ್ ಅಂಡ್ ಆನ್ ಮಾಡಿ ನೀರು ಹರಿಸುವುದರಿಂದ ಭತ್ತದ ನಾಟಿ ಮಾಡಿರುವ ರೈತರಿಗೆ ಬಹಳ ತೊಂದರೆ ಆಗಲಿದೆ. ಹಾಗಾಗಿ ನೀರಿನ ಹರಿವಿನಲ್ಲಿ ಪ್ರಮಾಣ ಕಡಿಮೆ ಮಾಡಿ ಸತತವಾಗಿ ನೀರು ಹರಿಸುವಂತೆ ಎಸ್ಸೆಸ್ಸೆಂ ಪಟ್ಟು ಹಿಡಿದರು. ಆಗ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಭದ್ರಾ ಕಾಡಾ ಅಧ್ಯಕ್ಷ ಮಧು ಬಂಗಾರಪ್ಪ ಮಾತನಾಡಿ, ಬೇಸಿಗೆ ಸಮಯದಲ್ಲಿ ಕುಡಿಯುವ ನೀರನ್ನು ಉಳಿಸಿಕೊಳ್ಳಬೇಕಾಗಿರು ವುದರಿಂದ ಆಫ್ ಅಂಡ್ ಆನ್ ಅನಿವಾರ್ಯ ಎಂಬ ವಾದ ಮಂಡಿಸಿದರು. ಅಲ್ಲದೆ, ಗುರುವಾರ ದಾವಣಗೆರೆ, ಹರಿಹರ ತಾಲ್ಲೂಕುಗಳ ಕೆಲ ಮುಖಂಡರು ಸೊರಬದಲ್ಲಿ ನನ್ನ ಭೇಟಿ ಮಾಡಿ 10 ದಿವಸ ನೀರು ಬಂದ್ ಮಾಡಬೇಡಿ, ಅನಿವಾರ್ಯವಾದರೆ 5 ದಿನ ಬಂದ್ ಮಾಡಿ ಎಂದು ಹೇಳಿದ್ದಾರೆ ಎಂಬ ಅಂಶವನ್ನೂ ಸಭೆಯ ಗಮನಕ್ಕೆ ತಂದರು.

ಏತನ್ಮಧ್ಯೆ ಹರಿಹರ ತಾಲ್ಲೂಕಿನ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಮಾತನಾಡಿ, ಹರಿಹರ ತಾಲ್ಲೂಕಿನಲ್ಲಿ ಮಳೆ ಇಲ್ಲದೆ ಮೆಕ್ಕೆಜೋಳದ ಬೆಳೆ ಹಾಳಾಗಿ ಹೋಗಿದೆ. ಸಾಲ-ಸೋಲ ಮಾಡಿ ಭತ್ತದ ನಾಟಿ ಮಾಡಿರುವ ರೈತರು ಉಳಿಯ ಬೇಕಾದರೆ ನಾಲೆಯಲ್ಲಿ ಸತತವಾಗಿ ನೀರು ಹರಿಸಬೇಕೆಂದು ಮನವಿ ಮಾಡಿದರು.

ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಯ ರೈತರ ಹಿತ ಕಾಪಾಡುವ ದೃಷ್ಟಿಯಿಂದ ಅಧಿಕಾರಿಗಳಿಂದ ನೀರಿನ ಸಂಪೂರ್ಣ ಮಾಹಿತಿ ಪಡೆದು, ಶನಿವಾರ ತೀರ್ಮಾನಕ್ಕೆ ಹೇಳುತ್ತೇನೆಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಇದಕ್ಕೆ ಸಮಾಧಾನಗೊಳ್ಳದ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಈಗಲೇ ತೀರ್ಮಾನ ಹೇಳಿ. ನಮ್ಮ ಜಿಲ್ಲೆಯ ರೈತರು ಆತಂಕದಲ್ಲಿದ್ದಾರೆ ಎಂದಾಗ ಇವತ್ತು ಒಂದು ದಿನ ಸಮಯ ಕೊಡಿ ಎಂದು ಡಿ.ಕೆ. ಶಿವ ಕುಮಾರ್ ಕೇಳಿದಾಗ, ಮಲ್ಲಿಕಾರ್ಜುನ್ ನೀರು ಹರಿಸುವ ತೀರ್ಮಾನ ಮಾಡಿ ಅಷ್ಟೇ ಎಂದರು.



**ಹಿಂದೂ ಮಹಾಗಣಪತಿ ಶೋಭಾಯಾತ್ರೆ**

ದಾವಣಗೆರೆ ಹೈಸ್ಕೂಲ್ ಮೈದಾನದಲ್ಲಿ ಪ್ರತಿಷ್ಠಾಪಿಸಲಾಗಿರುವ ಹಿಂದೂ ಮಹಾಗಣಪತಿ ವಿಸರ್ಜನಾ ಶೋಭಾಯಾತ್ರೆ ಇಂದು ಶನಿವಾರ ನಡೆಯಲಿದ್ದು, ಪಿ.ಬಿ. ರಸ್ತೆ ಸೇರಿದಂತೆ ಪ್ರಮುಖ ರಸ್ತೆ ಹಾಗೂ ವೃತ್ತಗಳು ಕೇಸರಿ ಬಾವುಟಗಳಿಂದ ಸಿಂಗಾರಗೊಂಡಿವೆ.

# ಕೋಡಿ ಕ್ಯಾಂಪ್ ಶ್ರೀ ಕೊಟ್ಟೂರೇಶ್ವರ ದೇವಸ್ಥಾನದಲ್ಲಿಂದು ಅಮಾವಾಸ್ಯೆ ಪೂಜೆ



ದಾವಣಗೆರೆ ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಸಮಿತಿಯಿಂದ ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ಮಹಾಲಯ ಅಮಾವಾಸ್ಯೆ ಪ್ರಯುಕ್ತ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಗೆ ಇಂದು ಬೆಳಿಗ್ಗೆ 7 ರಿಂದ 9ರವರೆಗೆ ಅಭಿಷೇಕ, ವಿಶೇಷ ಪೂಜೆ ನಡೆಯಲಿದೆ. ನಂತರ ಭಕ್ತಾದಿಗಳಿಗೆ ಪ್ರಸಾದ ದಾಸೋಹ ನಡೆಯಲಿದೆ.

ಸದ್ಭಕ್ತರು ಭಾಗವಹಿಸುವಂತೆ ದೇವಸ್ಥಾನ ಸಮಿತಿಯ ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (91089 88898), ಬಿ.ಚಿದಾನಂದಪ್ಪ (98445 28449), ಮಲ್ಲಾಬಾದಿ ಗುರುಬಸವರಾಜ್ (79757 97079) ತಿಳಿಸಿದ್ದಾರೆ. ದಾಸೋಹ ಮನೆ ಮತ್ತು ಸಭಾಂಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಲು ಕೋರಿದೆ.

# ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ನವರಾತ್ರಿ ಅಮಾವಾಸ್ಯೆ ಪೂಜೆ



ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನವರಾತ್ರಿ ಅಮಾವಾಸ್ಯೆ ಪ್ರಯುಕ್ತ ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ಇಂದು ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ. ಶ್ರೀಮತಿ ರೇಣುಕ ಅಮರೇಶ್, ಕಿರಣ್, ಕೀರ್ತಿ ಮತ್ತು ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.


ಅಡಿಕೆ ಸಸಿಗಳು ಮಾರಾಟಕ್ಕಿವೆ
ಚಿತ್ರಹಳ್ಳಿ ಗೋಟಿನ 1.5 - 2 ವರ್ಷದ ಉತ್ತಮ ಅಡಿಕೆ ಸಸಿಗಳು ದಾವಣಗೆರೆ ಹತ್ತಿರದ ಕೈದಾಳ ತೋಟದಲ್ಲಿ ಮಾರಾಟಕ್ಕಿವೆ. ಸಂಪರ್ಕಿಸಿ
2 KG Bag - Rs. 22/-
98807 39392
98807 43838

Gurudatt Academy
NEET-IITJEE-CET-NDA
Tuitions for Class 8th, 9th, 10th, 1st PUC, 2nd PUC, CBSC, ICSE, CET, NEET, IIT-JEE, NDA.
Physics, Chemistry, Maths, Biology
8th, 9th, 10th std - CBSE/ICSE, IIT, JEE/NEET
GURUDATT ACADEMY
Rangmahal, AVK College Road, Davangere.
Call : 97398 65711

ದಾವಣಗೆರೆ ಪೆಟ್ ಕೇರ್
DAVANGERE PET CARE
FREE PET HEALTH CAMP
- Free Consultation
- Free anti-rabies vaccination
- Free deworming
- Free nutritional advice
CAMP DATE AND TIMING
OCTOBER 14TH & 15TH
SATURDAY & SUNDAY
10 TO 5 PM
LUCKY 5
Your pet buddy can win once free bath session this year
MORE GIFT ARE AWAITING FOU YOU AND YOUR PET AS A TOKEN OF GRATITUDE AND LOVE FROM DAVANGERE PET CARE AND OUR SPONSORERS
SPECIAL OFFER :
- 20% Discount on all treats & Accessories
- 20% Discount on Selected Royal Canin Food
- 15% Discount on drools food
- Lucky draw hamper worth Rs 1500/- for 3 Dogs and 3 Cats
To avail above offer T&C:
1. Registration fee to participate in camp Rs. 100/-
2. Minimum Billng Rs. 500/- to Avail Discount
☎ 86606 24350
# 3680/07 C/o. 'SANCHARU', Bapuji Medical Boys Hostel Road, 7th Main, MCC 'B' Block, Davangere.

ಹೃದಯಪೂರ್ವಕ ಕೃತಜ್ಞತೆಗಳು
ದಾವಣಗೆರೆ ಜಿಲ್ಲಾ ವಕ್ಫ್ ಸಲಹಾ ಸಮಿತಿಗೆ ನೂತನವಾಗಿ ನಾಮ ನಿರ್ದೇಶಿತ ಸದಸ್ಯರಾಗಿ ನನ್ನನ್ನು ಆಯ್ಕೆ ಮಾಡಿದ ಶಾಸಕರು, ಗಣಿ, ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರೂ ಆದ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ರಾಜ್ಯ ಅಧ್ಯಕ್ಷರು, ಕಾಂಗ್ರೆಸ್ ಅಲ್ಪಸಂಖ್ಯಾತರ ವಿಭಾಗದ ಕೆ. ಅಬ್ದುಲ್ ಜಬ್ಬಾರ್, ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷರಾದ ಅನ್ವರ್ ಸಾಬ್, ದಾವಣಗೆರೆ ಜಿಲ್ಲಾ ಅಧ್ಯಕ್ಷರು, ವಕ್ಫ್ ಸಲಹಾ ಸಮಿತಿಯ ಮಹಮ್ಮದ್ ಸಿರಾಜ್ ಹಾಗೂ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಪ್ರತಿಯೊಬ್ಬರಿಗೂ ನನ್ನ
ಹೃದಯಪೂರ್ವಕ ಕೃತಜ್ಞತೆಗಳು...
ಶೇಕ್ ಅಹಮ್ಮದ್
ದಾವಣಗೆರೆ ಜಿಲ್ಲಾ ವಕ್ಫ್ ಸಲಹಾ ಸಮಿತಿ ನಾಮ ನಿರ್ದೇಶಿತ ಸದಸ್ಯರು

॥ ಓಂ ಶ್ರೀ ಚಂಡಿಕಾಯೈ ನಮಃ ॥
ಎಲ್ಲರಿಗೂ ನವರಾತ್ರಿಯ ಹಬ್ಬದ ಹಾರ್ದಿಕ ಶುಭಾಶಯಗಳು
ದಿನಾಂಕ : 15-10-2023 ರಿಂದ 24-10-2023 ರ ವರೆಗೆ ಪ್ರತಿನಿತ್ಯ
ಚಂಡಿಕಾ ಹೋಮ
ಅಮ್ಮನವರ ಆಶೀರ್ವಾದ ಸದಾ ಎಲ್ಲರ ಮೇಲೂ ಇರಲಿ
ಶ್ರೀ ನಾಗ ಸುಬ್ರಹ್ಮಣ್ಯ ಸ್ವಾಮಿಗೆ ಪ್ರತಿ ನಿತ್ಯ ಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ಅಷ್ಟೋತ್ತರ ಪೂಜೆ ಆಶ್ಲೇಷ ಬಲಿ ಪೂಜೆ, ಶ್ರೀ ಗಣಪತಿ ಹೋಮ, ಸುಬ್ರಹ್ಮಣ್ಯ ಮೂಲ ಮಂತ್ರ, ಹೋಮ ಹಾಗೂ ಸ್ವಾಮಿಯ ಸೇವಾ ಮತ್ತು ಪ್ರಸಾದ ವಿತರಣೆ
ಸರ್ವರಿಗೂ ಆದರದ ಸುಸ್ವಾಗತ
ಶ್ರೀ ನಾಗ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ
ಹಳೇ ಕಡ್ಲೇಬಾಳು, ದಾವಣಗೆರೆ.

ನಾಳೆಯಿಂದ ಆರಂಭವಾಗುವ ನವರಾತ್ರಿ ಹಬ್ಬದ ಶುಭಾಷಯಗಳು
ಬಾಲಕಿಯರ ವಿದ್ಯಾರ್ಥಿ ನಿಲಯದ ನೂತನ ಕಟ್ಟಡದ ಭೂಮಿ ಪೂಜೆ
ದಿನಾಂಕ 14.10.2023ರ ಶನಿವಾರದಂದು ದಾವಣಗೆರೆ ಜಿಲ್ಲಾ ಪಂಚಾಯತ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ದಾವಣಗೆರೆ ವತಿಯಿಂದ ಶ್ರೀ ದೇವರಾಜ ಅರಸ್ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ (ಬಿಸಿಡಬ್ಲ್ಯೂಡಿ: 1912) ನೂತನ ಕಟ್ಟಡದ ಭೂಮಿ ಪೂಜೆ ಕಾರ್ಯಕ್ರಮ
ಸ್ಥಳ: ಸಪ್ತಗಿರಿ ಶಾಲೆಯ ಹತ್ತಿರ, ಕುಂದುವಾಡ ರಸ್ತೆ, ದಾವಣಗೆರೆ
ಸಮಯ: 12.30 ಗಂಟೆಗೆ
ಈ ಕಾಮಗಾರಿ ಭೂಮಿ ಪೂಜೆಗೆ ಆಗಮಿಸುತ್ತಿರುವ
ಸನ್ಮಾನ್ಯ ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್,
ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು ಅವರಿಗೂ, ದಾವಣಗೆರೆ ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರಿಗೂ, ಮಹಾನಗರ ಪಾಲಿಕೆಯ ಎಲ್ಲಾ ಸದಸ್ಯರುಗಳಿಗೂ, ಕಾಂಗ್ರೆಸ್ ಪಕ್ಷದ ಎಲ್ಲಾ ಮುಖಂಡರುಗಳಿಗೂ, ಕಾರ್ಯಕರ್ತರಿಗೂ, ಅಭಿಮಾನಿಗಳಿಗೂ ಹೃದಯ ಪೂರ್ವಕ ಸ್ವಾಗತ, ಸುಸ್ವಾಗತ.

ದಿ ದಾವಣಗೆರೆ ಕ್ಲಬ್ (ರಿ), ದಾವಣಗೆರೆ
ಪ್ರವಾಸಿ ಮಂದಿರ ರಸ್ತೆ, ದಾವಣಗೆರೆ.
2023-24, 2024-25 ಮತ್ತು 2025-26ನೇ ಸಾಲಿನ 3 ವರ್ಷಗಳ ಅವಧಿಗೆ ಆಡಳಿತ ಮಂಡಳಿ ಚುನಾವಣೆ
ಗೌರವಾನ್ವಿತ ಹಿರಿಯ ಸದಸ್ಯರ ಬೆಂಬಲಿತ ಹಾಗೂ ಹಿರಿಯ ಸದಸ್ಯರು ಆಡಳಿತ ನಡೆಸಿ ಅನುಭವವಿರುವ ಶ್ರೀ ಅನಗೋಡು ನಂಜುಂಡಪ್ಪನವರ ನೇತೃತ್ವದಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳಾದ ನಮಗೆ ತಾವುಗಳು ತಮ್ಮ ಅತ್ಯಮೂಲ್ಯವಾದ ಮತಗಳನ್ನು ನೀಡಿ ಜಯಶೀಲರನ್ನಾಗಿ ಮಾಡಿ ತಮ್ಮಗಳ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕಾಗಿ ವಿನಂತಿಸುತ್ತೇವೆ.

| ಕ್ರ.ಸಂ. | ಹೆಸರು | ಸ್ಥಾನ | ಭಾವಚಿತ್ರ | ಗುರುತು | ಮೊಹರು |
|---|---|---|---|---|---|
| 2 | ನಂಜುಂಡಪ್ಪ ಹೆಚ್. | ಅಧ್ಯಕ್ಷ | | | |
| 2 | ನಾಗರಾಜ್ ಕೆ.ಬಿ. | ಉಪಾಧ್ಯಕ್ಷ | | | |
| 2 | ರಾಜಶೇಖರ್ ಎಂ.ಕೆ. (ಕೃದಾಳ್ ರಾಜು) | ಗೌ. ಕಾರ್ಯದರ್ಶಿ | | | |
| 2 | ಲಿಂಗರಾಜ್ ವಾಲಿ ಹೆಚ್.ಸಿ. | ಗೌ. ಸಹಕಾರ್ಯದರ್ಶಿ | | | |
| 1 | ಇಂದುಧರ್ ಎನ್.ಎಂ. (ನಿಶಾನಿಮಠ್) | ಕೋಶಾಧ್ಯಕ್ಷ | | | |

6 ನಿರ್ದೇಶಕರ ಸ್ಥಾನಗಳು

| ಕ್ರ.ಸಂ. | ಹೆಸರು | ಸ್ಥಾನ | ಭಾವಚಿತ್ರ | ಗುರುತು | ಮೊಹರು |
|---|---|---|---|---|---|
| 2 | ನಾಗರಾಜ್ ಜಿ. (ಪಿ & ಟಿ) | ನಿರ್ದೇಶಕ | | | |
| 3 | ನಾಗರಾಜ್ ಬಿ.ಜಿ. (ಬಸವಾಪಟ್ಟಣ) | ನಿರ್ದೇಶಕ | | | |
| 4 | ಪುಟ್ಟಪ್ಪ ಕಾಶಿಪುರ್ | ನಿರ್ದೇಶಕ | | | |
| 6 | ಬಾದಾಮಿ ಮಲ್ಲಿಕಾರ್ಜುನ | ನಿರ್ದೇಶಕ | | | |
| 10 | ಶ್ರೀಪಂಚಿ ಟಿ.ಕೆ. | ನಿರ್ದೇಶಕ | | | |
| 12 | ಸುಪುತ್ರ ಕುಮಾರ್ ಬಿ.ಟಿ. | ನಿರ್ದೇಶಕ | | | |

ಮತದಾನ ದಿನಾಂಕ : 15-10-2023ನೇ ಭಾನುವಾರ ಬೆಳಗ್ಗೆ 9-00 ರಿಂದ ಮಧ್ಯಾಹ್ನ 3-00 ರವರೆಗೆ
ಮತದಾನ ನಡೆಯುವ ಸ್ಥಳ : ದಿ ದಾವಣಗೆರೆ ಕ್ಲಬ್ (ರಿ.), ದಾವಣಗೆರೆ
ನಮ್ಮ ಧ್ಯೇಯೋದ್ದೇಶಗಳು : ಕ್ಲಬ್‌ನಲ್ಲಿ ದುಂದುವೆಚ್ಚವಿಲ್ಲದೆ ಅಭಿವೃದ್ಧಿ, ಗೌರವಾನ್ವಿತರ ಸದಸ್ಯರಿಗೆ ಅನುಕೂಲವಾಗುವ ಅಭಿವೃದ್ಧಿ ಕಾರ್ಯಕ್ರಮ, ಸದಸ್ಯರಿಗೆ ನಿರ್ವಹಣ ಶುಲ್ಕ ರದ್ದು ಮಾಡುವುದು, ಗ್ರೂಪ್ ಇನ್ಸೂರೆನ್ಸ್ ಮಾಡುವ ಪ್ರಯತ್ನ, ಕ್ಲಬ್‌ಗೆ ಪೂರ್ತಿಯಾಗಿ ಸೋಲಾರ್ ರೂಫ್‌ಟಾಪ್ ಅಳವಡಿಸುವುದು, ಹೆಚ್ಚುವರಿ ಅತಿಥಿಗೃಹ ಕೊಠಡಿಗಳ ನಿರ್ಮಾಣ, ಕಾರ್ ಪಾರ್ಕಿಂಗ್ ನವೀಕರಣ ಹಾಗೂ ಹಲವಾರು ಅಭಿವೃದ್ಧಿ ಕಾರ್ಯಕ್ರಮ ಮಾಡುವುದು ನಮ್ಮ ಉದ್ದೇಶ.
ವಿ.ಸೂ. : ಒಬ್ಬ ಸದಸ್ಯರು ಅಧ್ಯಕ್ಷ, ಉಪಾಧ್ಯಕ್ಷ, ಗೌ॥ ಕಾರ್ಯದರ್ಶಿ, ಗೌ॥ ಸಹಕಾರ್ಯದರ್ಶಿ, ಗೌ॥ ಕೋಶಾಧ್ಯಕ್ಷ ಸ್ಥಾನಗಳಿಗೆ ಒಂದೊಂದು ಮತ್ತು 6 ನಿರ್ದೇಶಕರ ಸ್ಥಾನಗಳಿಗೆ ತಲಾ ಒಂದರಂತೆ ಒಟ್ಟು 11 ಮತಗಳನ್ನು ಮಾತ್ರ ಚಲಾಯಿಸತಕ್ಕದ್ದು